ಸಂಪುಟ: 13 Volume | ಸಂಚಿಕೆ: 239 Issue | ಪುಟಗಳು: 08 Pages | ಶನಿವಾರ 08 ನವೆಂಬರ 2025 | ₹2 | PRGINO. 120927(RNINO:KARKAN/2011/48371) | BDR/054/2026-2027 | mallammanudi@gmail.com | www.mallammanudi.in | 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ

**ಬೆಳಗು**
ಜಗತ್ತು ಬದಲಾಗಬೇಕು ಎನ್ನುವವರುಮೊದಲುತಮ್ಮಿಂದಲೇ ಬದಲಾವಣೆಯಾಗಬೇಕು ಎಂಬುದನ್ನುಅರಿತುಕೊಳ್ಳಬೇಕು.
ಮಹಾತ್ಮ ಗಾಂಧೀಜಿ

4 ಡಿ.13 ರಂದು ರಾಷ್ಟ್ರೀಯ ಲೋಕ್ ಅದಾಲತ್ | 2 ಎತ್ತಿನ ಬಂಡಿ ಓಟ ಆಯೋಜನೆ | 8 ಜಾತ್ರಾ ಮಹೋತ್ಸವದಲ್ಲಿ ಶಾಸಕ ಚವ್ಹಾಣ ಹೆಜ್ಜೆ | 3 ವೈದ್ಯಕೀಯ ಶಿಕ್ಷಣ ಸಚಿವರ ಪ್ರವಾಸ

# ಕಬ್ಬು ಕೋಲಾಹಲಕ್ಕೆ ಮದ್ದು

## ಅನ್ನದಾತನ ಹೋರಾಟಕ್ಕೆ ಜಯ: ಪ್ರತಿ ಟನ್ ಕಬ್ಬಿಗೆ 3,300 ರೂ ನಿಗದಿ

ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು,ನ.6-ಕಬ್ಬುಬೆಳೆಗಾರರಹೋರಾಟಕ್ಕೆ ಮಣಿದರಾಜ್ಯಸರ್ಕಾರಪ್ರತಿಟನ್‌ಕಬ್ಬಿಗೆ3,300 ರೂಪಾಯಿನಿಗದಿಮಾಡಿದೆ. ಕಬ್ಬಿಗೆಹೆಚ್ಚಿನದರ ನಿಗದಿಮಾಡುವಂತೆಬೆಳೆಗಾರರು9 ದಿನಗಳಿಂದ ನಡೆಸುತ್ತಿದ್ದ ಹೋರಾಟಕ್ಕೆ ಕಡೆಗೂ ಫಲ ಸಿಕ್ಕಿದೆ.

ವಿಧಾನಸೌಧದಲ್ಲಿ ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಸಕ್ಕರೆ ಕಾರ್ಖಾನೆ ಮಾಲೀಕರೊಂದಿಗೆನಡೆದಸುದೀರ್ಘಮಾತುಕತೆಯ ಬಳಿಕ ಈ ನಿರ್ಧಾರ ಕೈಗೊಳ್ಳಲಾಗಿದೆ.

3,300 ರೂಪಾಯಿಯಲ್ಲಿ ಕಾರ್ಖಾನೆಗಳು 3,250 ರೂ. ನೀಡಬೇಕಾಗುತ್ತದೆ. ಸರ್ಕಾರ ಸಹಾಯಧನವಾಗಿ 50 ರೂ. ನೀಡಲಿದೆ. ಈ ಪೈಕಿ3,200ರೂಪಾಯಿಯನ್ನಕಾರ್ಖಾನೆಗಳು ಒಂದೇಕಂತಿನಲ್ಲಿಕೊಡಬೇಕು. ಉಳಿದ50ರೂ. 6 ತಿಂಗಳ ನಂತರಕಾರ್ಖಾನೆಗಳುಕೊಡಬೇಕು. 50 ರೂ. ಸಹಾಯಧನ ಸರ್ಕಾರ ನೀಡಲಿದೆ.

ಪ್ರತಿಭಟನೆ ತೀವ್ರಗೊಂಡ ಬೆನ್ನಲ್ಲೇ ಸರ್ಕಾರ ರೈತರು ಮತ್ತು ಕಾರ್ಖಾನೆ ಮಾಲೀಕರ ಜೊತೆ ಸಂಧಾನ ನಡೆಸಿತ್ತು. ರೈತರು ಮತ್ತು ಕಾರ್ಖಾನೆ ಮಾಲೀಕರುತಮ್ಮಹಠದಿಂದಹಿಂದಕ್ಕೆಸರಿಯಾದ ಕಾರಣಜಟಿಲವಾಗಿತ್ತು. ಈಗಸರ್ಕಾರ50ರೂ. ನೀಡುವುದಾಗಿ ಹೇಳಿದ ನಂತರ ಮಾಲೀಕರು ಪಟ್ಟು ಸಡಿಲಿಸಿ 50 ರೂ. ನೀಡುವುದಾಗಿ ಒಪ್ಪಿಕೊಂಡಿದ್ದಾರೆ ಎಂದು ಸಭೆಯ ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ ಸುದ್ದಿಗಾರರಿಗೆ ತಿಳಿಸಿದರು.



### ಸಭೆಯ ಪ್ರಮುಖ ಅಂಶಗಳು

ಸಕ್ಕರೆಗೆ ಎಂಎಸ್‌ಪಿ ನಿಗದಿಪಡಿಸುವುದು ಕೇಂದ್ರ ಸರ್ಕಾರ. ಇದೇ ರೀತಿ ಕಬ್ಬಿಗೆ ಎಫ್ ಆರ್‌ಪಿನಿಗದಿಪಡಿಸುವವರುಕೇಂದ್ರಸರ್ಕಾರ. ಎಥೆನಾಲ್‌ಹಂಚಿಕೆನಿಗದಿಪಡಿಸುವವರುಕೇಂದ್ರ ಸರ್ಕಾರ. ಸಕ್ಕರೆರಪ್ತು ಮಿತಿನಿಗದಿಪಡಿಸುವವರು ಸಹ ಕೇಂದ್ರ ಸರ್ಕಾರ. ರೈತರ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡುಎಫ್‌ಆರ್‌ಪಿನಿಗದಿಪಡಿಸುವುದು ಕೇಂದ್ರ ಸರ್ಕಾರದ ಕೆಲಸ. ಕೇಂದ್ರ ಸರ್ಕಾರ ದಿನಾಂಕ 6-05-2025ರಂದು ಕಬ್ಬಿಗೆ ಎಫ್ ಆರ್‌ಪಿನಿಗದಿಪಡಿಸಿದೆ. ಈ ಎಫ್‌ಆರ್‌ಪಿಯಲ್ಲಿ ಸಾಗಾಟ ಮತ್ತು ಕಟಾವು ವೆಚ್ಚ ಸಹ ಸೇರಿದೆ. ಸಕ್ಕರೆಯ ಎಂಎಸ್‌ಪಿ ಹೆಚ್ಚಳ ಮಾಡುವಂತೆ ಈ ಹಿಂದೆಯೇ ಕೇಂದ್ರ ಸರ್ಕಾರಕ್ಕೆ ನಾವು ಮನವಿ ಸಲ್ಲಿಸಿದ್ದೇವೆ. ಆದರೆಕೇಂದ್ರಸರ್ಕಾರಇದುವರೆಗೆ ಎಂಎಸ್‌ಪಿಹೆಚ್ಚಳಮಾಡಿಲ್ಲ. ಕೇಂದ್ರಸರ್ಕಾರಕಬ್ಬಿಗೆ ನಿಗದಿಪಡಿಸಿರುವಎಫ್‌ಆರ್‌ಪಿವೈಜ್ಞಾನಿಕವಾಗಿಲ್ಲ. ಸಕ್ಕರೆಕಾರ್ಖಾನೆಗಳುಇಳುವರಿರಿಕವರಿಕಡಿಮೆ ತೋರಿಸುತ್ತಿವೆ. ಇದನ್ನುತಪ್ಪಿಸಲುಪ್ರತಿಕಾರ್ಖಾನೆ ಎದುರು 2ನೇ ಪುಟನೋಡಿ

## ಕಚೇರಿ ಕೆಲಸಕ್ಕೆ ಅಡ್ಡಿ: ಗ್ರಾ. ಪಂ ಮಾಜಿ ಅಧ್ಯಕ್ಷನ ಬಂಧನ



ಮಲ್ಲಮ್ಮನುಡಿವಾರ್ತೆ

ಬೀದರ್.ನ. 07 :- ಹುಮನಾಬಾದಕಚೇರಿಯ ಕೆಲಸಕ್ಕೆಅಡ್ಡಿಪಡಿಸಿದ್ದಲ್ಲದೇ ತಾ.ಪಂ.ಕಾರ್ಯನಿರ್ವಾಹಕ ಅಧಿಕಾರಿದಿಪೀಕಾನಾಯ್ಕರ್ ಅವರಿಗೆ ಏಕವಚನದಲ್ಲಿ ಮಾತನಾಡಿದ್ದ ಹಿನ್ನೆಲೆ ಚಂದನ್ನಳ್ಳಿ ಗ್ರಾ.ಪಂ. ಮಾಜಿ ಅಧ್ಯಕ್ಷ, ಹಾಲಿ ಸದಸ್ಯ ದಸ್ತಗಿರ್ ಪಟೇಲ್ ಅವರನ್ನು ಹುಮನಾಬಾದ್ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಘಟನೆ ವಿವರ: ಅ.28ರಂದು ಸಂಜೆ ತಾ.ಪಂ. ಕಚೇರಿಗೆ ದಸ್ತಗಿರ್ ಪಟೇಲ್ ಬಂದಿದ್ದರು. ನಾನು ಕಚೇರಿಯ ನನ್ನ ಕೊಠಡಿಯಲ್ಲಿ ಬೇರೊಬ್ಬ ಸಾರ್ವಜನಿಕಸಂಭಾಷಣೆಯಲ್ಲಿದ್ದವೇಳೆದಸ್ತಗಿರ್‌ಪಟೇಲ್‌ಅವರಿಗೆಐದು ನಿಮಿಷ ಬಿಟ್ಟು ಬನ್ನಿ ಎಂದು ಕಚೇರಿಯ ಸಿಬ್ಬಂದಿ ಅಶೋಕ ಅವರಿಂದ ಹೇಳಿಸಿದ್ದೆ. ಆದರೆ, ಅವರು ಒಳಗೆ ನುಗ್ಗಿ ಬಂದಿದ್ದರು.

ಐದು ನಿಮಿಷದ ನಂತರ ಬನ್ನಿ ಎಂದು ನಾನೇ ವಿನಂತಿ ಮಾಡಿದರು ಸಹ ಅವರು ಹೋಗಿಲ್ಲ. ನಂತರ ದಸ್ತಗಿರ್ ಪಟೇಲ್ ಅವರು ಏರುಧ್ವನಿಯಲ್ಲಿ ನಾನು ಹೋಗುವುದಿಲ್ಲಎಂದು ಏಕವಚನದಲ್ಲಿನನ್ನೊಂದಿಗೆ ಮಾತನಾಡಿ, ಕಚೇರಿಯಕೆಲಸಕ್ಕೆಅಡ್ಡಿಪಡಿಸಿದ್ದಾರೆ. ನಾನುಮಹಿಳಾಅಧಿಕಾರಿಇರುವುದಿಂದ ಉದ್ದೇಶಪೂರ್ವಕವಾಗಿ 2ನೇ ಪುಟನೋಡಿ

## ಸಫಾಯಿ ಕರ್ಮಚಾರಿಗಳಿಗೆ ಕಾನೂನಾತ್ಮಕವಾಗಿಎಲ್ಲಸೌಲಭ್ಯ ಸಿಗಬೇಕು

ಮಲ್ಲಮ್ಮನುಡಿ ವಾರ್ತೆ

ಬಳ್ಳಾರಿ,ನ.07:ಸಫಾಯಿ ಕರ್ಮಚಾರಿಗಳಾಗಿ ಕಾರ್ಯನಿರ್ವಹಿಸುವ ಪೌರಕಾರ್ಮಿಕರಿಗೆಸರ್ಕಾರದಿಂದಕಾನೂನಾತ್ಮಕವಾಗಿಸಿಗಬೇಕಾದಎಲ್ಲ ಸೌಕರ್ಯ, ಸೌಲಭ್ಯಗಳನ್ನು ಪೂರೈಸುವುದುಆಯಾನಗರಸ್ಥಳೀಯ-ಸಂಸ್ಥೆಗಳ ಮುಖ್ಯಾಧಿಕಾರಿಗಳ ಕರ್ತವ್ಯವಾಗಿದೆ ಎಂದು ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ಹೇಳಿದರು. ಶುಕ್ರವಾರ ನಗರದ ನೂತನ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಅಧಿನಿಯಮದಡಿ ರಚಿತವಾದ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ/ ಸಫಾಯಿ ಕರ್ಮಚಾರಿಗಳ ಜಿಲ್ಲಾ ಮಟ್ಟದಜಾಗೃತಿಸಮಿತಿಸಭೆಯಅಧ್ಯಕ್ಷತೆವಹಿಸಿಅವರುಮಾತನಾಡಿದರು.

ಜಿಲ್ಲೆಯಲ್ಲಿಸಫಾಯಿಕರ್ಮಚಾರಿಗಳಿಗೆವಸತಿಮತ್ತುಪುನರ್ವಸತಿಹಾಗೂ



ಪೌರಕಾರ್ಮಿಕರಿಗೆವಿವಿಧಸೌಲಭ್ಯ ಒದಗಿಸಲುಕ್ರಮವಹಿಸಬೇಕು. ಸಫಾಯಿ ಕರ್ಮಚಾರಿಗಳಿಗೆನಿಗದಿತಸಮಯಕ್ಕೆನಿಗದಿಪಡಿಸಿದವೇತನಪಾವತಿಸುವುದು ಹಾಗೂ ವಿವಿಧ ಸೌಲಭ್ಯಗಳನ್ನು ದೊರಕಿಸಿಕೊಡುವುದು ಅಧಿಕಾರಿಗಳ ಜವಾಬ್ದಾರಿಯಾಗಿದೆ ಎಂದು ತಿಳಿಸಿದರು. ಮ್ಯಾನ್ಯುವೆಲ್ ಸ್ಕ್ಯಾವೆಂಜರ್ಸ್ ಕುಟುಂಬಗಳ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂತಹ ಪ್ರವೇಶ ಶುಲ್ಕ, ವಿದ್ಯಾರ್ಥಿವೇತನ, ಲ್ಯಾಪ್ ಟಾಪ್ ವಿತರಣೆಹಾಗೂಇತರೆಸೌಲಭ್ಯ ಒದಗಿಸಲು ಮುತುವರ್ಜಿ ವಹಿಸಬೇಕು ಎಂದರು. 2ನೇ ಪುಟನೋಡಿ

## ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ವಿದ್ಯಾರ್ಥಿಗಳಿಗೆ ಶಾಸಕ ಅಲ್ಲಮಪ್ರಭು ಪಾಟೀಲ್ ಕರೆ



ಮಲ್ಲಮ್ಮನುಡಿ ವಾರ್ತೆ

ಕಲಬುರಗಿ:ಸರಕಾರಿಮಹಾವಿದ್ಯಾಲಯ (ಸ್ವಾಯತ್ತ) ಪಿ. ಜಿ. ಬಿಲ್ಡಿಂಗ್ ಸಭಾಂಗಣದಲ್ಲಿಕಾಲೇಜುಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಸರಕಾರಿ ಮಹಾವಿದ್ಯಾಲಯ (ಸ್ವಾಯತ್ತ), (ನ್ಯಾಕ್ ನಿಂದ ಬಿ+ ಶ್ರೇಣಿ ಮರು ಮಾನ್ಯತೆ ಪಡೆದಿದೆ), 2025-26 ನೇಯ ಶೈಕ್ಷಣಿಕ ಸಾಲಿನ ವಿವಿಧ ಘಟಕಗಳಾದಸಾಂಸ್ಕೃತಿಕ, ಕ್ರೀಡಾ, ಎನ್.ಎಸ್.ಎಸ್., ಎನ್.ಸಿ.ಸಿ., ರೆಡ್ ಕ್ರಾಸ್, ರೆಡ್‌ರಿಬ್ಬನ್, ಸೌಟ್ಸ್ ಮತ್ತು ಗೈಡ್ಸ್, ಡಾ.ಬಿ.ಆರ್.ಅಂಬೇಡ್ಕರ ವೇದಿಕೆ, ಕಾರ್ಯಚಟುವಟಿಕೆಗಳ ಸಮಾರಂಭವನ್ನು ಶಾಸಕರುಹಾಗೂ ಕಾಲೇಜುಅಭಿವೃದ್ಧಿಸಮಿತಿಅಧ್ಯಕ್ಷರಾದ ಅಲ್ಲಮಪ್ರಭುಪಾಟೀಲ್ ಅವರು ಉದ್ಘಾಟಿಸಿ ಮಾತನಾಡುತ್ತಾ ಇವತ್ತಿನ ವಿದ್ಯಾರ್ಥಿಗಳುಪಠ್ಯದ ಜೊತೆಗೆ ಪಠ್ಯೇತರಚಟುವಟಿಕೆಗಳಲ್ಲಿತೊಡಗಿಸಿಕೊಂಡು ತಮ್ಮ ಪ್ರತಿಭೆಯನ್ನು ಅನಾವರಣಗೊಳಿಸಬೇಕು ಒಂದು ಸಮಯದಲ್ಲಿ ಹೆಣ್ಣುಮಕ್ಕಳೆಂದರೆ ಕೇವಲಅಡುಗೆಮನೆಗೆಸೀಮಿತವನ್ನಾಗಿ ಮಾಡಲಾಗಿತ್ತು ಆದರೆ ಸ್ವಾತಂತ್ರ್ಯ ನಂತರಡಾ.ಬಿ.ಆರ್ ಅಂಬೇಡ್ಕರ್ 2ನೇ ಪುಟನೋಡಿ

## ವಿವಿಧೆಡೆದಾಳಿ: ಬಾಲ, ಕಿಶೋರ ಕಾರ್ಮಿಕಮಕ್ಕಳರಕ್ಷಣೆ

ಮಲ್ಲಮ್ಮನುಡಿ ವಾರ್ತೆ

ಬಳ್ಳಾರಿ,ನ.07:ಸಿರುಗುಪ್ಪಹಾಗೂ ಕಂಪ್ಲಿಪಟ್ಟಣದವಿವಿಧಸ್ಥಳಗಳಲ್ಲಿನ ಗ್ಯಾರೇಜ್, ಮೆಕ್ಯಾನಿಕ್‌ಶಾಪ್, ಕಟ್ಟಡ ನಿರ್ಮಾಣಕೆಲಸ, ಬೇಕರಿಇತ್ಯಾದಿ ಉದ್ದಿಮೆಗಳಮೇಲೆಬಾಲಕಾರ್ಮಿಕ ಹಾಗೂಕಿಶೋರಕಾರ್ಮಿಕರಟಾಸ್ಕ್ ಫೋರ್ಸ್‌ಸಮಿತಿಯುದಾಳಿನಡೆಸಿ 06 ಬಾಲಕಾರ್ಮಿಕಮತ್ತುಕಿಶೋರ ಕಾರ್ಮಿಕಮಕ್ಕಳನ್ನು ರಕ್ಷಿಸಲಾಗಿದೆ.

ಮಕ್ಕಳ ಹೇಳಿಕೆಗಳನ್ನು ಸ್ಥಳದಲ್ಲಿ ಪಡೆದುಕೊಂಡುಎಲ್ಲಾಮಕ್ಕಳನ್ನು ಪುನರ್ವಸತಿಗಾಗಿಮಕ್ಕಳಕಲ್ಯಾಣ ಸಮಿತಿಮುಂದೆಹಾಜರುಪಡಿಸಲಾಗಿದೆ. ಎಲ್ಲಾ ಉದ್ದಿಮೆಗಳ ಮಾಲೀಕರಿಗೆ ಕರಪತ್ರ ಹಾಗೂಪೋಸ್ಟರ್‌ಗಳನ್ನು ನೀಡಿಜಾಗೃತಿಮೂಡಿಸಲಾಯಿತು.




ಜಿಲ್ಲಾಧಿಕಾರಿಯವರನಿರ್ದೇಶನದ ಮೇರೆಗೆಜಿಲ್ಲಾಕಾನೂನುಸೇವೆಗಳ ಪ್ರಾಧಿಕಾರ, ತಾಲೂಕು ಟಾಸ್ಕ್ ಪೋರ್ಸ್ ಸಮಿತಿ ಅಧ್ಯಕ್ಷರಾದ ತಹಶೀಲ್ದಾರರ ನೇತೃತ್ವದಲ್ಲಿ ಬಾಲಕಾರ್ಮಿಕ ಹಾಗೂ ಕಿಶೋರ ಕಾರ್ಮಿಕರಟಾಸ್ಕ್‌ಪೋರ್ಸ್‌ಸಮಿತಿ ಸಭೆನಡೆಸಿಈದಾಳಿಕೈಗೊಳ್ಳಲಾಗಿದೆ.

ಟಾಸ್ಕ್ ಪೋರ್ಸ್ ಸಮಿತಿಯಲ್ಲಿ ಕಾರ್ಮಿಕನಿರೀಕ್ಷಕರಾದತಿರುಮಲೇಶ್, ಶಿವಶಂಕರ್, ಜಿಲ್ಲಾಬಾಲಕಾರ್ಮಿಕ ಯೋಜನೆಯಯೋಜನಾನಿರ್ದೇಶಕ ಮೌನೇಶ್, ಗ್ರೇಡ್-2 ತಹಶೀಲ್ದಾರ ಬಸವರಾಜ್, ಶಿಕ್ಷಣ ಇಲಾಖೆಯ ಶಿಕ್ಷಣ ಸಂಯೋಜಕ ಬಸವರಾಜ್, ಪೋಲಿಸ್ ಸಬ್ ಇನ್ಸ್ ಪೆಕ್ಟರ್ ಅವಿನಾಶ್ ಕಾಬ್ಳೆ, ಪಂಚಾಯತ್‌ರಾಜ್‌ಇಲಾಖೆಯ ಸಹಾಯಕನಿರ್ದೇಶಕಮಲ್ಲನಗೌಡ, ಮಕ್ಕಳ ಸಹಾಯವಾಣಿ 2ನೇ ಪುಟನೋಡಿ

### ಮೋದಿಗೆ ಸಿಎಂ ಪತ್ರ, ಬರೆದದ್ದು ಮೂರ್ಖತನ ಎಂದ ಜೋಶಿ

## ಫಡ್ನವೀಸ್ ಸಹ ಮೂರ್ಖರಾ ಅಂತ ಪ್ರಿಯಾಂಕ್ ಖರ್ಗೆ ಪ್ರಶ್ನೆ



ಬೆಂಗಳೂರು: ರಾಜ್ಯದಕಬ್ಬುಬೆಳೆಗಾರರಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಕೇಂದ್ರ ಸರ್ಕಾರದ ಮಧ್ಯಪ್ರವೇಶವನ್ನು ಕೋರಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಧಾನಿ ನರೇಂದ್ರ ಮೋದಿಯವರ ಭೇಟಿಗೆ ಸಮಯ ಕೇಳಿ ಪತ್ರ ಬರೆದಿದ್ದರು. ಈ ಬಗ್ಗೆ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿಯವರು ಟೀಕೆ ಮಾಡಿದ್ದ ವಿಚಾರ ಇದೀಗ ತೀವ್ರ ರಾಜಕೀಯ ಚರ್ಚೆಗೆ ಗ್ರಾಸವಾಗಿದೆ.

ಪ್ರಧಾನಿಗೆ ಸಿಎಂ ಸಿದ್ದರಾಮಯ್ಯ ಪತ್ರ ಬರೆದ ಕ್ರಮವನ್ನು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಅವರು ಮೂರ್ಖತನ ಎಂದು ಟೀಕಿಸಿದ್ದರು. ಈ ಹೇಳಿಕೆಗೆ ಸಚಿವ ಪ್ರಿಯಾಂಕ್ ಖರ್ಗೆ ಅವರು ಉದಾಹರಣೆ ಕೊಡುವ ಮೂಲಕ ತಿರುಗೇಟು ಕೊಟ್ಟಿದ್ದಾರೆ. ಎಕ್ಸ್ ನಲ್ಲಿ ಬಿಜೆಪಿ ವಿರುದ್ಧ ಕಿಡಿಕಾರಿ, ಬಿಜೆಪಿ ಸಂಸದ ಜವಾಬ್ದಾರಿ ನೆನಪಿಸುವ ಟ್ವೀಟ್ ಹಂಚಿಕೊಂಡಿದ್ದಾರೆ

### ಜಿಲ್ಲಾಸ್ಯಾಟ್‌ಲೈಟ್ ಮೀಡಿಯಾ ಅಸೋಸಿಯೇಷನ್‌ನಿಂದ ಗೃಹ ಸಚಿವರಿಗೆ ಮನವಿಪತ್ರ

## ಪತ್ರಕರ್ತನ ಮೇಲೆ ಹಲ್ಲೆ: ಕ್ರಮಕ್ಕೆ ಆಗ್ರಹ



ಮಲ್ಲಮ್ಮನುಡಿ ವಾರ್ತೆ

ಬೀದರ್. ನ. 07 :- ಗದಗ ನಗರದಲ್ಲಿ ಪತ್ರಕರ್ತನ ಮೇಲೆ ಹಲ್ಲೆನಡೆಸಿದವರ ವಿರುದ್ಧ ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾ ಸ್ಯಾಟ್‌ಲೈಟ್ ಮೀಡಿಯಾ ಅಸೋಸಿಯೇನ್ ಆಗ್ರಹಿಸಿದೆ. ಅಸೋಸಿಯೇಷನ್‌ಪದಾಧಿಕಾರಿಗಳು ನಗರದಲ್ಲಿಶುಕ್ರವಾರನಿಯೋಗದಲ್ಲಿಜಿಲ್ಲಾಧಿಕಾರಿ ಕಚೇರಿಗೆತೆರಳಿಗೃಹಸಚಿವಡಾ.ಜಿ.ಪರಮೇಶ್ವರ್ ಅವರಿಗೆಬರೆದಮನವಿಪತ್ರವನ್ನು ಬೀದರ್ ಉಪ ವಿಭಾಗಾಧಿಕಾರಿಮುಹಮ್ಮದ್‌ಶಕೀಲ್ ಅವರಿಗೆ ಸಲ್ಲಿಸಿದರು. ಮತದಾರರಪಟ್ಟಿಗೆಅಕ್ರಮವಾಗಿ ಹೆಸರುಸೇರ್ಪಡೆಮಾಡಲಾಗುತ್ತಿದೆಎಂಬಮಾಹಿತಿ ಹಿನ್ನೆಲೆಯಲ್ಲಿವರದಿಮಾಡಲುಬಿಜೆಪಿಯವಿಧಾನ ಪರಿಷತ್ ಸದಸ್ಯ ಎಸ್.ವಿ. ಸಂಕನೂರ ಅವರ ಜನ ಸಂಪರ್ಕ ಕಚೇರಿಗೆ ಹೋಗಿದ್ದ ನ್ಯೂಸ್ ಫಸ್ಟ್ ವರದಿಗಾರ ಸುರೇಶ್ ಕಡ್ಡಿಮಟ್ಟಿ ಅವರ ಮೇಲೆಹಲ್ಲೆನಡೆಸಲಾಗಿದೆಎಂದುನಿಯೋಗದ ನೇತೃತ್ವ ವಹಿಸಿದ್ದ ಅಸೋಸಿಯೇಷನ್ ಅಧ್ಯಕ್ಷ ಮಲ್ಲಿಕಾರ್ಜುನ ಮರಕಲೆ ತಿಳಿಸಿದರು.

ವಿಡಿಯೋಮಾಡಿಕೊಂಡುಬರುವಾಗವರದಿಗಾರನ ಕ್ಯಾಮೆರಾಕಸಿಯಲುಯತ್ನಿಸಲಾಗಿದೆ. ಸಂಕನೂರ ವರದಿಗಾರನ ಕೈ, ಕೊರಳಪಟ್ಟಿ ಹಿಡಿದು ಹಲ್ಲೆಗೆ ಪ್ರಚೋದನೆನೀಡಿದ್ದಾರೆ. ಕಾರ್ಯಕರ್ತರುಹಲ್ಲೆ ನಡೆಸಿದ್ದಾರೆ ಎಂದು ದೂರಿದರು.

ಪತ್ರಿಕಾ ರಂಗ ಪ್ರಜಾಪ್ರಭುತ್ವದ ನಾಲ್ಕನೇ ಅಂಗವಾಗಿದೆ. ಪತ್ರಕರ್ತನ ಮೇಲೆ ನಡೆದ ಹಲ್ಲೆಯನ್ನು ತೀವ್ರವಾಗಿ ಖಂಡಿಸಲಾಗುತ್ತದೆ ಎಂದು ಹೇಳಿದರು.

ಸಂಕನೂರ ಕೂಡಲೇ ಕ್ಷಮೆಯಾಚಿಸಬೇಕು. ಸಂಕನೂರಹಾಗೂ ಅವರ ಬೆಂಬಲಿಗರ ವಿರುದ್ಧ ಸರ್ಕಾರಕಾನೂನುಕ್ರಮಜರುಗಿಸಬೇಕುಎಂದು ಆಗ್ರಹಿಸಿದರು.

ಅಸೋಸಿಯೇಷನ್ ಗೌರವಾಧ್ಯಕ್ಷ ರಾಜ ಕುಮಾರಸ್ವಾಮಿ, ಕಾರ್ಯಾಧ್ಯಕ್ಷಮಲ್ಲಿಕಾರ್ಜುನ ನಾಗರಾಳ, ಉಪಾಧ್ಯಕ್ಷರಾದಎಲ್.ಆರ್.ಕೃಷ್ಣ, ಸಂಜುಕುಮಾರಬುಕ್ಕಾ, ಪ್ರಧಾನಕಾರ್ಯದರ್ಶಿ ಸುರೇಶ್‌ನಾಯ್ಕ್, ಅನಿಲಕುಮಾರದೇಶಮುಖ, ಓಂಕಾರ ಮಠಪತಿ, ನಂದಕುಮಾರ ಕರಂಜೆ, ವಿಶ್ವಕುಮಾರ ಕಲ್ಲಾ, ಲಿಂಗರಾಜ ಮರಕಲೆ, ಶಿವಾನಂದಅಮರಗೋಳ, ದುರ್ಗಪ್ಪಹೊಸಮನಿ, ಶಿವಯ್ಯ ಮಠಪತಿ, ಕಲ್ಲಪ್ಪಹಳ್ಳದಕೇರಿ, ಅಮರೇಶ ಹಿರೇಮಠ, ಮಹೇಶಸಜ್ಜನಶೆಟ್ಟಿ, ಆಸಿಫ್ ಚಿದ್ರಿ, ಭರತಮರಕಲೆ, ಶರಣಯ್ಯ ಸ್ವಾಮಿ, ದೇವರಾಜ ಇದ್ದರು.

### ಚಿತ್ತಾಪುರ ಪಥ ಸಂಚಲನ ವಿಚಾರಣೆ

## ನ.13ಕ್ಕೆ ಮುಂದೂಡಿದ ಕಲಬುರಗಿ ಹೈಕೋರ್ಟ್ ಪೀಠ

ಕಲಬುರಗಿ: ಚಿತ್ತಾಪುರ ಪಟ್ಟಣದಲ್ಲಿ ರಾಷ್ಟ್ರೀಯ ಸ್ವಯಂ ಸೇವಾ ಸಂಘ(ಆರ್‌ಎಸ್‌ಎಸ್) ನಡೆಸಲು ಉದ್ದೇಶಿಸಿರುವ ಪಥ ಸಂಚಲನದ ಅರ್ಜಿ ವಿಚಾರಣೆಯನ್ನು ಕಲಬುರಗಿ ಹೈಕೋರ್ಟ್ ಪೀಠ ನವೆಂಬರ್ 13ಕ್ಕೆ ಮುಂದೂಡಿದೆ. ಇಂದು(ನ.7)ರಂದುನಡೆದವಿಚಾರಣೆಯಲ್ಲಿಅರ್ಜಿದಾರರು ಮತ್ತು ಜಿಲ್ಲಾಡಳಿತದ ಪರ ವಕೀಲರ ವಾದ-ಪ್ರತಿವಾದಗಳನ್ನು ಆಲಿಸಿದ ಹೈಕೋರ್ಟ್ ನ್ಯಾಯಮೂರ್ತಿ ಎಂಜಿಎಸ್ ಕಮಲ ಅವರಿದ್ದ ಪೀಠವು ನ.13ಕ್ಕೆ ಮುಂದೂಡಿತು. ಈಗಾಗಲೇ ಮೂರು ಬಾರಿ ಅರ್ಜಿ ವಿಚಾರಣೆ ಮುಂದೂಡಲಾಗಿತ್ತು. ಇಂದು ಅಂತಿಮ ತೀರ್ಪು ಪ್ರಕಟಣೆಯಾಗುವ ನಿರೀಕ್ಷೆಯಲ್ಲಿಎಲ್ಲೆಡೆಕುತೂಹಲಮನೆಮಾಡಿತ್ತು. ಆದರೆ, ಮತ್ತೆ ವಿಚಾರಣೆ ಮುಂದೂಡಲಾಗಿದೆ. ಅರ್ಜಿದಾರರ ಪರವಾಗಿ ಹಿರಿಯ ವಕೀಲ ಅರುಣ್ ಶ್ಯಾಮ್ ವಾದ ಮಂಡಿಸಿ, ?ಹೈಕೋರ್ಟ್ ಸಲಹೆಯಂತೆ ಶಾಂತಿ ಸಭೆ ಉತ್ತಮವಾಗಿ ನಡೆದಿದೆ. ನಾವು ನಮ್ಮ ಪ್ರಸ್ತಾವನೆಯನ್ನು ಜಿಲ್ಲಾಡಳಿತಕ್ಕೆ ಸಲ್ಲಿಸಿದ್ದೇವೆ. ಸರ್ಕಾರದ ನಿರ್ಧಾರವನ್ನು ಅಡ್ವೊಕೇಟ್ ಜನರಲ್ ಅವರು ನ್ಯಾಯಾಲಯಕ್ಕೆ ತಿಳಿಸಬೇಕು' ಎಂದು ಹೇಳಿದರು. ಕಾರ್ಯಕ್ರಮಕ್ಕೆ ಪ್ರತ್ಯೇಕ ದಿನ ನಿಗದಿ

ಇದಕ್ಕೆಪ್ರತಿಕ್ರಿಯಿಸಿದಜಿಲ್ಲಾಡಳಿತದಪರವಕೀಲರಾದಅಡ್ವೊಕೇಟ್‌ಜನರಲ್ (ಎಜಿ) ಶಶಿಕಿರಣ್ ಶೆಟ್ಟಿ, ಪಥಸಂಚಲನಕ್ಕಾಗಿ ಒಟ್ಟು 11 ಸಂಘಟನೆಗಳು ಅರ್ಜಿಗಳು ಸಲ್ಲಿಸಿವೆ. ಅವುಗಳನ್ನು ಪರಿಶೀಲನೆ ಮಾಡಲಾಗುತ್ತಿದೆ. ಪ್ರತಿಯೊಂದುಸಂಘಟನೆಗೂಪ್ರತ್ಯೇಕದಿನಗಳಲ್ಲಿಕಾರ್ಯಕ್ರಮನಡೆಸಲು ಅವಕಾಶ ನೀಡಲು ಚಿಂತನೆ ನಡೆಸಲಾಗುತ್ತಿದೆ. ಇದಕ್ಕಾಗಿ ಒಂದು ವಾರದ ಕಾಲಾವಕಾಶ ಬೇಕು'ಎಂದು ನ್ಯಾಯಾಲಯಕ್ಕೆ ಮನವಿ ಮಾಡಿದರು.

**ವರದಿಗಾರರು ಬೇಕಾಗಿದ್ದಾರೆ**

ಕನ್ನಡ ಕಿರಣ
ಮಲ್ಲಮ್ಮ ನುಡಿ
ಪ್ರಾದೇಶಿಕ ಕನ್ನಡ ದಿನಪತ್ರಿಕೆ | ಸಂಪಾದಕರು: ರಮೇಶರೆಡ್ಡಿ | 9448 604450
Mallammanudi Regional News Paper | Editor: Ramesh Reddy | RNI NO:KARKAN/2011/48371

ಪ್ರಾದೇಶಿಕ ಕನ್ನಡ ದೈನಿಕ

ಬೀದರ, ಕಲ್ಬುರ್ಗಿ, ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ, ಬಾಗಲಕೋಟೆ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟವಾಗುತ್ತಿರುವ ನಮ್ಮ ಪತ್ರಿಕೆಗೆ ಮೇಲಿನ ಎಲ್ಲಾ ಜಿಲ್ಲೆಗಳಲ್ಲಿ ಜಿಲ್ಲೆ ಹಾಗೂ ತಾಲೂಕುಗಳಿಗೆ ಅರೆಕಾಲಿಕ ವರದಿಗಾರರು ಬೇಕಾಗಿದ್ದಾರೆ. ಆಸಕ್ತರು ಕೂಡಲೆ ಈ ಕೆಳಗಿನ ಇಮೇಲ್ ಗೆ ತಮ್ಮ ಪೂರ್ಣ ವಿವರದೊಂದಿಗೆ ಅರ್ಜಿ ಕಳುಹಿಸಿ ಕೊಡಬಹುದು.

mallammanudi@gmail.com

ಅನುಭವ ಇರುವವರಿಗೆ ಮೊದಲ ಆದ್ಯತೆ
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
ಮೋ : 9901216023

ಮುಂದಿನ ವರ್ಷವೂ ಚೆನ್ನೈ ಪರ ಆಡಲಿರುವ ಧೋನಿ ಸಿಎಸ್‌ಕೆ ಸ್ಪಷ್ಟನೆ

## ಒಂದನೇ ಪುಟದಿಂದ

## ಸಫಾಯಿ ಕರ್ಮಚಾರಿಗಳಿಗೆ

ಸುರಕ್ಷಾ ಪರಿಕರ ಧರಿಸಿ ಕಾರ್ಯ ನಿರ್ವಹಿಸಲು ಅರಿವು ಮೂಡಿಸಿ:

ಜಿಲ್ಲಾ ವ್ಯಾಪ್ತಿಯ ಮಹಾನಗರ ಪಾಲಿಕೆ, ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಹಾಗುಗ್ರಾಮಪಂಚಾಯತ್‌ಗಳಲ್ಲಿಕಾರ್ಯನಿರ್ವಹಿಸುತ್ತಿರುವ ಸ್ವಚ್ಛತಾ ಸಿಬ್ಬಂದಿ, ಕಾರ್ಮಿಕರು, ಪೌರಕಾರ್ಮಿಕರು ತಪ್ಪದೇ ಸುರಕ್ಷಾ ಪರಿಕರಗಳನ್ನುಧರಿಸಿಕಾರ್ಯನಿರ್ವಹಿಸಲುಸೂಚಿಸಬೇಕು.ಸುರಕ್ಷತೆಗಾಗಿ ಮತ್ತು ಆರೋಗ್ಯ ಹಿತದೃಷ್ಟಿಯಿಂದ ತಪ್ಪದೇ ಸುರಕ್ಷತಾ ಪರಿಕರಗಳನ್ನು ಧರಿಸಲುತಿಳಿಸಬೇಕು.ಈಕುರಿತುಪರಿಸರಅಭಿಯಂತರರುಮೇಲ್ವಿಚಾರಣೆ ನಡೆಸಬೇಕುಎಂದುಸೂಚಿಸಿದರು.ಜಿಲ್ಲಾಮಟ್ಟದಜಾಗೃತಿಸಮಿತಿಸದಸ್ಯರಾದ ಕಂದಕೂರ ರಾಮುಡು ಅವರು ಮಾತನಾಡಿ, ಪಾಲಿಕೆ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ರಹಿತ ಪೌರಕಾರ್ಮಿಕರಿಗೆ ಕಳೆದ 10 ವರ್ಷಗಳಿಂದಯಾವುದೇನಿವೇಶನ,ವಸತಿಸೌಲಭ್ಯನೀಡಿಲ್ಲ.ಆದರೆಅದೇ ಸ್ಥಾನದಲ್ಲಿರುವ ಅಧಿಕಾರಿಗಳು ಮಾತ್ರ ಮುಂಬಡ್ತಿ ಹೊಂದುತ್ತಿದ್ದಾರೆಯೇ ವಿನಃ ಪೌರಕಾರ್ಮಿಕರಿಗೆ ಮಾತ್ರ ಸೌಲಭ್ಯ ನೀಡಲಾಗುತ್ತಿಲ್ಲಎಂದು ಸಭೆಗೆ ತಿಳಿಸಿದರು.ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ಪ್ರತಿಕ್ರಿಯಿಸಿ,

ನಗರದಲ್ಲಿಪಾಲಿಕೆಒಡೆತನದಎಲ್ಲಾಜಾಗಗಳನ್ನುಒತ್ತುವರಿಮಾಡಲಾಗುತ್ತಿದೆ. ಆದರೂ ಅವರಿಗೆ ನಿವೇಶನ ಸೌಲಭ್ಯ ಒದಗಿಸಲಾಗುತ್ತಿಲ್ಲ. ಈ ಕೂಡಲೇ ನಗರದಲ್ಲಿ ಖಾಲಿ ಜಾಗವಿರುವ ಸ್ಥಳಗಳ ಮಾಹಿತಿ ನೀಡಬೇಕು. ಜಿಲ್ಲೆಯ ವಿವಿಧನಗರಸ್ಥಳೀಯ-ಸಂಸ್ಥೆಗಳಲ್ಲಿನಪೌರಕಾರ್ಮಿಕರಿಗೆಸೂರುಕಲ್ಪಿಸುವ ಆದ್ಯತೆಅಧಿಕಾರಿಗಳದ್ದಾಗಬೇಕುಎಂದುತಿಳಿಸಿದರು.ಸಿರುಗುಪ್ಪನಗರಸಭೆ ವ್ಯಾಪ್ತಿಯಲ್ಲಿ04 ಪೌರಕಾರ್ಮಿಕರಿಂದ ಕೆಲಸ ಮಾಡಿಸಿಕೊಂಡು ಕಳೆದ 10 ತಿಂಗಳುಗಳಿಂದವೇತನಪಾವತಿಮಾಡಿಲ್ಲ, ಬೆಳಗಿನಉಪಹಾರಸಹನೀಡಿಲ್ಲ ಮತ್ತು ಅವರಿಂದ ಹಣ ವಸೂಲಿ ಮಾಡಲಾಗಿದೆ ಎಂದು ಮನವಿ ಪತ್ರ ಸಲ್ಲಿಸಿದ್ದಾರೆ ಎಂದು ಕಂದಕೂರು ರಾಮುಡು ಅವರು ಸಭೆಯ ಗಮನಕ್ಕೆ ತಂದರು.

ಜಿಲ್ಲಾಧಿಕಾರಿಯವರು ಈ ಕುರಿತು ಸೂಕ್ತ ತನಿಖೆ ನಡೆಸುವಂತೆ ಸಮಾಜ ಕಲ್ಯಾಣಇಲಾಖೆಉಪನಿರ್ದೇಶಕರಿಗೆಸೂಚಿಸಿದಅವರು, ಪೌರಕಾರ್ಮಿಕರು, ಸಫಾಯಿಕರ್ಮಚಾರಿಗಳು, ಲೋಡರ್ಸ್, ಕ್ಲೀನರ್ಸ್, ವಾಹನಚಾಲಕರಿಗೆ ನಿಗದಿತ ವೇಳೆಯೊಳಗೆ ವೇತನ ಪಾವತಿಸಿ, ವೇತನ ಸ್ಲಿಪ್ ನೀಡಬೇಕು. ಪಿಎಫ್ ಮತ್ತು ಇಎಸ್‌ಐ ವಂತಿಕೆ ಸರಿಯಾಗಿ ಪಾವತಿಯಾಗುತ್ತಿರುವ ಕುರಿತು ಖಾತ್ರಿಪಡಿಸಿಕೊಳ್ಳಬೇಕು. ಮಾಸ್ಟರ್ ಆರೋಗ್ಯ ತಪಾಸಣೆ ಕಾಲ ಕಾಲಕ್ಕೆ ಮಾಡಿಸಬೇಕು ಎಂದು ತಿಳಿಸಿದರು.

ಮುಂದಿನ ಸಭೆಯಲ್ಲಿ ಸಮಿತಿಯ ಸದಸ್ಯರಾದ ವಿವಿಧ ಇಲಾಖೆಗಳ ಮುಖ್ಯಸ್ಥರೇ ಸಭೆಗೆ ಹಾಜರಾಗಬೇಕು. ಇಲ್ಲದಿದ್ದಲ್ಲಿ ಅಂತವರ ವಿರುದ್ಧ ಕ್ರಮ ಜರುಗಿಸಲಾಗುವುದು ಎಂದು ಖಡಕ್ ಸೂಚನೆ ನೀಡಿದರು.

ಸಭೆಯಲ್ಲಿಜಿಲ್ಲಾಪಂಚಾಯತ್‌ಮುಖ್ಯಕಾರ್ಯನಿರ್ವಾಹಕಅಧಿಕಾರಿ ಮಹಮ್ಮದ್ ಹಾರೀಸ್ ಸುಮೇರ್,

ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನವೀನ್ ಕುಮಾರ್, ಜಿಪಂ ಉಪಕಾರ್ಯದರ್ಶಿ ಶಶಿಕಾಂತ್ ಶಿವಪೂರೆ, ಸಮಾಜಕಲ್ಯಾಣಇಲಾಖೆಯ ಉಪನಿರ್ದೇಶಕ ಚಿದಾನಂದ, ಪರಿಶಿಷ್ಟವರ್ಗಗಳ ಕಲ್ಯಾಣಾಧಿಕಾರಿ ಶಾಷು ಮೋದಿನ್, ಸಮಿತಿ ಸದಸ್ಯರಾದ ಅರುಣ್ ಕುಮಾರ್ ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು, ನಗರ ಸ್ಥಳೀಯ-ಸಂಸ್ಥೆಗಳ ಮುಖ್ಯಾಧಿಕಾರಿಗಳು ಉಪಸ್ಥಿತರಿದ್ದರು.

### ಕಬ್ಬು ಕೋಲಾಹಲಕ್ಕೆ ಮದ್ದು

ಸರ್ಕಾರದ ವತಿಯಿಂದ ಪ್ರಯೋಗಾಲಯ ತೆರೆಯಬೇಕು. ಕೆಲವು ಕಾರ್ಖಾನೆಗಳು ಹಳೆಯ ಬಾಕಿಯನ್ನು ಉಳಿಸಿಕೊಂಡಿದ್ದು, ಇದರ ಪಾವತಿಗೆ ಕ್ರಮ ಕೈಗೊಳ್ಳಬೇಕು ಎಂದು ರೈತ ಮುಖಂಡರು ಮನವಿ ಮಾಡಿದ್ದಾರೆ.

ತೂಕದಲ್ಲಿಮೋಸ, ರಿಕವರಿಕಡಿಮೆತೋರಿಸುವುದುಸೇರಿದಂತೆಸಕ್ಕರೆ ಕಾರ್ಖಾನೆಗಳಕುರಿತುಕಬ್ಬುಬೆಳೆಗಾರರಿಗೆಇರುವಎಲ್ಲಾಅಹವಾಲುಗಳನ್ನು ಬಗೆಹರಿಸಲಾಗುವುದು ಎಂದು ರೈತ ಮುಖಂಡರಿಗೆ ತಿಳಿಸಲಾಗಿದೆ.

ಕಬ್ಬಿನ11.25ರಿಕವರಿಗೆರೂ.3250ಸಕ್ಕರೆಕಾರ್ಖಾನೆಗಳುಪಾವತಿಸಬೇಕು. ಇದಕ್ಕೆ ಸರ್ಕಾರ ರೂ.50 ಹೆಚ್ಚುವರಿಯಾಗಿ ಪಾವತಿಸಲು ನಿರ್ಧಾರ ಕೈಗೊಳ್ಳಲಾಗಿದೆ.ಇದುಇಡೀರಾಜ್ಯಕ್ಕೆಅನ್ವಯವಾಗಲಿದೆ.ಸಕ್ಕರೆಕಾರ್ಖಾನೆಗಳು ಮಾರಾಟ ಮಾಡುವ ವಿದ್ಯುತ್ ಮೇಲೆ ಪ್ರತಿ ಯುನಿಟ್?ಗೆ 60 ಪೈಸೆ ತೆರಿಗೆ ನಿಗದಿಪಡಿಸುವ ಪ್ರಸ್ತಾವನೆಯನ್ನು ಮರು ಪರಿಶೀಲಿಸಬೇಕು ಎಂದು ಕಾರ್ಖಾನೆ ಮಾಲೀಕರು ಮನವಿ ಮಾಡಿದ್ದು, ಇದರ ಮರು ಪರಿಶೀಲನೆನಡೆಸಲಾಗುವುದು.ಸಕ್ಕರೆಕಾರ್ಖಾನೆಗಳುಎದುರಿಸುತ್ತಿರುವ ಸಮಸ್ಯೆಗಳು ಅದೇ ರೀತಿ ಕಬ್ಬು ಬೆಳೆಗಾರರು ಸಕ್ಕರೆ ಕಾರ್ಖಾನೆಗಳಿಂದ ಎದುರಿಸುತ್ತಿರುವ ಸಮಸ್ಯೆ ಕುರಿತು ಸಮಾಲೋಚನೆ ನಡೆಸಿ ಪರಿಹಾರ ಒದಗಿಸಲು ಪ್ರತ್ಯೇಕ ಸಭೆ ನಡೆಸಲಾಗುವುದು.

### ಕಚೇರಿ ಕೆಲಸಕ್ಕೆ ಅಡ್ಡಿ

ಈರೀತಿವರ್ತನೆಮಾಡಿದ್ದಾರೆ.ಇವರಮೇಲೆಸೂಕ್ತಕ್ರಮಕೈಗೊಳ್ಳಬೇಕೆಂದು ತಾಪಂ ಕಾರ್ಯನಿರ್ವಾಹಕ ಅಧಿಕಾರಿ ದಿಪೀಕಾ ನಾಯ್ಕರ್ ಅವರು ಅ.28ರಂದು ಹುಮನಾಬಾದ್ ಪೊಲೀಸರಿಗೆ ದೂರು ಸಲ್ಲಿಸಿದ್ದರು. ದೂರಿನನ್ವಯ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪಿಎಸ್‌ಐ ಸುರೇಶ್ ಕುಮಾರ್ ತಿಳಿಸಿದರು.

### ವಿವಿಧೆಡೆ ದಾಳಿ:

ಸಿಬ್ಬಂದಿಯಾದ ಚಂದ್ರಕಲಾ, ಕಿರಣ್ ಕುಮಾರ್, ರೀಚ್ ಸಂಸ್ಥೆಯ ಸಂಯೋಜಿಕಿಯಾದ ಲಕ್ಷ್ಮೀದೇವಿ ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು.

### ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು

ಅವರು ಸಂವಿಧಾನದಲ್ಲಿ ಎಲ್ಲರಿಗೂ ಸಮಾನ ಅವಕಾಶಗಳನ್ನು ನೀಡಿ ಶಿಕ್ಷಣವನ್ನು ಮೂಲಭೂತ ಹಕ್ಕನ್ನಾಗಿ ಮಾಡಿದರು. ಹಾಗಾಗಿ ಇಂದು ವಿದ್ಯಾರ್ಥಿಗಳುತಮ್ಮವ್ಯಕ್ತಿತ್ವವನ್ನುವಿಕಾಸಗೊಳಿಸಲುಸಂವಿಧಾನದತ್ತವಾಗಿ ನಮಗೆ ಅವಕಾಶಗಳು ದೊರೆತಿವೆ ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಕಾಲೇಜು ಶಿಕ್ಷಣ ಇಲಾಖೆಯ ಪ್ರಾದೇಶಿಕ ಜಂಟಿ ನಿರ್ದೇಶಕರಾದಪ್ರೊ.ಶಿವಶರಣಗೊಳ್ಳೆ, ಮಹಾನಗರಪಾಲಿಕೆಯವಲಯ ಒಂದರಆಯುಕ್ತ ಗೌತಮ್ ಕಾಂಬಳೆ, ಕಾರ್ಯಕ್ರಮದ ಅಧ್ಯಕ್ಷತೆಯನ್ನು

ಪ್ರಾಂಶುಪಾಲರಾದ ಡಾ.ಸವಿತಾ ತಿವಾರಿ ಅವರು ವಹಿಸಿದ್ದರು. ಕಾರ್ಯಕ್ರಮವನ್ನು ಡಾ. ಬಲಭೀಮ ಸಾಂಗ್ಲಿಯವರು ನಿರ್ವಹಿಸಿದರು. ಡಾ.ಟಿ.ವ್ಹಿ ಅಡಿವೇಶ,

ಡಾ. ಮಲ್ಲೇಶಪ್ಪ ಎಸ್.ಕುಂಬಾರ, ಡಾ.ವಿಜಯಕುಮಾರ ಸಾಲಿಮನಿ, ಡಾ.ರಾಜಕುಮಾರ ಸಲಗರ, ಡಾ. ದೌಲಪ್ಪ ಬಿ.ಹೆಚ್, ಡಾ.ರಾಜಶೇಖರ ಮಡಿವಾಳ, ಅಜಯಸಿಂಗ್ ತಿವಾರಿ, ಡಾ.ಶ್ರೀಮಂತ ಹೋಳಕರ, ವಿಜಯಲಕ್ಷ್ಮೀ,ಶಿವಾನಂದಸ್ವಾಮಿಸೇರಿದಂತೆಎಲ್ಲಾಘಟಕಗಳಸಂಯೋಜಕರು, ವಿದ್ಯಾರ್ಥಿಗಳು,ಕಾಲೇಜಿನಸಿಬ್ಬಂದಿಗಳುಇದ್ದರು.ಡಾ.ರವೀಂದ್ರಕುಮಾರ ಭಂಡಾರಿಅವರುಸ್ವಾಗತಿಸಿದರು.ಕಾರ್ಯಕ್ರಮವನ್ನುಡಾ.ಬಸಂತಸಾಗರ ಅವರ ವಂದನಾರ್ಪಣೆಯೊಂದಿಗೆ ಮುಕ್ತಾಯವಾಯಿತು.

## ಡಿಸೆಂಬರ್.13 ರಂದು ಜಿಲ್ಲೆಯಲ್ಲಿ ರಾಷ್ಟ್ರೀಯ ಲೋಕ ಅದಾಲತ್-ನ್ಯಾ ಎಸ್.ಬಿ. ರಹಮಾನ



ಮಲ್ಲಮ್ಮ ನುಡಿ ವಾರ್ತೆ

ಬೀದರ,ನವೆಂಬರ್.07(ಕರ್ನಾಟಕ ವಾರ್ತೆ): ಗೌರವಾನ್ವಿತ ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ರಾಜ್ಯಕಾನೂನುಸೇವೆಗಳಪ್ರಾಧಿಕಾರದ ನಿರ್ದೇಶನದಂತೆ ಡಿಸೆಂಬರ್.13 ರಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಬೀದರ ಜಿಲ್ಲೆಯ ಎಲ್ಲಾ ನ್ಯಾಯಾಲಯಗಳಲ್ಲಿ ಬೃಹತ್ ಲೋಕ ಅದಾಲತ್‌ನ್ನು ಹಮ್ಮಿಕೊಳ್ಳಲಾಗಿದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಎಸ್.ಬಿ.ರಹಮಾನ ಅವರು ತಿಳಿಸಿದರು.

ಅವರು ಶುಕ್ರವಾರ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸಭಾಂಗಣದಲ್ಲಿ ಡಿಸೆಂಬರ್.13 ನಡೆಯುವ ಬೃಹತ್ ರಾಷ್ಟ್ರೀಯ ಲೋಕ ಅದಾಲತ್‌ನ ಪೂರ್ವಸಿದ್ಧತೆ ಕುರಿತು ಕರೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಪ್ರಸ್ತುತ ಚಾಲ್ತಿಯಲ್ಲಿರುವ ಆಸ್ತಿಪಾಲು ವಿಭಾಗ,ಸಿವಿಲ್ ಪ್ರಕರಣಗಳು,ಜೀವನಾಂಶ, ಚೆಕ್ ಬೌನ್ಸ, ವಿದ್ಯುತ್ ಪ್ರಕರಣಗಳು, ರಾಜಿ ಯಾಗಬಹುದಾದ ಅಪರಾಧಿಕ ಪ್ರಕರಣಗಳು, ಕೌಟುಂಬಿಕ ಪ್ರಕರಣಗಳು, ಕಂದಾಯ ಪ್ರಕರಣಗಳಲ್ಲಿ ರಾಜಿ ಮಾಡಿಕೊಳ್ಳುವಂತಹ ಪ್ರಕರಣಗಳು, ಕಾರ್ಮಿಕರ ಪ್ರಕರಣಗಳು, ಬ್ಯಾಂಕ್ ಪ್ರಕರಣಗಳು, ಹಾಗೂ ವ್ಯಾಜ್ಯಪೂರ್ವ ಪ್ರಕರಣಗಳನ್ನು ರಾಜೀ ಸಂಧಾನದ ಮೂಲಕ ಇತ್ಯರ್ಥ ಮಾಡಲು ಅವಕಾಶ ಇರುತ್ತದೆ ಎಂದರು.

ಈ ಹಿಂದೆ ದಿನಾಂಕ 13-09-2025 ರಂದು ರಾಷ್ಟೀಯ ಲೋಕ ಅದಾಲತನ್ನು ಹಮ್ಮಿಕೊಳ್ಳಲಾಗಿತ್ತು. ಸದರಿ ಲೋಕ ಅದಾಲತನಲ್ಲಿ ಜಿಲ್ಲೆಯಾದ್ಯಾಂತ

ಒಟ್ಟು 38,038 ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ. ಅವುಗಳಲ್ಲಿ 9,899 ಬಾಕಿ(ಪೇಂಡಿಂಗ) ಪ್ರಕರಣಗಳನ್ನು ಹಾಗೂ 28,139 ವ್ಯಾಜ್ಯಪೂರ್ವ ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆಂದರು.

ಈ ಬಾರಿ ಲೋಕಅದಾಲತನಲ್ಲಿ ನ್ಯಾಯಾಲಯದಲ್ಲಿ ಬಾಕಿ (ಪೇಂಡಿಂಗ) ಇರುವ ಪ್ರಕರಣಗಳನ್ನು ಹೆಚ್ಚು ಹೆಚ್ಚು ಇತ್ಯಾರ್ಥಗೊಳಿಸಲು ಯೋಜನೆ ರೂಪಿಸಲಾಗಿದ್ದು, ಜಿಲ್ಲೆಯಲ್ಲಿ ಒಟ್ಟು 29,124 ಪ್ರಕರಣಗಳು ಪೆಂಡಿಂಗ್ ಇದ್ದು ಹೆಚ್ಚು ಪ್ರಕರಣಗಳನ್ನು ರಾಜಿ ಮಾಡುವ ಗುರಿ ಹೊಂದಿದ್ದೇವೆ ಹಾಗೂ ಎಲ್ಲಾ ಪೂರ್ವತಯಾರಿ ಮಾಡಿಕೊಂಡಿದ್ದೇವೆ.ಜಿಲ್ಲೆಯಲ್ಲಿ ಒಟ್ಟು 17 ಲೋಕ ಅದಾಲತ ಬೇಂಚಗಳನ್ನು ರಚಿಸಲಾಗಿದೆ. ಪ್ರಕರಣಳಲ್ಲಿ ರಾಜಿ ಮಾಡಿಕೊಳ್ಳುವುದರಿಂದ ಕಕ್ಷಿದಾರನಿಗೆ ನ್ಯಾಯಲಯ ಶುಲ್ಕ ವಾಪಸ್ ಸಿಗಲಿದೆ ಮೇಲ್ಮನವಿ ಮಾಡಲು ಅವಕಾಶ ಇರುವುದಿಲ್ಲ ಇಬ್ಬರೂ ಪಕ್ಷಗಾರರು ತಮ್ಮ ದ್ವೇಷ ಮರೆತು ಸುಮಧುರ ಬಾಂಧವ್ಯ ಹೊಂದುವ ಅವಕಾಶ ಇರುತ್ತದೆ ಹಾಗೆ ಯಾವುದೇ ಖರ್ಚು ವೆಚ್ಚ ಇಲ್ಲದೆ ಶೀಘ್ರವಾಗಿ ಪ್ರಕರಣಗಳು ಇತ್ಯರ್ಥವಾಗುತ್ತವೆ ಎಂದು ಅವರು ತಿಳಿಸಿದರು.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯಕಾರ್ಯದರ್ಶಿಗಳಾದ ಪ್ರಕಾಶ ಅರ್ಜುನ ಬನಸೋಡೆ ಅವರು ಮಾತನಾಡಿ, ನವೆಂಬರ್.3 ರಂದು ವಿವಿಧ ಇಲಾಖೆಗಳ ಸಭೆ ಸೇರಿ ಹಲವು ಪ್ರಕರಣಗಳ ಬಗ್ಗೆ ಚರ್ಚೆ ಮಾಡಲಾಗಿದೆ, ಪೂರ್ವ ತಯ್ಯಾ-ರಿಯಂತೆ ಡಿ.13 ರಂದು ನಡೆಯುವ

ರಾಷ್ಟ್ರೀಯ ಬೃಹತ ಲೋಕ ಆದಾಲತ್‌ನಲ್ಲಿರಾಜಿಸಂಧಾನದಮೂಲಕ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ಉತ್ತಮ ಅವಕಾಶವಿದ್ದು, ಕಕ್ಷಿದಾರರಿಗೆ ಯಾವುದೇ ಖರ್ಚು ವೆಚ್ಚ ಇರುವುದಿಲ್ಲ. ಆದ್ದರಿಂದಬೃಹತಲೋಕಆದಾಲತನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಕ್ಷಿದಾರರು ಭಾಗವಹಿಸಿ ಇದರ ಸದುಪಯೋಗವನ್ನು ಪಡೆದುಕೊಳ್ಳುವಂತೆ ತಿಳಿಸಿದರು.

ಈ ಸಂದರ್ಭದಲ್ಲಿ ಪ್ರಾಧಿಕಾರದ ಸಿಬ್ಬಂದಿ ಜಗದೀಶ್ವರ ದೊರೆ, ಆಕಾಶ ಸಜ್ಜನಶೆಟ್ಟಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಬಿ.ವಿ. ಭೂಮರಡ್ಡಿ ಮಹಾವಿದ್ಯಾಲಯದಲ್ಲಿ ವಂದೇ ಮಾತರಂ ಗೀತೆಯ 150ನೇ ವರ್ಷಾಚರಣೆ




ಮಲ್ಲಮ್ಮ ನುಡಿ ವಾರ್ತೆ

ಬೀದರ, :ಹುಮನಾಬಾದ ಬಿ.ವಿ.ಭೂಮರಡ್ಡಿ ಮಹಾವಿದ್ಯಾಲಯದಲ್ಲಿ. 32ನೆಯ ಕರ್ನಾಟಕ ಬಟಾಲಿಯನ್ ನಿರ್ದೇಶನದ ಮೇರೆಗೆ, ಡಾ. ರಜನೀಶ್ ವಾಲಿಯವರ ಮಾರ್ಗದರ್ಶನದಲ್ಲಿ ಬಿ.ವಿ.ಭೂಮರಡ್ಡಿ ಮಹಾವಿದ್ಯಾಲಯ, ಕರ್ನಾಟಕ ಮಹಾವಿದ್ಯಾಲಯ, ಹಾಗೂ ಕರ್ನಾಟಕ ಪ್ರೌಢ ಶಾಲೆ, ಬೀದರನ ಎನ್.ಸಿ.ಸಿ. ಆರ್ಮಿ ಘಟಕಗಳು, ಎನ್.ಎಸ್.ಎಸ್ ಘಟಕ ಹಾಗೂ ಇತಿಹಾಸ ವಿಭಾಗದ ಸಂಯುಕ್ತಾಶ್ರಯದಲ್ಲಿ ವಂದೇ ಮಾತರಂ ಗೀತೆಯ 150ನೇ ವರ್ಷದ ಸಂಭ್ರಮಾಚರಣೆಯನ್ನು ಅದ್ದೂರಿಯಾಗಿ ಆಚರಿಸಲಾಯಿತು.

ಕಾರ್ಯಕ್ರಮದ ಪ್ರಮುಖ ಆಕರ್ಷಣೆಯಾಗಿ ವಿದ್ಯಾರ್ಥಿಗಳು ಸಮೂಹಗಾನ ರೂಪದಲ್ಲಿ "ವಂದೇ ಮಾತರಂ"ಗೀತೆಯನ್ನುಹಾಡಿ ದೇಶಭಕ್ತಿ ಸಾರಿದರು. ಈ ಕಾರ್ಯಕ್ರಮದ ಮೂಲಕ ದೇಶಭಕ್ತಿ, ಏಕತೆ ಹಾಗೂ ಸಂಸ್ಕೃತಿಯ ಗೌರವದ ಮಹತ್ವವನ್ನು ವಿದ್ಯಾರ್ಥಿಗಳಲ್ಲಿ ಬೆಳೆಯಿಸುವ ಪ್ರಯತ್ನ ನಡೆಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ದೀಪಾ ರಾಗ, ಪ್ರಾಚಾರ್ಯರು, ಬಿ.ವಿ.ಬಿ. ಮಹಾವಿದ್ಯಾಲಯ ಅವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಡಾ. ಮಲ್ಲಿಕಾರ್ಜುನ ಕೋಟೆ, ಐ.ಕ್ಯೂ.ಎ.ಸಿ. ಸಂಯೋಜಕರು, . ಎನ್.ಸಿ.ಸಿ ಅಧಿಕಾರಿಗಳಾದ ಮಾರುತಿ ಭೀಮಣ್ಣ, ಸಂತೋಷ ನಾಯಕ, ಅಭಿಲಾಶ ಕೋಟೆ, ಎನ್.ಎಸ್. ಎಸ್ ಅಧಿಕಾರಿಗಳಾದ ಡಾ. ಲಕ್ಷ್ಮಿ ವಿಶ್ವನಾಥ, ಬಸವರಾಜ ಬಿರಾದಾರ ಹಾಗೂ ಇತಿಹಾಸ ವಿಭಾಗದ ಮುಖ್ಯಸ್ಥರಾದ ಡಾ.ಶಿವಲೀಲಾ

ವೀರಯ್ಯ ಅವರುಗಳು ಭಾಗವಹಿಸಿ ವಿದ್ಯಾರ್ಥಿಗಳಿಗೆ ದೇಶಸೇವೆ ಮತ್ತು ಶಿಸ್ತಿನ ಬಗ್ಗೆ ಪ್ರೇರಣಾದಾಯಕ ಸಂದೇಶ ನೀಡಿದರು.

ಕಾಲೇಜಿನ ಸಿಬ್ಬಂದಿ ವರ್ಗ, ಎನ್.ಸಿ.ಸಿ. ಕೇಡೆಟಗಳು, ಎನ್.ಎಸ್.ಎಸ್. ಸ್ವಯಂ ಸೇವಕರು ಹಾಗೂ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿದರು.

## ಎತ್ತಿನಬಂಡಿ ಓಟ ಆಯೋಜನೆ: ಅರ್ಜಿ ಆಹ್ವಾನ

ಬೀದರ,ನವೆಂಬರ್.07(ಕರ್ನಾಟಕ ವಾರ್ತೆ): ಜಿಲ್ಲೆಯಲ್ಲಿ ಎತ್ತಿನಬಂಡಿ ಓಟ ಕ್ರೀಡೆಯನ್ನು ಆಯೋಜಿಸಲಾಗುತ್ತಿದ್ದು, ಎತ್ತಿನಬಂಡಿ ಓಟ ಕ್ರೀಡೆಯಲ್ಲಿ ಆಸಕ್ತ ಹೊಂದಿರುವ ಸಂಘ-ಸಂಸ್ಥೆಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಬೀದರ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎತ್ತಿನಬಂಡೆ ಕ್ರೀಡೆಗೆ ಪ್ರೋತ್ಸಾಹ ಮತ್ತು ಉತ್ತೇಜನ ನೀಡುವ ನಿಟ್ಟಿನಲ್ಲಿ ಮುಖ್ಯಮಂತ್ರಿಗಳು 2025-26ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿರುತ್ತಾರೆ. ಎತ್ತಿನ ಬಂಡೆ ಕ್ರೀಡೆಗೆ ಪ್ರೊತ್ಸಾಹ ಹಾಗೂ ಉತ್ತೇಜನ ನೀಡಲು ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಆಯೋಜಿಸುವ 15 ಸಂಘ-ಸಂಸ್ಥೆಗಳಿಗೆ ತಲಾ 2 ಲಕ್ಷ ರೂ.ಗಳನ್ನು ಅನುದಾನ ನೀಡಿ ಪ್ರೋತ್ಸಾಹಿಸಲಾಗುತ್ತದೆ.

ಬೀದರ ಜಿಲ್ಲೆಯಲ್ಲಿ ಎತ್ತಿನಬಂಡೆ ಕ್ರೀಡೆಯನ್ನು ಆಯೋಜಿಸಲು ಆಸಕ್ತಿವುಳ್ಳವರು ತಮ್ಮ ಸಂಘ ಸಂಸ್ಥೆಗಳ ಪೂರ್ಣ ವಿವರವನ್ನು ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ನೆಹರು ಕ್ರೀಡಾಂಗಣ ಬೀದರ ಇಲ್ಲಿಗೆ ದಿನಾಂಕ: 14-11-2025 ರೊಳಗಾಗಿ ಪ್ರಸ್ತಾವನೆಯನ್ನು ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಸಹಾಯಕರು ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಬೀದರ ಕಚೇರಿಗೆ ಸಂಪರ್ಕಿಸಬಹುದಾಗಿದೆ ಎಂದು ಅವರು ತಿಳಿಸಿದ್ದಾರೆ.

## ಔರಾದ್ ಅಭಿವೃದ್ಧಿಗೆ ಮಾಸ್ಟರ್ ಪ್ಲಾನ್: ಪ್ರಭು ಚವಾಣ್



ಮಲ್ಲಮ್ಮ ನುಡಿ ವಾರ್ತೆ

ಬೀದರ್. ನ. 07 :- ಔರಾದ್ 'ಪಟ್ಟಣದ ಅಭಿವೃದ್ಧಿಗೆ ಮಾಸ್ಟರ್ ಪ್ಲಾನ್ ಸಿದ್ಧಪಡಿಸಿ, ಅದರಂತೆ ಸಮಗ್ರ ಅಭಿವೃದ್ಧಿ ಪಡಿಸಲಾಗುವುದು' ಎಂದು ಶಾಸಕ ಪ್ರಭು ಚವಾಣ್ ತಿಳಿಸಿದರು.

ಪಟ್ಟಣದಲ್ಲಿ ಈಚೆಗೆ ಸಿಸಿ ರಸ್ತೆ, ಚರಂಡಿ ಸೇರಿದಂತೆ – 2.50 ಕೋಟಿ ಮೊತ್ತದ ವಿವಿಧ ಕಾಮಗಾರಿಗಳಿಗೆ ಚಾಲನೆನೀಡಿ ಅವರು ಮಾತನಾಡಿದರು.

'ಪಟ್ಟಣದಲ್ಲಿ ಮಾಸ್ಟರ್ ಪ್ಲಾನ್ ಪ್ರಕಾರ ಕೆಲಸ ಮಾಡಲು ಮಂಜೂರಾತಿ ಪಡೆಯಲಾಗಿದೆ. ಪ್ರತಿ ವಾರ್ಡ್‌ನಲ್ಲಿ ರಸ್ತೆ, ಚರಂಡಿ, ಬೆಳಕು ಮತ್ತು ನೀರಿನ ಸೌಲಭ್ಯ ಸುಧಾರಿಸಲಾಗುತ್ತಿದೆ. ಬಹು ವರ್ಷಗಳ ಬೇಡಿಕೆ ಪಟ್ಟಣ ಪಂಚಾಯಿತಿಯನ್ನು ಪುರಸಭೆಯಾಗಿ ಮೇಲ್ದರ್ಜೆಗೆ ಏರಿಸಲಾಗಿದೆ' ಎಂದು ಹೇಳಿದರು. 'ಪಟ್ಟಣದಲ್ಲಿ ರಸ್ತೆ, ಚರಂಡಿ, ಬೀದಿಗಳ ಸ್ವಚ್ಛತಾ ಕಾರ್ಯ ಪ್ರತಿದಿನ ಅಚ್ಚುಕಟ್ಟಾಗಿ ನಡೆಸಬೇಕು. ಕಸ ವಿಲೇವಾರಿ, ಬೀದಿ ದೀಪಗಳ ನಿರ್ವಹಣೆ, ಕುಡಿಯುವ ನೀರಿನ ಪೂರೈಕೆ ವ್ಯವಸ್ಥಿತವಾಗಿ ಆಗಬೇಕು. ಸಾರ್ವಜನಿಕರಿಗೆ ತೆ-ೂಂದರೆ ಆಗದಂತೆ ಕ್ರಮವಹಿಸಬೇಕು' ಎಂದು ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿಗೆ ಸೂಚಿಸಿದರು. 'ಕಸದ ವಾಹನಗಳನ್ನು ಸರಿಯಾಗಿ ಬಳಕೆ ಮಾಡಿಕೊಳ್ಳಬೇಕು. ಸ್ವಚ್ಛತೆಯ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಬೇಕು. ರಸ್ತೆ ಮತ್ತು ಚರಂಡಿಗಳಲ್ಲಿ ಕಸ ತುಂಬದಂತೆ ನೋಡಿಕೊಳ್ಳಬೇಕು. ಮುಖ್ಯ ರಸ್ತೆಯಲ್ಲಿರುವ ಹೋಟೆಲ್, ಅಂಗಡಿಗಳು ಹಾಗೂ ವ್ಯಾಪಾರಸ್ಥರು ತಮ್ಮ ಅಂಗಡಿಗಳ ಮುಂದೆ ಸ್ವಚ್ಛತೆ ಕಾಪಾಡುವಂತೆ ಸೂಚನೆಗಳನ್ನು ನೀಡಬೇಕು' ಎಂದು ಸಲಹೆ ನೀಡಿದರು. ಮುಖಂಡ ರಾಮಶೆಟ್ಟಿ ಪನ್ನಾಳೆ, ಧೊಂಡಿಬಾ ನರೋಟೆ, ದಯಾನಂದ ಘಾಳೆ, ಸಂಜು ವಡೆಯರ, ರಾಮ ನರೋಟೆ, ಸಂತೋಷ ಪೋಕಲವಾರ, ಕೇರಬಾ ಪಬಾರ, ಗುಂಡು ಮುದಾಳೆ, ಯಾದವರಾವ ಮೇತ್ರೆ, ಬಾಬು ರಾಠೋಡ, ಸಚಿನ ರಾಠೋಡ್ ಮತ್ತಿತರರು ಹಾಜರಿದ್ದರು.

## ಇಂದು ಬ್ರಾಹ್ಮಣ ಸಮಾಜದ ಪೂರ್ವಭಾವಿ ಸಭೆ

ಲಿಂಗಸುಗೂರ:ಪಟ್ಟಣದಲ್ಲಿ ನೂತನ ಗಾಯತ್ರಿ ಭವನ ಕಟ್ಟಡ ನಿರ್ಮಾಣಕ್ಕೆ ಇಂದು ಸಂಜೆ ರಾಯಚೂರು ರಸ್ತೆಯ ಅಯ್ಯಪ್ಪ ಸ್ವಾಮಿ ದೇವಸ್ಥನದ ಮುಂದೆ ಇರುವ ಬ್ರಾಹ್ಮಣ ಸಮಾಜದ ನಿವೇಶನದಲ್ಲಿತಾಲೂಕಿನಸಮಸ್ತಬ್ರಾಹ್ಮಣಸಮಾಜದಪೂರ್ವಭಾವಿ ಸಭೆ ಹಮ್ಮಿಕೊಳ್ಳಲಾಗಿದೆಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದತಾಲೂಕು ಅಧ್ಯಕ್ಷ ಆಶೋಕ ದಿಗ್ಗಾವಿ ತಿಳಿಸಿದ್ದಾರೆ. ಸರಕಾರದಿಂದ ನೀಡಿದ 80/100 ನಿವೇಶನದಲ್ಲಿ ಕಂಪೌಂಡ ನಿರ್ಮಾಣ ಗೇಟ್ ಹಾಗೂ ಬೋರವೇಲ್ ಕೊರಿಸುವದು ಮತ್ತು ನಿವೇಶನಸಮತೋಲನಗೊಳಿಸಿವದು ಇನ್ನಿತರಕಾಮಗಾರಿಗಳು ಅಂದಾಜು 5 ಲಕ್ಷ.ರೂ ಯಲ್ಲಿ ಪೂರ್ಣಗೊಂಡಿದ್ದು.ಗಾಯತ್ರಿ ಭವನದ ಕಟ್ಟಡ ಒಂದು ಸಭಾಂಗಣ, ಎರಡು ಕೊಠಡಿಗಳು, ಒಂದು ವೇದಿಕೆ, ಎರಡು ಶೌಚಾಲಯಗಳು ಹಾಗೂ ಇನ್ನಿತರ ಕಾಮಗಾರಿಗಳನ್ನು ಕೈಗೊಳ್ಳಲು ಶನಿವಾರ ಸಂಜೆ 5.00 ಕ್ಕೆ ಬ್ರಾಹ್ಮಣ ಸಮಾಜದ ಸಭೆ ಕರೆಯಲಾಗಿದ್ದು ಆಸಕ್ತರು ಹಾಗೂ ಅಭಿಮಾನಿಗಳು ಸಮಾಜದ ಭಾಂದವರು ಹೆಚ್ಚಿನಸಂಖ್ಯೆಯಲ್ಲಿ ಭಾಗವಹಿಸಿ ಸಲಹೆ ಸೂಚನೆ ನೀಡಲು ಕೋರಿದ್ದಾರೆ.

## ತಾಂಡಾ ನಿವಾಸಿಗಳಿಂದ ತಹಸಿಲ ಕಚೇರಿಗೆ ಮುತ್ತಿಗೆ




ಬೀದರ್: ಈ ತಿಂಗಳ 18ರಂದು ಬಸವನವಾಡಿತಾಂಡಾಸೇರಿದಂತೆನಿವೇಶನ ಹಕ್ಕುಪತ್ರ ಪಡೆಯದೆಬಂಚಿತರಾದ ಒಟ್ಟು12 ತಾಂಡಾಗಳ ಸಾವಿರಾರು ನಿವಾಸಿಗಳಿಂದ ಔರಾದ್ ತಹಸಿಲ ಕಚೇರಿಗೆಮುತ್ತಿಗೆಹಾಕಲಾಗುತ್ತದೆ ಎಂದುಔರಾದ್‌ಪುರಸಭೆಸದಸ್ಯರಾದ ಶಿವಾಜಿ ರಾಠೋಡ ಎಚ್ಚರಿದರು.

ನಗರದಜಿಲ್ಲಾಪತ್ರಿಕಾಭವನದಲ್ಲಿ ಶುಕ್ರವಾರಪತ್ರಿಕಾಗೋಷ್ಠಿಉದ್ದೇಶಿಸಿ ಮಾತನಾಡಿರುವಅವರು, ಔರಾದ ಪಟ್ಟಣದ ಬಸವನವಾಡಿ ತಾಂಡಾ ಸರ್ವೆನಂ183ಯಲ್ಲಿವಾಸಿಸುತ್ತಿರುವ ತಾಂಡಾ ನಿವಸಿಗರ ಆಸ್ತಿ ನಿವೇಶನ ಮನೆಗಳನ್ನು ಸಕ್ರಮಗೊಳಿಸಲು ವಿಫಲಾರಾಗಿರ್ಥಧುಬುಏಏಮಧ್ಯಊ.

ಆಗಸ್ಟ್ 18 ಹಾಗೂ 19ರಂದು ಎರಡುದಸಿವಸಗಳಕಾಲಮೂಲಭೂತ ಸೌಕರ್ಯ ಹಾಗೂ ಈ ಖಾತಾ ನಕಲು ಪಡೆಯಲು 9 ಶಾಂಡಾಗಳ ಬೇಡಿಕೆಈಡೇರಿಸುವಂತೆಉಪವಾಸ ಸತ್ಯಾಗ್ರಹಹಮ್ಮಿಕೊಳ್ಳಲಾಗಿತ್ತು. ಬಸವನವಾಡಿತಾಂಡಾನಿವಾಸಿಗರು 3-4ತಲೇಮಾರಿಯಿಂದವಾಸಿಸುತ್ತಿರುವ ತಾಂಡಾ ನಿವಾಸಿಗರ ನಿವೇಶನಗಳ ಭೂಮಿಯನ್ನುಸಕ್ರಮಗೊಳಿಸಲುವಿಳಂಬ ನೀತಿಅನುಸರಿಸಲಾಗುತ್ತಿದೆಇಲ್ಲಿಯ ನಿವಾಸಿಗರು 03 ವರ್ಷಗಳ ಹಿಂದೆ ಭೂಮಿಯನ್ನುಸಕ್ರಮಗೊಳಿಸಲುಒಟ್ಟು 111 ಫಲಾನುಭವಿಗಳುಆನ್ಲಾಯಿನ್ ಮೂಲಕಅರ್ಜಿಸಲ್ಲಿಸಿದ್ದರು. ಆದರೆ ಉದ್ದೇಶಪೂರ್ವಕವಾಗಿ ಗ್ರಾಮ ನಿವೇಶನ ಮಂಜುರಾತಿ ಪ್ರಮಾಣ ಪತ್ರ ನೀಡಿರುವುದಿಲ್ಲ. ಸಂಭದಪಟ್ಟ ಅಧಿಕಾರಿಗಳುಮಲತಾಯಿಧೋರಣೆ ಅನುಸರಿಸುತ್ತಿದ್ದಾರೆ. ಬಸವನವಾಡಿ ತಾಂಡಾವನ್ನು ಹೋರತುವಡಿಸಿ ತಾಲುಕಿನ ವೀವಿಧ ಗ್ರಾಮಗಳಲ್ಲಿ ಅಕ್ರಮಸಕ್ರಮನಿವೇಶನಮಂಜುರಾತಿ ಪ್ರಮಾಣಪತ್ರನೀಡಲಾಗಿದೆ.2024ರ ಫೆರಬ್ರವರಿ 26ರಂದು ಎಕಲಾರ ಗ್ರಾಮದ ತಾಂಡಾ ನಿವಾಸಿಗರಿಗೆ ಅನ್ಲಾಯಿನ್‌ಮುಖಾಂತರನಿವೇಶನ ಮಂಜುರಾತಿಪ್ರಮಾಣಪತ್ರ ವಿಯಮ 108ನ್ನು ಬಳಸಿ ಪ್ರಕಾರ ಪ್ರಮಾಣ ಪತ್ರ ನಿಡಲಾಗಿದೆ. ಈವಿಚಾರವಾಗಿ

ಸರ್ಕಾರದಪ್ರಧಾನಕಾರ್ಯದರ್ಶಿ ಬೆಂಗಳೂರು ರವರ ಆದೇಶ ಪತ್ರ ಸಂಖ್ಯೆ ಆರ್ ಡಿ 152 ಎಲ್ ಜಿ ಪಿ 2020 ದಿನಾಂಕ08/06/2021ರಂದು ರಾಜ್ಯದ ನಗರ ಮತ್ತು ಗ್ರಾಮಿಣ ಪ್ರದೇಶದಲ್ಲಿಸರ್ಕಾರಿಜಮಿನುಗಳಲ್ಲಿ ಅನಅಧಿಕೃತವಾಗಿ ನಿರ್ಮಿಸಿರುವ ವಾಸದಮನೆಗಳನ್ನುಸಕ್ರಮಗೊಳಿಸಲು ಕರ್ನಾಟಕ ಭೂಕಂದಾಯ ಕಾಯ್ದೆ 1964 ರ ಕಲಮ 94 ಸಿ ಮತ್ತು 94 ಸಿಸಿರಅಡಿಯಲ್ಲಿಅರ್ಜಿಸಲ್ಲಿಸಲು ಕಾಲವಕಾಶನಿಡಲಾಗಿತ್ತು ಇದರಂತೆ ಸರ್ಕಾರ ಅಧಿಸೂಚನೆ ಕರ್ನಾಟಕ ರಾಜ್ಯ ಪತ್ರ ಸಂಪೂಟ 156 ರಲ್ಲಿ ಪ್ರಕಟಗೊಂಡಿರುತ್ತದೆ. ಸರ್ಕಾರ ಅನಅಧಿಕೃತ ನಿರ್ಮಾಣಿಸಿರುವ ಮನೆಗಳನ್ನುಸಕ್ರಮಗೊಳಿಸಲುಆದೇಶ ನೀಡಿದ್ದರು ಕೂಡ ಸಂಭಂಧಪಟ್ಟ ಅಧಿಕಾರಿಗಳು

ಸ್ಪಂದಿಸಲಿಲ್ಲ. ಇದರಿಂದ ಫಲಾನುಭವಿಗಳುಈಯೋಜನೆಯಿಂದ ವಂಚಿತರಾಗಿದ್ದಾರೆ.

ನಿವಾಸಿಗರವಿಳಾಸಇನ್ನಿತರಮೂಲ ನಿವೇಶನದದಾಖಲಾತಿಗಳುಇರಲಾರದ ಕಾರಣಕ್ಕೆಸರ್ಕಾರದಯೋಜನೆಗಳಿಂದ ವಂಚಿತರಾಗುತ್ತಿರುವರು.ಈವಿಚಾರವಾಗಿ ಆಗಸ್ಟ್18ಹಾಗೂ19ರಂದುನಾವು ಧರಣೆ ಕೈಗೊಂಡ ಸ್ಥಳಕ್ಕೆ ಔರಾದ್ ತಹಸಿಲ್ದಾರರುಹಾಗೂಔರಾದ್‌ಪಟ್ಟಣ ಪಂಚಾಯತಮುಖ್ಯಾಧಿಕಾರಿಗಳು ಬಂದುಲಿಖಿತರೂಪದಲ್ಲಿನಮ್ಮೆಲ್ಲ ಸಮಸ್ಯೆಗಳನ್ನು ಬಗೆಹರಿಸುವುದಾಗಿ ಬರೆದುಕೊಟ್ಟಿದ್ದರು. ಭರವಸೆನೀಡಿ ಮೂರುತಿಂಗಳಾದರೂಯಾವುದೇ ಕ್ರಮವಹಿಸದೇನಮಗೆಅನ್ಯಾಯ ಎಸಗಿದ್ದಾರೆ ಎಂದು ಹರಿಹೈದರು.

ಈವಿಚಾರವಾಗಿಮಾಜಿಸಚಿವರು ಹಾಗೂಹಾಲಿಶಾಸಕರಾದಪ್ರಭುಚವ್ಹಾಣ ಅವರಿಗೂಈವಿಚಾರವಾಗಿಮನವರಿಕೆ ಮಾಡಿದಾಗಲೂಯಾವುದೇಕ್ರಮ ವಹಸದೇಇರುವುದುವಿಪರ್ಯಾಸ. ವಿಶೇಷವಾಗಿಬಸವನವಾಡಿತಾಂಡಾ ಸಂಪೂರ್ಣವಾಗಿಸರ್ಕಾರಿಜಮಿನು ಆಗಿರುವುದರಿಂದಇದುತಹಸಿಲ್ದಾರರ ವ್ಯಾಪ್ತಿಗೆ, ಉಳಿದ11 ತಾಂಡಾಗಳು ಪುರಸಭೆ ವ್ಯಾಪ್ತಿಗೊಳಪಡುತ್ತವೆ. ನಮ್ಮ 12 ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ, ಜಿಲ್ಲಾಧಿಕಾರಿಗಳು, ಸರ್ಕಾರದಮುಖ್ಯ ಕಾರ್ಯದರ್ಶಿ, ಜಿಲ್ಲಾನಗರಾಭಿವೃದ್ಧಿ ಕೋಶದಯೋಜನಾನಿರ್ದೇಶಕರಿಗೆ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನಆಗಲಿಲ್ಲ. ಇದರಿಂದ ಪುರಸಭೆಮುಖ್ಯಾಧಿಕಾರಿಹಾಗೂ ಡಿ.ಯು.ಡಿ.ಸಿ ಪಿ.ಡಿ ಇಬ್ಬರು ಈ ಅಕ್ರಮದಲ್ಲಿಶಾಮಿಲಾಗಿದ್ದಾರೆಎಂಬುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಇ ಖಾತಾ ನೀಡಲು 25 ಸಾವಿರ ಲಂಚ ಪಡೆಯುತ್ತಿದ್ದಾರೆ. ಬಸವನವಾಡಿತಾಂಡಾ ನಿವಾಸಿಗಳಿಗೆ ಹಕ್ಕು ಪತ್ರ ನೀಡದೇ ಅನ್ಯಾಯಎಸಗುತ್ತಿದ್ದಾರೆ. ಈಎಲ್ಲ ಬೆಳವಣಿಗೆಗಳನ್ನು ಗಮನದಲ್ಲಿರಿಸಿ ನ.17 ಅಕ್ರಮನಿವೇಶನಗಳನ್ನುಸಕ್ರಮ ಮಾಡಿಕೊಟ್ಟು ಇ ಖಾತಾ ಪ್ರಮಣ ಪತ್ರ ನೀಡಲು ಅಚಿತಿಮ ಗಡುವು ನೀಡಲಾಗಿದೆ. ಇದನ್ನು ಮೀರಿದರೆ ಮರುದಿವಸಅಂದರೆನ.18ರಂದು ಪ್ರತಿಭಟನೆ ಹಮ್ಮಿಕೊಳ್ಳಲು ತಿರ್ಮಾನಿಸಲಾಗಿದೆ ಎಂದರು.

ಭೀಮರಾವರಾಠೋಡ್, ಸಂಜು ಚವ್ಹಾಣ, ದಿನೇಶರಠೋಡ್, ರಾಹುಲ ಚವ್ಹಾಣ, ಸುಧಾಕರ್‌ರಠೋಡ್‌ಹಾಗೂ ಇತರರುಪತ್ರಿಕಾಗೋಷ್ಠಿಯಲ್ಲಿದ್ದರು.

## ಮಕ್ಕಳ ಸಹಾಯವಾಣಿ ಸಂಖ್ಯೆ 1098 ಅಳವಡಿಕೆ ಕಡ್ಡಾಯ-ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ

ಬೀದರ, ನವೆಂಬರ್.07 (ಕರ್ನಾಟಕ ವಾರ್ತೆ): ಬೀದರ ಜಿಲ್ಲೆಯ ಎಲ್ಲಾ ಜಿಲ್ಲಾ, ತಾಲ್ಲೂಕು, ಹೋಬಳಿ, ಗ್ರಾಮ ಪಂಚಾಯಿತಿ ಮತ್ತು ಗ್ರಾಮ ಮಟ್ಟದ ಸರ್ಕಾರಿ ಕಛೇರಿ, ಅರೆ ಸರ್ಕಾರಿ,

ಶೈಕ್ಷಣಿಕ ಸಂಸ್ಥೆಗಳು, ಖಾಸಗಿ ಸ್ವಯಂ ಸೇವಾ ಸಂಸ್ಥೆಗಳು ಸೇರಿದಂತೆ ಎಲ್ಲಾ ಕಟ್ಟಡಗಳ ಮೇಲೆ ಮಕ್ಕಳ ಸಹಾಯವಾಣಿ 1098 ನಾಮ ಫಲಕ ಅಳವಡಿಕೆ ಕಡ್ಡಾಯವಾಗಿದೆ ಎಂದು ಬೀದರ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಜಿಲ್ಲಾ, ತಾಲ್ಲೂಕು, ಹೋಬಳಿ, ಗ್ರಾಮ ಪಂಚಾಯಿತಿ ಮತ್ತು ಗ್ರಾಮ ಮಟ್ಟದ ಸರ್ಕಾರಿ ಕಛೇರಿ, ಅರೆ ಸರ್ಕಾರಿ, ಶೈಕ್ಷಣಿಕ ಸಂಸ್ಥೆಗಳು, ಖಾಸಗಿ ಸ್ವಯಂ ಸೇವಾ ಸಂಸ್ಥೆಗಳು ಸೇರಿದಂತೆ ಎಲ್ಲಾ ಕಟ್ಟಡಗಳಲ್ಲಿ ಮಕ್ಕಳ ಸಹಾಯವಾಣಿ 1098 ನಾಮ ಫಲಕವನ್ನು ಕಡ್ಡಾಯವಾಗಿ ಅಳವಡಿಸಲು



ಕ್ರಮ ವಹಿಸುವಂತೆ ಸೂಚಿಸಿ, ಸುತ್ತೋಲೆಯನ್ನು ಸರ್ಕಾರವು ಹೊರಡಿಸಿರುತ್ತದೆ.

ಮಕ್ಕಳ ಹಕ್ಕುಗಳ ರಕ್ಷಣೆ ಇಂದಿನ ತುರ್ತು ಅಗತ್ಯವಾಗಿದೆ. ಈಗಾಗಲೇ ಅನುಷ್ಠಾನಗೊಂಡಿರುವ ಮಿಷನ್ ವಾತ್ಸಲ್ಯ ಯೋಜನೆಯೂ ಮಕ್ಕಳ ಅಭಿವೃದ್ಧಿ ಹಾಗೂ ರಕ್ಷಣೆಯ ಆದ್ಯತೆಯನ್ನು ಸಾಧಿಸುವ ಒಂದು ಮಾರ್ಗವಾಗಿದ್ದು, ಸಂಕಷ್ಟದಲ್ಲಿನ ಹಾಗೂ ಸವಾಲಿನಲ್ಲಿರುವ ಮಕ್ಕಳ ಹಿತ ರಕ್ಷಣೆಗೆ ಹೆಚ್ಚು ಒತ್ತು ನೀಡುತ್ತಿದೆ. ಇಂತಹ ಮಕ್ಕಳ ಗುರುತಿಸುವಿಕೆ, ಸಂಕಷ್ಟ ಸ್ಥಿತಿಯಲ್ಲಿ ಮಾಹಿತಿ ಹಂಚಿಕೆ ಹಾಗೂ ಪುನರ್ವಸತಿ ಸೇವೆ ಒದಗಿಸುವಲ್ಲಿ ಮಕ್ಕಳ ಸಹಾಯವಾಣಿ 1098 ಮಹತ್ವದ ಪಾತ್ರ ವಹಿಸುತ್ತದೆ. ಈ ಸಂಖ್ಯೆಯನ್ನು ವ್ಯಾಪಕವಾಗಿ ಪ್ರಚಾರ ಮಾಡಿದ್ದಲ್ಲಿ ಬಾಲ್ಯ ವಿವಾಹ, ಬಾಲಕಾರ್ಮಿಕತೆ, ಸಂಕಷ್ಟದಲ್ಲಿನ ಮಕ್ಕಳ ರಕ್ಷಣೆ ಸೇರಿದಂತೆ ವಿವಿಧ ರೀತಿಯ ಮಕ್ಕಳ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸಲು ಸಾಧ್ಯವಾಗಲಿದೆ.

ಬಾಲ್ಯವಿವಾಹ, ಪೋಕ್ಸೋ, ಬಾಲಗರ್ಭಿಣಿ ಪ್ರಕರಣಗಳು ಹೆಚ್ಚಾಗಿ ವರದಿಯಾಗುತ್ತಿರುವುದು ಆತಂಕಕಾರಿ ವಿಚಾರವಾಗಿದೆ. ಮಕ್ಕಳ ಸಹಾಯವಾಣಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ,

ಮಕ್ಕಳ ಕಲ್ಯಾಣ ಸಮಿತಿ ಇತ್ಯಾದಿ ಸುರಕ್ಷಿತ ಬೆಂಬಲ ವ್ಯವಸ್ಥೆ ಇರುವುದರ ಕುರಿತು ಮಕ್ಕಳಿಗೆ ಮಾಹಿತಿ ಇರಬೇಕಾಗಿರುತ್ತದೆ. ಈ ನಿಟ್ಟಿನಲ್ಲಿ ಸಾರ್ವಜನಿಕರು, ವಿವಿಧ ಇಲಾಖೆಗಳ ಅಧಿಕಾರಿ/ಸಿಬ್ಬಂದಿಗಳಿಗೂ ಸಹ ಈ ಕುರಿತು ಮಾಹಿತಿ ಇದ್ದಲ್ಲಿ ಮಕ್ಕಳಿಗೆ ಸಕಾಲದಲ್ಲಿ ಸ್ಪಂದನೆ ಮತ್ತು ಅಗತ್ಯ ಬೆಂಬಲ ಪಡೆಯಲು ಸಾಧ್ಯವಾಗುತ್ತದೆಂದು ಅವರು ತಿಳಿಸಿದ್ದಾರೆ.

# ನವೆಂಬರ್ 11 ರಂದು ವೀರವನಿತೆ ಒನಕೆ ಓಬವ್ವ ಜಯಂತಿ ಆಚರಣೆ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ನ.07: ಕಲಬುರಗಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರಪಾಲಿಕೆ ಹಾಗೂ ಜಿಲ್ಲಾ ಪಂಚಾಯತ್ ಇವುಗಳ ಸಂಯುಕ್ತಾಶ್ರಯದಲ್ಲಿ ವೀರವನಿತೆ ಒನಕೆ ಓಬವ್ವ ಜಯಂತಿ ಆಚರಣೆ ಕಾರ್ಯಕ್ರಮವನ್ನು ನವೆಂಬರ್ 11 ರಂದು ಮಂಗಳವಾರ ಬೆಳಿಗ್ಗೆ 11.30 ಗಂಟೆಗೆ ಕಲಬುರಗಿಯ ಡಾ. ಎಸ್.ಎಂ. ಪಂಡಿತ ರಂಗಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ.

ರಾಜ್ಯಸಭೆಯ ವಿರೋಧ ಪಕ್ಷದ ನಾಯಕರು ಹಾಗೂ ರಾಜ್ಯಸಭಾ ಸದಸ್ಯ ಡಾ. ಮಲ್ಲಿಕಾರ್ಜುನ ಖರ್ಗೆ ಅವರು ಘನ ಉಪಸ್ಥಿತಿ ವಹಿಸುವರು. ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವರಾದ ಪ್ರಿಯಾಂಕ್ ಖರ್ಗೆ ಅವರು ಕಾರ್ಯಕ್ರಮವನ್ನು ಉದ್ಘಾಟಿಸುವರು.

ರಾಜ್ಯದ ವೈದ್ಯಕೀಯ ಶಿಕ್ಷಣ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಖಾತೆ ಸಚಿವರಾದ ಡಾ. ಶರಣಪ್ರಕಾಶ ಪಾಟೀಲ, ಆಳಂದ ಶಾಸಕ ಹಾಗೂ ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷರಾದ ಬಿ.ಆರ್. ಪಾಟೀಲ, ಕರ್ನಾಟಕ ರೇಷ್ಮೆ ಉದ್ದಿಮೆಗಳ ನಿಗಮದ ನಿಯಮಿತದ ಅಧ್ಯಕ್ಷೆ ಹಾಗೂ ಉತ್ತರ ಶಾಸಕಿ ಕನೀಜ್ ಫಾತೀಮಾ, ಜೇವರ್ಗಿ ಶಾಸಕ ಮತ್ತು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಡಾ. ಅಜಯಸಿಂಗ್ ಅವರು ಗೌರವ ಉಪಸ್ಥಿತಿವಹಿಸುವರು. ಕಲಬುರಗಿ ದಕ್ಷಿಣ ಶಾಸಕ ಅಲ್ಲಮಪ್ರಭು ಪಾಟೀಲ ಅವರು ಕಾರ್ಯಕ್ರಮದ ಅಧ್ಯಕ್ಷತೆವಹಿಸುವರು.

ಕಲಬುರಗಿ ಲೋಕಸಭಾ ಸದಸ್ಯ ರಾಧಾಕೃಷ್ಣ ದೊಡ್ಡಮನಿ, ಬೀದರ ಲೋಕಸಭಾ ಸದಸ್ಯ ಸಾಗರ ಖಂಡ್ರೆ, ಶಾಸಕರುಗಳಾದ ಎಂ.ವೈ. ಪಾಟೀಲ, ಬಸವರಾಜ ಮತ್ತಿಮಡು, ಡಾ. ಅವಿನಾಶ ಉಮೇಶ ಜಾಧವ, ವಿಧಾನ ಪರಿಷತ್ ಶಾಸಕರುಗಳಾದ ಶಶೀಲ ಜಿ. ನಮೋಶಿ, ಡಾ. ಬಿ.ಜಿ.ಪಾಟೀಲ, ಡಾ. ಚಂದ್ರಶೇಖರ ಪಾಟೀಲ ಹುಮನಾಬಾದ, ತಿಮ್ಮಣ್ಣಪ್ಪ ಕಮಕನೂರ, ಸುನೀಲ್ ವಲ್ಲ್ಯಾಪುರೆ, ಡಾ. ತಳವಾರ ಸಾಬಣ್ಣ, ಜಗದೇವ ಗುತ್ತೇದಾರ್, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ಅಧ್ಯಕ್ಷ ದೇವಿಂದ್ರಪ್ಪ ಮರತೂರ, ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯ ಅಧ್ಯಕ್ಷ ಸೈಯದ್ ಮುಹಮ್ಮದ್ ಅಲಿ ಅಲ್ ಹುಸೇನಿ, ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಬ್ದುಲ್ ರಶೀದ, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಅಧ್ಯಕ್ಷ ಅರುಣಕುಮಾರ್ ಎಂ.ವೈ. ಪಾಟೀಲ, ಜೆಸ್ಕಾಂ ಅಧ್ಯಕ್ಷ ಪ್ರವೀಣ ಪಾಟೀಲ ಹರವಾಳ, ಕರ್ನಾಟಕ ರಾಜ್ಯ ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಸೈಯ್ಯದ್ ಮಹೆಬೂಬ್ ಚಿಸ್ತಿ ಸಾಹೇಬ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾ ಅಧ್ಯಕ್ಷೆ ಚಂದ್ರಿಕಾ ಪರಮೇಶ್ವರ್, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಜಹರ್ ಆಲಂ ಖಾನ್ ಹಾಗೂ ಮಹಾನಗರಪಾಲಿಕೆ ಮಹಾಪೌರ ವರ್ಷಾ ರಾಜೀವ ಜಾನೆ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು.

ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತೆ ಜಹೀರಾ ನಸೀಮ್, ಜೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಕೃಷ್ಣ ಭಾಜಪೇಯಿ, ಕಲಬುರಗಿ ಈಶಾನ್ಯ ವಲಯದ ಪೊಲೀಸ್ ಉಪ ಮಹಾನಿರೀಕ್ಷಕ ಶಾಂತನು ಸಿನ್ಹಾ, ಕೆ.ಕೆ.ಆರ್.ಟಿ.ಸಿ. ವ್ಯವಸ್ಥಾಪಕ ನಿರ್ದೇಶಕಿ ಡಾ. ಬಿ. ಸುಶೀಲಾ, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಕಾರ್ಯದರ್ಶಿ ನಲಿನ್ ಅತುಲ್, ಕಲಬುರಗಿ ವಿಭಾಗದ ಶಾಲಾ ಶಿಕ್ಷಣ ಇಲಾಖೆಯ ಅಪರ ಆಯುಕ್ತ ಪಾಂಡ್ವೆ ರಾಹುಲ್ ತುಕಾರಾಮ್ ಹಾಗೂ ಕರ್ನಾಟಕ ಛಲವಾದಿ ಮಹಾಸಭಾ ಕಲಬುರಗಿ ಜಿಲ್ಲಾಧ್ಯಕ್ಷರಾದ ಮಹಾದೇವ ಮೋಘಾ ಅವರು ವಿಶೇಷ ಆಹ್ವಾನಿತರಾಗಿ ಪಾಲ್ಗೊಳ್ಳುವರು. ಕಾರ್ಯಕ್ರಮದಲ್ಲಿ ಕಲಬುರಗಿ ಸರ್ಕಾರಿ ಕಾಲೇಜಿನ ಇತಿಹಾಸ ವಿಭಾಗದ ಮುಖ್ಯಸ್ಥರಾದ ಡಾ. ವಿಜಯಕುಮಾರ ಎಚ್. ಸಾಲಿಮನಿ ಅವರು ವಿಶೇಷ ಉಪನ್ಯಾಸ ನೀಡುವರು.

# ಬಾಲಯೇಸು ಪುಣ್ಯಕ್ಷೇತ್ರದಲ್ಲಿ ಪಲ್ಲಕ್ಕಿ ಮೆರವಣಿಗೆ



ಭಾಲ್ಕಿ: ನಾವು ಭರವಸೆಯ ಯಾತ್ರಿಕರು, ಸಂಭ್ರಮಿಸೋಣ, ಸೇವೆಗೈಯೋಣ ಎನ್ನುವ ಧೇಯ ವಾಕ್ಯದೊಂದಿದೆ ಬಾಲಯೇಶು ಪುಣ್ಯಕ್ಷೇತ್ರದ ಜಾತ್ರಾಮಹೋತ್ಸವವು ಶುಕ್ರವಾರ ವೈಭವದ ಪಲ್ಲಕ್ಕಿ ಮೆರವಣಿಗೆಯೊಂದಿಗೆ ಚಾಲನೆಗೊಂಡಿತು.

ಗುಲಬರ್ಗಾ ಧರ್ಮಕ್ಷೇತ್ರದ ಧರ್ಮಾಧ್ಯಕ್ಷ ರಾಬರ್ಟ ಮೈಕಲ್ ಮಿರಾಂದ ರವರು ಮೆರವಣಿಗೆಗೆ ಚಾಲನೆ ನೀಡಿದರು. ಮೆರವಣಿಗೆಯು ಪಟ್ಟಣದ ಡಾ। ಬಿ.ಆರ್.ಅಂಬೇಡ್ಕರ್ ವೃತ್ತದಿಂದ ಪ್ರಾರಂಭವಾಗಿ ಮಹಾತ್ಮಾಗಾಂಧಿ ವೃತ್ತ, ಬಸವೇಶ್ವರ ವೃತ್ತ, ಸ್ವಾಮಿ ವಿವೇಕಾನಂದ ವೃತ್ತದ ಮೂಲಕ ಸಾಗಿ ಬಸ್ ಡಿಪೋ ಮೂಲಕ ಹಾದು ಬಾಲಯೇಸು ಪುಣ್ಯಕ್ಷೇತ್ರದಲ್ಲಿ ಸಮಾವೇಶ ಗೊಂಡಿತು. ಮೆರವಣಿಗೆಯಲ್ಲಿ ಬಾಲಯೇಸುವಿನ ಭಾವಚಿತ್ರಗಳು, ಪುಟಾಣಿ ಮಕ್ಕಳ ಕೋಲಾಟ, ಯೇಶು ಕ್ರಿಸ್ತರ ಶಿಲುಬೆ ಪ್ರತಿಮೆಯೊಂದಿಗೆ ಹೆಜ್ಜೆ ಹಾಕುತ್ತಾ ಭಕ್ತಾದಿಗಳು ಸಾಗಿ ಬಂದಿರುವುದು ಸಂತಸ ತಂದಿತು. ಮೆರವಣಿಗೆಯಲ್ಲಿ ಗುಲಬರ್ಗಾ ಧರ್ಮಕ್ಷೇತ್ರದ ಶ್ರೇಷ್ಠಗುರು ಫಾದರ ಸಂತೋಷ ಬಾಪು, ಪ್ರಮುಖರಾದ ಬಾಲಯೇಸು ಪುಣ್ಯಕ್ಷೇತ್ರ ಭಾಲ್ಕಿಯ ಫಾದರ್ ಡೇವಿಡ್ ಅಂಟೋನಿ, ಹಲಬರ್ಗಾ ಧರ್ಮಕ್ಷೇತ್ರದ ಫಾದರ್ ಸಂತೋಷ, ವಲಯದ ಮುಖ್ಯಗುರು ಫಾದರ್ ಕ್ಲೇರಿ ಡಿ ಸೋಜ, ಶ್ರೀನಿವಾಸ ಬೇಂದ್ರೆ, ವಿಯಕುಮಾರ ಗುತ್ತೇದಾರ ಬಾಜೋಳಗಾ ಮತ್ತಿತರರು ಇದ್ದರು.

# ಮಕ್ಕಳಲ್ಲಿನ ಪ್ರತಿಭೆ ಅರಳಿಸುವುದೇ ಪ್ರತಿಭಾಕಾರಂಜಿ





ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ: ಪುಟಾಣಿ ಮಕ್ಕಳಲ್ಲಿನ ಪ್ರತಿಭೆಯನ್ನು ಅರಳಿಸುವುದೇ ಪ್ರತಿಭಾ ಕಾರಂಜಿಯ ಮೂಲ ಉದ್ದೇಶವಾಗಿದೆ ಎಂದು ಗ್ರಾ.ಪಂ. ಅಧ್ಯಕ್ಷ ಪ್ರಶಾಂತ ಮಾಳಗೆ ಹೇಳಿದರು. ತಾಲೂಕಿನ ಕಲವಾಡಿ ಗ್ರಾಮದ ಮಹಾತ್ಮಾಗಾಂಧಿ ಪ್ರೌಢಶಾಲೆಯಲ್ಲಿ ಶುಕ್ರವಾರ ಆಯೋಜಿಸಿದ್ದ ಕಲವಾಡಿ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಗ್ರಾಮೀಣ ಭಾಗದ ಮಕ್ಕಳಲ್ಲಿ ಸಾಕಷ್ಟು ಪ್ರತಿಭೆ ಅಡಗಿದೆ, ವೇದಿಕೆ ಸಿಗದ ಕಾರಣ ಅವರ ಪ್ರತಿಭೆ ಅರಳುವ ಮುಂಚೆಯೇ ಕರಗಿಹೋಗುತ್ತಿತ್ತು. ಸರ್ಕಾರ ಪ್ರತಿಭಾ ಕಾರಂಜಿ, ಕಲೋತ್ಸವ ವೇದಿಕೆಗಳನ್ನು ಕಲ್ಪಿಸಿಕೊಟ್ಟು ಮಕ್ಕಳಲ್ಲಿನ ಪ್ರತಿಭೆ ಹೊರಹಾಕಲು ಸಹಕಾರಿಯಾಗಿದೆ. ಎಲ್ಲಾ ಮಕ್ಕಳು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಹೇಳಿದರು.

ನಿವೃತ್ತ ಮುಖ್ಯಶಿಕ್ಷಕ ಜಯರಾಜ ದಾಬಶೆಟ್ಟಿ ಮಾತನಾಡಿ, ಪ್ರತಿಭಾ ಕಾರಂಜಿಯಲ್ಲಿ ಭಾಗವಹಿಸುವ ಎಲ್ಲಾ ಮಕ್ಕಳಿಗೆ ತೀರ್ಪುಗಾರರು ಸಮಾನವಾಗಿ ಕಾಣಬೇಕು. ಯಾವುದೇ ತಾರತಮ್ಯ ಮಾಡದೆ ಉತ್ತಮ ಫಲಿತಾಂಶನೀಡಿ ಪ್ರತಿಭಾವಂತ ಮಕ್ಕಳನ್ನು ಗುರುತಿಸುವ ಕಾರ್ಯವಾಗಬೇಕು ಎಂದು ಹೇಳಿದರು. ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕು ಅಧ್ಯಕ್ಷ ಸೂರ್ಯಕಾಂತ ಸುಂಟೆ ಮಕ್ಕಳಲ್ಲಿ ಹುದುಗಿರುವ ಪ್ರತಿಭೆ ಗುರುತಿಸುವ ಕಾರ್ಯವಾಗಬೇಕು ಎಂದು ಸಲಹೆ ನೀಡಿದರು. ಮುಖ್ಯಶಿಕ್ಷಕ ಶಿವಕುಮಾರ ವಾಡಿಕರ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸಿಆರ್‌ಪಿ ಸಂತೋಷ ಧಬಾಲೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಪ್ರೌಢಶಾಲಾ ಶಿಕ್ಷಕರ ಸಂಘದ ಪ್ರಧಾನ ಕಾರ್ಯದರ್ಶಿ ಬಾಲಾಜಿ ಕಾಂಬಳೆ, ಸಿಆರ್‌ಪಿ ಮಹೇಶ ಕೊರಾಳೆ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕು ಕಾರ್ಯದರ್ಶಿ ಅಶೋಕ ಕುಂಬಾರ, ಸಿಆರ್‌ಪಿ ಅಶೋಕ ಕಲಾಣೆ, ಸಿಆರ್‌ಪಿ ಸುಭಾಷ ಮೂಲಗೆ, ಮುಖ್ಯಶಿಕ್ಷಕ ಸಂತೋಷಕುಮಾರ ವಾಡೆ, ಸಂಗಪ್ಪ ಬಿರಾದಾರ, ಬಸವರಾಜ ತೇಗಂಪೂರೆ, ಗದಗೆಪ್ಪಾ ಪಾಟೀಲ, ಉತ್ತಮ ಸಿಂಧೆ, ಸಂದೀಪ ಉಮಾಜಿ, ಅಂಬಣ್ಣಾ ಸಾಗಾರ, ಶಿಕ್ಷಕಿ ಕಲ್ಪನಾ, ಸಾಯಮ್ಮಾ ಪುಣೆ, ವಿದ್ಯಾವತಿ, ಗಾಯತ್ರಿ.ಬಿ.ಎಸ್, ವಿಶ್ವನಾಥ, ಗಣೇಶ ಉಪಸ್ಥಿತರಿದ್ದರು.

# ಕೆ.ಪಿ.ಇ.ಸೊಸೈಟಿಯ ಸಿದ್ಧಾರ್ಥ ಕಾನೂನು ಮಹಾವಿದ್ಯಾಲಯದ ವಿದ್ಯಾರ್ಥಿಗಳ ಸಾಧನೆ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ: ಕೆ.ಪಿ.ಇ.ಸೊಸೈಟಿಯ ಸಿದ್ಧಾರ್ಥ ಕಾನೂನು ಮಹಾವಿದ್ಯಾಲಯದ ವಿದ್ಯಾರ್ಥಿಗಳಾದ ಶ್ರೀಮತಿ ವಿಜಯಲಕ್ಷ್ಮೀ 9ನೇ ಖಚಿಟಿಇ (ಇಟಿರಟ್ಖು) ಹಾಗೂ ಶ್ರೀಮತಿ ರೇಖಾ ಶಿವಯೋಗಿ 3ನೇ Rank (kannada)ದಲ್ಲಿ ಪಡೆದಿರುತ್ತಾರೆ.

ಈ ವಿದ್ಯಾರ್ಥಿಗಳಿಗೆ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಹುಬ್ಬಳ್ಳಿಯಲ್ಲಿ ನಡೆಸಿದ 7 ನೇ ಘಟಿಕೋತ್ಸವದ ಸಮಾರಂಭದಲ್ಲಿ ಖಚಿಟಿಇಗಳನ್ನು ಹಾಗೂ ಪದವಿಯನ್ನು ಪ್ರಧಾನ ಮಾಡಲಾಯಿತು. ಮಹಾವಿದ್ಯಾಲಯಕ್ಕೆ ಕೀರ್ತಿ ತಂದ ಈ ವಿದ್ಯಾರ್ಥಿಗಳಿಗೆ ಸಂಸ್ಥೆಯ ಅಧ್ಯಕ್ಷರಾದ ರಾಧಕೃಷ್ಣ ದೊಡ್ಡಮನಿ, ಕಾರ್ಯದರ್ಶಿಗಳಾದ ಶಾಂತಪ್ಪ ಸೂರನ್, ಆಡಳಿತಾಧಿಕಾರಿಯಾದ ಚಂದ್ರಶೇಖರ್ ಶೀಲವಂತ ಹಾಗೂ ಪ್ರಾಚಾರ್ಯರಾದ ಡಾ.ಎಸ್. ಚಂದ್ರಶೇಖರ್, ಸಂಸ್ಥೆಯ ಎಲ್ಲ ಆಡಳಿತ ಮಂಡಳಿಯವರು, ಉಪನ್ಯಾಸಕ ವರ್ಗದವರು ಶುಭಕೋರಿದ್ದಾರೆ.

# ರಾಜ್ಯದ ವೈದ್ಯಕೀಯ ಶಿಕ್ಷಣ ಸಚಿವರ ಪ್ರವಾಸ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ನ.07: ರಾಜ್ಯದ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರಾದ ಡಾ. ಶರಣಪ್ರಕಾಶ ಆರ್. ಪಾಟೀಲ್ ಅವರು ಹೈದ್ರಾಬಾದ್‌ದಿಂದ ರಸ್ತೆ ಮೂಲಕ ನವೆಂಬರ್ 8 ರಂದು ಶನಿವಾರ ಮಧ್ಯಾಹ್ನ 2.30 ಗಂಟೆಗೆ ಕಲಬುರಗಿಗೆ ಆಗಮಿಸಿ, ಸ್ಥಳೀಯ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಕಲಬುರಗಿಯಲ್ಲಿ ವಾಸ್ತವ್ಯ ಮಾಡುವರು. ನವೆಂಬರ್ 9 ರಿಂದ 12 ರವರೆಗೆ ಕಲಬುರಗಿಯಲ್ಲಿ ಸ್ಥಳೀಯ ಕಾರ್ಯಕ್ರಮಗಳಲ್ಲಿ ವಾಸ್ತವ್ಯ ಮಾಡುವರು. ನವೆಂಬರ್ 13 ರಂದು ಗುರುವಾರ ಬೆಳಿಗ್ಗೆ 5 ಗಂಟೆಗೆ ಕಲಬುರಗಿಯಿಂದ ರಸ್ತೆ ಮೂಲಕ ಬೀದರಿಗೆ ಪ್ರಯಾಣಿಸಿ, ನಂತರ ಬೆಳಿಗ್ಗೆ 8.05 ಗಂಟೆಗೆ ಬೀದರದಿಂದ ವಿಮಾನದ ಮೂಲಕ ಬೆಂಗಳೂರಿಗೆ ಪ್ರಯಾಣಿಸುವರು.

# ನವೆಂಬರ್ 10 ರಂದು ಫೋನ್–ಇನ್–ಕಾರ್ಯಕ್ರಮ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ನ.07.: ಕಲಬುರಗಿ ವಿಭಾಗ–2ರ ವ್ಯಾಪ್ತಿಯಲ್ಲಿ ಬರುವ ಕಲಬುರಗಿ ಗ್ರಾಮೀಣ, ಕಲಬುರಗಿ ದಕ್ಷಿಣ, ಆಳಂದ, ಜೇವರ್ಗಿ, ಯಡ್ರಾಮಿ ಹಾಗೂ ಅಫಜಲಪೂರ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳಲ್ಲಿನ ಸಾರ್ವಜನಿಕ ಪ್ರಯಾಣಿಕರ, ವಿದ್ಯಾರ್ಥಿ/ವಿದ್ಯಾರ್ಥಿನಿಯರ ಬಸ್ ಸಮಸ್ಯೆಗೆ ಸಂಬಂಧಿಸಿದಂತೆ ನಮ್ಮ ಪರಿಹಾರ ಅಡಿಯಲ್ಲಿ ಇದೇ ನವೆಂಬರ್ 10 ರಂದು ಸೋಮವಾರ ಸಂಜೆ 4 ರಿಂದ 5 ಗಂಟೆಯವರೆಗೆ ಫೋನ್–ಇನ್–ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಕಲಬುರಗಿ ವಿಭಾಗ–2ರ ವಿಭಾಗೀಯ ನಿಯಂತ್ರಣಾಧಿಕಾರಿಗಳು ತಿಳಿಸಿದ್ದಾರೆ. ತಮ್ಮ ಗ್ರಾಮಗಳಲ್ಲಿನ ಬಸ್‌ಗಳ ಕೊರತೆ, ಬಸ್ ಸಮರ್ಪಕವಾಗಿ ಬಾರದಿರುವುದು, ಬಸ್‌ಪಾಸ್ ಹೊಂದಿರುವ ವಿದ್ಯಾರ್ಥಿಗಳನ್ನು ಬಸ್ಸಿನಲ್ಲಿ ಹತ್ತಿಸಿಕೊಳ್ಳದಿದ್ದಲ್ಲಿ, ತಮ್ಮ ಊರ,

ಬಡಾವಣೆಯಲ್ಲಿ ಬಸ್ ನಿಲ್ಲದಿರುವುದು ಹಾಗೂ ಬಸ್‌ನಿಲ್ದಾಣಗಳ ವ್ಯವಸ್ಥೆ ಸರಿಯಾಗಿ ಇಲ್ಲದಿದ್ದಲ್ಲಿ ಮತ್ತು ಇಂತಹ ಹಲವಾರು ಸಮಸ್ಯೆಗಳಿದ್ದಲ್ಲಿ ಸಾರ್ವಜನಿಕ ಪ್ರಯಾಣಿಕರು ಮೇಲ್ಕಂಡ ದಿನದಂದು ಮೊಬೈಲ್ ಸಂ–ಖ್ಯೆಗೆ 6366423880 ಕರೆ ಮಾಡಿ ತಿಳಿಸಬೇಕು. ಇಂತಹ ಹಲವಾರು ಸಮಸ್ಯೆಗಳಿಗೆ ಕಲಬುರಗಿ ವಿಭಾಗ–2ರ ವಿಭಾಗೀಯ ನಿಯಂತ್ರಣಾಧಿಗಳು ಉತ್ತರಿಸಲಿದ್ದಾರೆ.

# ಅತಿಥಿ ಉಪನ್ಯಾಸಕರ ಖಾಲಿ ಹುದ್ದೆಗೆ ಅರ್ಜಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ನ.07.: ಅಫಜಲಪುರ ತಾಲೂಕಿನ ಅರ್ಜುಣಗಿ ಮೊರಾರ್ಜಿ ದೇಸಾಯಿ ವಸತಿ ವಿಜ್ಞಾನ ಪದವಿ ಪೂರ್ವ ಕಾಲೇಜಿನಲ್ಲಿ ಖಾಲಿಯಿರುವ ಭೌತಶಾಸ್ತ್ರ ವಿಷಯದ ಹುದ್ದೆಗೆ ಅತಿಥಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ ಎಂದು ಅರ್ಜುಣಗಿ ಮೊರಾರ್ಜಿ ದೇಸಾಯಿ ವಿಜ್ಞಾನ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರು ತಿಳಿಸಿದ್ದಾರೆ. ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಎಂ.ಎಸ್ಸಿ. ಬಿ.ಇಡಿ. ವಿದ್ಯಾರ್ಹತೆ ಹೊಂದಿರಬೇಕು. ಅರ್ಹ ಅಭ್ಯರ್ಥಿಗಳು ಭರ್ತಿ ಮಾಡಿದ ಅರ್ಜಿಯೊಂದಿಗೆ ಅವಶ್ಯಕ ದಾಖಲಾತಿಗಳನ್ನು ಲಗತ್ತಿಸಿ 2025ರ ನವೆಂಬರ್ 12 ರೊಳಗಾಗಿ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಅರ್ಜುಣಗಿ ಮೊರಾರ್ಜಿ ದೇಸಾಯಿ ವಸತಿ ವಿಜ್ಞಾನ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರ ಮೊಬೈಲ್ ಸಂಖ್ಯೆ 9449906618 ಗೆ ಸಂಪರ್ಕಿಸಲು ಕೋರಲಾಗಿದೆ.

# ರಾಜೀವಗಾಂಧಿ ಅವರ ಮೂರ್ತಿ ಸ್ಥಾಪನೆ ಸಾರ್ವಜನಿಕರಿಂದ ಆಕ್ಷೇಪಣೆ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ನ.07.: ಕಲಬುರಗಿ ನಗರದ ಗಂಜ್ ರಸ್ತೆಯಲ್ಲಿರುವ ಕೆ.ಎಂ.ಎಫ್. ಡೈರಿ ಆವರಣದಲ್ಲಿ ಶ್ರೀ ರಾಜೀವಗಾಂಧಿ ಅವರ ಮೂರ್ತಿಯನ್ನು ಸ್ಥಾಪಿಸುವಂತೆ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ಅಧ್ಯಕ್ಷರಾದ ಶೇಖ ಹುಸೇನ ಇವರು ಮನವಿ ಪತ್ರ ಸಲ್ಲಿಸಿದ್ದಾರೆ.

ಈ ಕುರಿತು ಸಾರ್ವಜನಿಕರಿಂದ ಆಕ್ಷೇಪಣೆಗಳಿದ್ದಲ್ಲಿ 15 ದಿನದೊಳಗಾಗಿ ವಲಯ ಆಯುಕ್ತರು, ವಲಯ ಕಚೇರಿ–03, ಮಹಾನಗರ ಪಾಲಿಕೆ ಕಲಬುರಗಿ ಇಲ್ಲಿ ಲಿಖಿತ ರೂಪದಲ್ಲಿ ಆಕ್ಷೇಪಣೆ ಸಲ್ಲಿಸಬೇಕೆಂದು ಕಲಬುರಗಿ ಮಹಾನಗರ ಪಾಲಿಕೆಯ ವಲಯ ಕಚೇರಿ–3ರ ವಲಯ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಆಕ್ಷೇಪಣೆ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ನ.07.: ಕಲಬುರಗಿ ಮಹಾನಗರಪಾಲಿಕೆಯ ವ್ಯಾಪ್ತಿಯ ಹಳೆಯ ಕೇಂದ್ರ ಕಚೇರಿ ಮುಂಭಾಗದ ಗಾರ್ಡನ್ ಜಾಗದಲ್ಲಿ ದಿವಂಗತ ಮಾಜಿ ಪ್ರಧಾನಮಂತ್ರಿ ಶ್ರೀಮತಿ ಇಂದಿರಾ ಗಾಂಧಿಯವರ ಮೂರ್ತಿ ಸ್ಥಾಪಿಸಲು ನಿರ್ಣಯಿಸಲಾಗಿದ್ದು, ಈ ಕುರಿತು ಸಾರ್ವಜನಿಕರಿಂದ ತಕರಾರು/ಆಕ್ಷೇಪಣೆಗಳಿದ್ದಲ್ಲಿ ಪತ್ರಿಕಾ ಪ್ರಕಟಣೆಯು ಪತ್ರಿಕೆಗಳಲ್ಲಿ ಪ್ರಕಟಣೆಗೊಂಡ 15 ದಿನದೊಳಗಾಗಿ ಕಲಬುರಗಿ ಮಹಾನಗರ ಪಾಲಿಕೆ ಕೇಂದ್ರ ಕಛೇರಿ/ವಲಯ ಕಚೇರಿ–1ರಲ್ಲಿ ಸಲ್ಲಿಸಬೇಕೆಂದು ಕಲಬುರಗಿ ಮಹಾನಗರ ಪಾಲಿಕೆಯ ವಲಯ ಕಚೇರಿ–1ರ ವಲಯ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನಾಳೆ ಶಿವಶರಣ ಹರಳಯ್ಯ ನಾಟಕ ಪ್ರದರ್ಶನ



ಮಲ್ಲಮ್ಮ ನುಡಿ ವಾರ್ತೆ ಬೀದರ್. ನ. 07 :– ಜಾಗತಿಕ ಲಿಂಗಾಯತ ಮಹಾಸಭಾದ ಜಿಲ್ಲಾ ಘಟಕದ ವತಿಯಿಂದ ನಗರದ ಕೆ.ಇ.ಬಿ. ರಸ್ತೆಯಲ್ಲಿ ಇರುವ ಐ.ಎಂ.ಎ. ಹಾಲ್‌ನಲ್ಲಿ ನ. 9 ರಂದು ಸಂಜೆ 6ಕ್ಕೆ ಶಿವಶರಣ ಹರಳಯ್ಯ ನಾಟಕ ಪ್ರದರ್ಶನ ಏರ್ಪಡಿಸಲಾಗಿದೆ. ಭಾರತೀಯ ಬಸವ ಬಳಗದ ರಾಜ್ಯ ಅಧ್ಯಕ್ಷ ಬಾಬುವಾಲಿ ಉದ್ಘಾಟಿಸುವರು. ಬಸವಕಲ್ಯಾಣದ ಅನುಭವ ಮಂಟಪದ ಅಧ್ಯಕ್ಷ ಡಾ. ಬಸವಲಿಂಗ ಪಟ್ಟದ್ದೇವರು ಸಾನಿಧ್ಯ, ಜಾಗತಿಕ ಲಿಂಗಾಯತ ಮಹಾಸಭಾದ ಜಿಲ್ಲಾ ಘಟಕದ ಅಧ್ಯಕ್ಷ ಬಸವರಾಜ ಧನ್ನೂರ ಅಧ್ಯಕ್ಷತೆ ವಹಿಸುವರು. ಕರ್ನಾಟಕ ಜಾನಪದ ಅಕಾಡೆಮಿ ಸದಸ್ಯ ವಿಜಯಕುಮಾರ ಸೋನಾರೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಿದ್ರಾಮ ಸಿಂದೆ, ಡಾ. ವಿಜಯಶ್ರೀ ಬಶೆಟ್ಟಿ, ರೋಟರಿ ಕ್ಲಬ್ ಆಫ್ ಬೀದರ್ ನ್ಯೂ ಸೆಂಚುರಿಯ ಅಧ್ಯಕ್ಷ ನಾಗೇಶ ಪಾಟೀಲ, ಗಾನಯೋಗಿ ಪಂಚಾಕ್ಷರಿ ಗವಾಯಿ ಸೇವಾ ಸಂಘದ ಅಧ್ಯಕ್ಷ ಚಂದ್ರಶೇಖರ ಹೆಬ್ಬಾಳೆ, ಉದ್ಯಮಿ ಜೈರಾಜ ಖಂಡ್ರೆ, ರಂಗ ಕರ್ಮಿ ಸಂಗ್ರಾಮ ಎಂಗಳೆ, ಹರಳಯ್ಯ ಸಮಾಜದ ಜಿಲ್ಲಾ ಅಧ್ಯಕ್ಷ ಸುಭಾಷ್ ಹಮಿಲಾಪುರ, ಪ್ರಧಾನ ಕಾರ್ಯದರ್ಶಿ ರಾಜಕುಮಾರ ಟೆಳ್ಳೆಕರ್ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು. ಬಸವಾನುಯಾಯಿಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ನಾಟಕ ವೀಕ್ಷಿಸಬೇಕು ಎಂದು ಜಾಗತಿಕ ಲಿಂಗಾಯತ ಮಹಾಸಭಾದ ಜಿಲ್ಲಾ ಘಟಕದ ಅಧ್ಯಕ್ಷ ಬಸವರಾಜ ಧನ್ನೂರ ಮನವಿ ಮಾಡಿದ್ದಾರೆ.

# ಕರ್ನಾಟಕ ಸರ್ಕಾರ 'ಕನ್ನಡ ಸರ್ಕಾರ' ಆಗಲಿ : ಟಿ.ಎ. ನಾರಾಯಣಗೌಡ ಒತ್ತಾಸೆ



ಮಲ್ಲಮ್ಮ ನುಡಿ ವಾರ್ತೆ

ಬೀದರ್. ನ. 07 :– ಕರ್ನಾಟಕ ಸರ್ಕಾರ 'ಕನ್ನಡ ಸರ್ಕಾರ' ಆಗಬೇಕು ಎಂದು ಕರ್ನಾಟಕ ರಕ್ಷಣಾ ವೇದಿಕೆಯ ರಾಜ್ಯ ಅಧ್ಯಕ್ಷ ಟಿ.ಎ. ನಾರಾಯಣಗೌಡ ಒತ್ತಾಸೆ ವ್ಯಕ್ತಪಡಿಸಿದರು.

ಕರ್ನಾಟಕ ರಕ್ಷಣಾ ವೇದಿಕೆಯ ಜಿಲ್ಲಾ ಘಟಕದ ವತಿಯಿಂದ ಇಲ್ಲಿಯ ಪೂಜ್ಯ ಚನ್ನಬಸವ ಪಟ್ಟದ್ದೇವರು ರಂಗ ಮಂದಿರದಲ್ಲಿ ಶುಕ್ರವಾರ ಆಯೋಜಿಸಿದ್ದ ಕನ್ನಡ ದೀಕ್ಷೆ ಪ್ರತಿಜ್ಞೆಸ್ವೀಕಾರ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಕನ್ನಡಕ್ಕಾಗಿ ಎತ್ತುವ ಕೈಗಳಿಗೆ ಯಾವ ಕಾರಣಕ್ಕೂ ಕೊಳ ಹಾಕಬಾರದು ಎಂದು ಆಗ್ರಹಿಸಿದರು.

ಕರ್ನಾಟಕದಲ್ಲಿ ಕನ್ನಡ ನೆಲ, ಜಲ ಉಳಿದಿದ್ದರೆ, ಕನ್ನಡ ಉಸಿರಾಡುತ್ತಿದ್ದರೆ ಅದು ಕನ್ನಡ ಪರ ಹೋರಾಟಗಾರರಿಂದಲೇ ಹೊರತು ಸರ್ಕಾರದಿಂದಲ್ಲ ಎಂದು ತಿಳಿಸಿದರು. ಕನ್ನಡ ಹೋರಾಟಗಾರರು ಯಾವುದೇ ಕೊಲೆ, ಸುಲಿಗೆ ಮಾಡಿದವರಲ್ಲ. ಆದರೂ, ಅವರ ಮೇಲೆ ನೂರಾರು ಪ್ರಕರಣಗಳನ್ನು ದಾಖಲಿಸಲಾಗಿದೆ ಎಂದು ಆರೋಪಿಸಿದರು.

ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಆಗುವ ಮೊದಲು, ಆದ ನಂತರವೂ ಕನ್ನಡ ಹೋರಾಟಗಾರ ಮೇಲಿನ ಪ್ರಕರಣ ಹಿಂಪಡೆಯುವುದಾಗಿ ಅನೇಕ ಬಾರಿ ಭರವಸೆ ನೀಡಿದ್ದರು. ಆದರೆ, ಈವರೆಗೂ ಅದನ್ನು ಈಡೇರಿಸಿಲ್ಲ. ಮತ್ತಷ್ಟು ಪ್ರಕರಣಗಳನ್ನು ದಾಖಲು ಮಾಡಲಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಕರ್ನಾಟಕದಲ್ಲಿ ನಾಮಫಲಕಗಳಲ್ಲಿ ಶೇ 60 ರಷ್ಟು ಭಾಗದಲ್ಲಿ ಕನ್ನಡ ಬಳಸಬೇಕೆಂಬ ಕಾಯ್ದೆ ರಚನೆಯಾಗಲು ಕಾರಣವಾದದ್ದು ವೇದಿಕೆ ವಿನಃ ಕಾಂಗ್ರೆಸ್, ಬಿಜೆಪಿ ಅಥವಾ ಜೆಡಿಎಸ್ ಸರ್ಕಾರಗಳು ಅಲ್ಲ. ಇದಕ್ಕಾಗಿ ನಡೆಸಿದ ಹೋರಾಟದ ಕಾರಣ ನಾನು 16 ದಿನ ಜೈಲು ವಾಸ ಅನುಭವಿಸಿದೆ ಎಂದು ಸ್ಮರಿಸಿದರು.

ರಾಷ್ಟ್ರೀಭಾಷೆ ಅಲ್ಲದ ಹಿಂದಿಯನ್ನು ಕನ್ನಡಿಗರ ಮೇಲೆ ಬಲವಂತವಾಗಿ ಹೇರಲಾಗುತ್ತಿದೆ. ಅದರಿಂದ ಕನ್ನಡಿಗರಿಗೆ ಏನೂ ಉಪಯೋಗ ಇಲ್ಲ. ಕನ್ನಡ–ಇಂಗ್ಲಿಷ್ ಅಷ್ಟೇ ಸಾಕು ಎಂದು ಹೇಳಿದರು.

ಕರ್ನಾಟಕದಲ್ಲಿ ಕನ್ನಡಿಗರಿಗೆ ಉದ್ಯೋಗದಲ್ಲಿ ಮೀಸಲು ಕಲ್ಪಿಸುವ ಡಾ. ಸರೋಜಿನಿ ಮಹಿಷಿ ವರದಿ ಇನ್ನೂ ಜಾರಿಯಾಗಿಲ್ಲ. ವೇದಿಕೆ ಹೋರಾಟದ ಪರಿಣಾಮ ವರದಿ ಜಾರಿಗೆ ಮುಂದಾಗಿದ್ದ ಸರ್ಕಾರ ಕೆಲ ಐಟಿ ಕಂಪನಿಗಳ ವಿರೋಧದಿಂದ ಹಿಂದಡಿ ಇಟ್ಟಿತ್ತು ಎಂದು ಅಸಮಾಧಾನ ಹೊರ ಹಾಕಿದರು.

ಕರ್ನಾಟಕದಲ್ಲಿ ಕನ್ನಡವೇ ಸಂಭ್ರಮಿಸಬೇಕು. ಬೇರೆ ಭಾಷೆಗಳು ಮೆರೆಯಲು ಅವಕಾಶ ಇಲ್ಲ. ಕನ್ನಡಿಗರು ಪ್ರೀತಿಗೆ ಪ್ರೀತಿ, ನೀರು ಕೇಳಿದರೆ ಅಮೃತ ಕೊಡುವವರು. ಕೆಣಕಿದರೆ ತಕ್ಕ ಉತ್ತರ ಕೊಡುವವರೂ ಆಗಿದ್ದಾರೆ ಎಂದು ಹೇಳಿದರು.

ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಮಾತನಾಡಿ, ಮುಖ್ಯಮಂತ್ರಿ ಕೊಟ್ಟ ಮಾತನ್ನು ಉಳಿಸಿಕೊಳ್ಳುತ್ತಾರೆ. ಕಾನೂನು ತೊಡಕುಗಳಿಂದ ಕನ್ನಡ ಹೋರಾಟಗಾರರ ಮೇಲಿನ ಪ್ರಕರಣ ಹಿಂಪಡೆಯಲು ವಿಳಂಬ ಆಗಿದೆ. ರಾಜ್ಯ ಸರ್ಕಾರ ಪ್ರಕರಣಗಳನ್ನು ಹಿಂತೆಗೆದುಕೊಳ್ಳುವುದು ನಿಶ್ಚಿತ ಎಂದರು.

ಕರ್ನಾಟಕದ ನೆಲ, ಜಲ, ಭಾಷೆ ಹಾಗೂ ಕನ್ನಡಿಗರ ರಕ್ಷಣೆಗೆ ರಾಜ್ಯ ಸರ್ಕಾರ ಬದ್ಧವಾಗಿದೆ ಎಂದು ತಿಳಿಸಿದರು.

ಸಾನಿಧ್ಯವಹಿಸಿದ್ದ ಬಸವಕಲ್ಯಾಣದ ಅನುಭವ ಮಂಟಪದ ಅಧ್ಯಕ್ಷ ಡಾ. ಬಸವಲಿಂಗ ಪಟ್ಟದ್ದೇವರು, ಜಾಗತಿಕ ಲಿಂಗಾಯತ ಮಹಾಸಭಾದ ಜಿಲ್ಲಾ ಘಟಕದ ಅಧ್ಯಕ್ಷ ಬಸವರಾಜ ಧನ್ನೂರ, ವೇದಿಕೆಯ ಜಿಲ್ಲಾ ಘಟಕದ ಅಧ್ಯಕ್ಷ ಸೋಮನಾಥ ಮುಧೋಳ ಮಾತನಾಡಿದರು.

# ನವೆಂಬರ್ 9 ಹಾಗೂ 10 ರಂದು ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ನ.7.: ಕಲಬುರಗಿ ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ವಿಭಾಗದಲ್ಲಿ ಬರುವ ಕಾರ್ಪೋರೇಷನ್, ಜಿಜಿಹೆಚ್, ವಿರೇಶ ನಗರ, ಎಸ್.ಟಿ.ಬಿ.ಟಿ., ರಾಜಾಪುರ, ಜಿಮ್ಸ್, ರಾಮನಗರ, ಉಮರ ಕಾಲೋನಿ ಫೀಡರ್‌ಗಳ ವ್ಯಾಪ್ತಿಯಲ್ಲಿ ನಿರ್ವಹಣಾ ಕಾರ್ಯಕೈಗೊಂಡಿರುವ ಹಿನ್ನಲೆಯಲ್ಲಿ ನವೆಂಬರ್ 9 ರಂದು ರವಿವಾರ ಬೆಳಿಗ್ಗೆ 10 ರಿಂದ ಸಂಜೆ 4 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ.

ಅದೇ ರೀತಿ ಹೀರಾಪುರ ಫೀಡರಿನ 33/11ಕೆ.ವಿ. ವಿದ್ಯುತ್ ಉಪಕೇಂದ್ರದಲ್ಲಿನ ನಿರ್ವಹಣಾ ಕಾರ್ಯಕೈಗೊಂಡಿರುವ ಪ್ರಯುಕ್ತ ಹಾಗೂ ದೇವಿನಗರ, ಆಳಂದ ಕಾಲೋನಿ ಹಾಗೂ ಎಮ್.ಎಸ್.ಕೆ. ಮೀಲ್ ಫೀಡರ್‌ಗಳ ವ್ಯಾಪ್ತಿಯಲ್ಲಿ ನಿರ್ವಹಣಾ ಕಾರ್ಯಕೈಗೊಂಡಿರುವ ಹಿನ್ನಲೆಯಲ್ಲಿ ನವೆಂಬರ್ 10 ರಂದು ಸೋಮವಾರ ಬೆಳಿಗ್ಗೆ 10 ರಿಂದ ಮಧ್ಯಾಹ್ನ 3 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದ್ದು, ಸಾರ್ವಜನಿಕರು ಜೆಸ್ಕಾಂನೊಂದಿಗೆ ಸಹಕರಿಸುವಂತೆ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರರು(ವಿ) ಪ್ರಕಟಣೆಯಲ್ಲಿ ಕೋರಿದ್ದಾರೆ.

ಕಾರ್ಪೋರೇಶನ್ ಫೀಡರ್: ಟ್ರಾಮ್ ಕೇರ್, ಎಸ್.ಎನ್.ಸಿ.ಓ. ಎಮ್.ಆರ್.ಎಮ್.ಸಿ ಮೆಡಿಕಲ್ ಕಾಲೇಜು, ಕ್ಯಾನ್ಸರ್ ಆಸ್ಪತ್ರೆ, ಜಯದೇವ ಆಸ್ಪತ್ರೆ. ಮತ್ತು ಸುತ್ತಮುತ್ತಲಿನ ಪ್ರದೇಶಗಳು.

ಜಿಜಿಹೆಚ್ ಫೀಡರ್: ಜಿಲ್ಲಾ ಆಸ್ಪತ್ರೆ, ಜಯದೇವ ಆಸ್ಪತ್ರೆ, ಟ್ರಾಮಾ ಸೆಂಟರ್, ನರ್ಸಿಂಗ್ ಹಾಸ್ಟೇಲ್ ಮತ್ತು ಸುತ್ತಮುತ್ತಲಿನ ಪ್ರದೇಶ.

ವಿರೇಶ ನಗರ ಫೀಡರ್: ವಿರೇಶ ನಗರ ಪೊಲೀಸ್ ಕ್ವಾರ್ಟರ್ಸ್, ಅಡ್ವಕೇಟ್ ಕಾಲೋನಿ ಮತ್ತು ಸುತ್ತಮುತ್ತಲಿ ಪ್ರದೇಶಗಳು.

ಎಸ್.ಟಿ.ಬಿ.ಟಿ ಫೀಡರ್: ಬಾಪು ನಗರ, ಸುಂದರ ನಗರ, ಭರತ ನಗರ ತಾಂಡಾ, ಎಮ್.ಆರ್. ಎಮ್.ಸಿ. ಎದುರುಗಡೆ ಪ್ರದೇಶ, ಸಂತ್ರಾಸವಾಡಿ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

ರಾಜಾಪೂರ ಫೀಡರ್: ನಾಯ್ಡು ಲೇಔಟ್, ಜಿ.ಡಿ.ಎ. ರಾಜಾಪುರ, ಬಂಜಾರಾ ಲೇಔಟ್, ಶಾಹಾಬಾದ್ ಶಕ್ತಿ ನಗರ, ಮಾತಾ ಮಾಣಿಕೇಶ್ವರಿ ಕಾಲೋನಿ, ನೃಪತುಂಗಾ ಕಾಲೋನಿ, ಕೆಂಬ್ರಿಡ್ಜ್ ಶಾಲೆ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

ಜಿಮ್ಸ್ ಫೀಡರ್: ಜಿಮ್ಸ್ ಕಾಲೇಜ, ಜಿಮ್ಸ್ ಅಡ್ಮಿನ್ ಕಟ್ಟಡ, ಜಿಮ್ಸ್ ಮಹಿಳಾ ಹಾಸ್ಟೇಲ್ ಮತ್ತು ಸುತ್ತಮುತ್ತಲಿನ ಪ್ರದೇಶ.

ರಾಮನಗರ ಫೀಡರ್: ಸಿದ್ಧೇಶ್ವರ ಕಾಲೋನಿ, ರಾಮ್‌ದೇವ ಕಾಲೋನಿ, ಹಮಜಾ ಕಾಲೋನಿ, ಆಜಾದಪೂರ ರಸ್ತೆ, ರಾಮ ನಗರ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

ಉಮರ ಕಾಲೋನಿ ಫೀಡರ್: ಉಮರ ಕಾಲೋನಿ, ಅಬುಬಕರ್ ಕಾಲೋನಿ, ಆಜಾದಪೂರ ರಸ್ತೆ, ಅಹಮದ ನಗರ್, ಮಕ್ಕಾ ಕಾಲೋನಿ, ಮಹಾರಾಜಾ ಹೋಟೆಲ್, ವಾಟರ್ ಟ್ಯಾಂಕ್, ಯದ್ದುಲ್ಲಾ ಕಾಲೋನಿ, ಕಮಾಲ ಎ ಮುಜರತ್, ಮಹಬೂಬ ನಗರ, ವೀರಭದ್ರೇಶ್ವರ ದೇವಾಲಯ, ಖಾನ್‌ಕಂಪೌಂಡ್, ಟಿಪ್ಪುಸುಲ್ತಾನ ಚೌಕ, ಸನಾ ಹೋಟೆಲ್, ಅಕಬರ್ ಭಾಗ್, ರಾಮಜೀ ನಗರ ಮತ್ತು ಸುತ್ತ–ಮುತ್ತಲಿನ ಪ್ರದೇಶಗಳು.

ಹೀರಾಪೂರ ಫೀಡರ್: ಹೀರಾಪುರ ರೈಲ್ವೆಗೇಟ್, ಜಫರಾಬಾದ್, ಭೀಮ್ ನಗರ, ಕರೀಮ್ ಕಾಲೋನಿ, ಜಿದ್ದಾ ಕಾಲೋನಿ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

ದೇವಿ ನಗರ ಫೀಡರ್: ದೇವಿ ನಗರ, ಸಂತೋಷ ಕಾಲೋನಿ, ಖಾದ್ರಿಚೌಕ್, ನಭಿ ಕಾಲೋನಿ, ಚಿಂಚೋಳಿ ಲೇಔಟ್, ಜಾಫರಾಬಾದ್, ಪ್ರಭುದೇವ ನಗರ, ಮಾಳೇವಾಡಿ, ಜೆ.ಆರ್. ನಗರ, ಶೇಖ್ ನಗರ, ವಿಶ್ವರಾಧ್ಯ ಕಾಲೋನಿ, ಮಲ್ಲಿಕಾರ್ಜುನ ದೇವಸ್ಥಾನ ಮತ್ತು ಸುತ್ತ–ಮುತ್ತಲಿನ ಪ್ರದೇಶಗಳು.

ಆಳಂದ ಕಾಲೋನಿ ಫೀಡರ್: ಚಿಂಚೋಳಿ ಲೇಔಟ್, ಚೊರ ಬಜಾರ, ಫಿಲ್ಟರ್ ಬೆಡ್ ಚೆಕ್‌ಪೋಸ್ಟ್, ಶಿವಾದಾಲ್ ಮಿಲ್, ರಾಮತೀರ್ಥ, ರಾಣೇಶ ಪೀರ್‌ದರ್ಗಾ, ವಿಶ್ವ–ರಾಧ್ಯ ಮಂದಿರ, ಸಿದ್ದರಾಮೇಶ್ವರ ನಗರ, ಆಯ್ಯೋಧ್ಯ ನಗರ, ಲಕ್ಷ್ಮೀ ನಗರ, ಅಹ್ಮದ ನಗರ ಪಿ.ಎಫ್. ಕಚೇರಿ, ಆಳಂದ ಕಾಲೋನಿ, ನಬಿ ಕಾಲೋನಿ, ಶೇಖ ರೋಜಾ, ಖಾದ್ರಿ ಚೌಕ್ ಮತ್ತು ಸುತ್ತ–ಮುತ್ತಲಿನ ಪ್ರದೇಶಗಳು.

ಎಮ್.ಎಸ್.ಕೆ.ಮಿಲ್ ಫೀಡರ್: ಮದೀನಾ ಕಾಲೋನಿ, ನ್ಯೂಮದೀನಾ ಕಾಲೋನಿ, ಮೀಸ್ಬಾ ನಗರ, ಇಕ್ಬಾಲ್ ಕಾಲೋನಿ, ಹುಸೇನ್‌ಗಾರ್ಡನ್, ಕೃಷ್ಣ ಮಿನರಲ್ಸ್, ನ್ಯೂ ರಾಘವೇಂದ್ರ ಕಾಲೋನಿ, ಖಾನಿ ಏರಿಯಾ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

# ಮಕ್ಕಳ ದಿನಾಚರಣೆ ಅಂಗವಾಗಿ ವಿವಿಧ ಸ್ಪರ್ಧೆ ಆಯೋಜನೆ: ಹೆಸರು ನೋಂದಣಿಗೆ ಸೂಚನೆ

ಬೀದರ, ನವೆಂಬರ್.07 (ಕರ್ನಾಟಕ ವಾರ್ತೆ): ರಾಜ್ಯ ಬಾಲ ಭವನ ಸೊಸೈಟಿ ಬೆಂಗಳೂರು, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಾಲಾ ಶಿಕ್ಷಣ ಇಲಾಖೆ ಹಾಗೂ ಜಿಲ್ಲಾ ಬಾಲ ಭವನ ಸಮಿತಿ ಬೀದರ ಅವರ ಸಹಯೋಗದಲ್ಲಿ 2025–26ನೇ ಸಾಲಿನ ಜಿಲ್ಲಾ ಮಟ್ಟದ ಮಕ್ಕಳ ದಿನಾಚರಣೆ ಕಾರ್ಯಕ್ರಮ ಅಂಗವಾಗಿ ದಿನಾಂಕ: 12–11–2025 ರಂದು ಬೆಳಿಗ್ಗೆ 10:30 ಗಂಟೆಗೆ ಜಿಲ್ಲಾ ಬಾಲ ಭವನ ಸಮಿತಿ, ಹೌಸಿಂಗ್ ಬೋರ್ಡ ಕಾಲೋನಿ, ಈಜು ಕೋಳ ಹತ್ತಿರ ಬೀದರದಲ್ಲಿ ಜಿಲ್ಲಾ ಮಟ್ಟದಲ್ಲಿ ಮಕ್ಕಳಿಗೆ ಸೃಜನಾತ್ಮಕ ಕಲೆ, ಸೃಜನಾತ್ಮಕ ಬರವಣಿಗೆ, ಸೃಜನಾತ್ಮಕ ಪ್ರದರ್ಶನ ಕಲೆ, ವಿಜ್ಞಾನದಲ್ಲಿ ನೂತನ ಆವಿಷ್ಕಾರ ಹಾಗೂ ಅಂಗವಿಕಲ/ಬುಡಕಟ್ಟು ಪ್ರದೇಶದ ಮಕ್ಕಳಿಗಾಗಿ ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ.

ಸ್ಪರ್ಧೆಯಲ್ಲಿ ಪ್ರಥಮ ಹಾಗೂ ದ್ವಿತೀಯ ಸಥಾನ ಗಳಿಸಿದ ಮಕ್ಕಳಿಗೆ ರಾಜ್ಯಮಟ್ಟದ ಕಲಾಶ್ರೀ ಪ್ರಶಸ್ತಿ ಆಯ್ಕೆ ಶಿಬಿರದಲ್ಲಿ ಭಾಗವಹಿಸಲು ಅವಕಾಶವಿರುತ್ತದೆ. ಅಂಗವಿಕಲ/ಬುಡಕಟ್ಟು ಪ್ರದೇಶದ ಮಕ್ಕಳಿಗೆ ವಿಶೇಷ ಅವಕಾಶವಿರುತ್ತದೆ.

ಆಸಕ್ತರು ದಿನಾಂಕ: 10–11–2025 ರ ಸಂಜೆ 5:30 ಗಂಟೆಯೊಳಗಾಗಿ ಮೊಬೈಲ್ ಸಂಖ್ಯೆ: 9113906525 ಗೆ ಸಂಪರ್ಕಿಸಿ ಹೆಸರು ನೋಂದಾಯಿಸಿಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ಸೂರ್ಯಕಾಂತ ಮೋರೆ, ಕಾರ್ಯಕ್ರಮ ಸಂಯೋಜಕರು, ಜಿಲ್ಲಾ ಬಾಲ ಭವನ ಸಮಿತಿ ಬೀದರ ದೂರವಾಣಿ ಸಂಖ್ಯೆ: 9113906525 ಗೆ ಸಂಪರ್ಕಿಸಬಹುದಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# "ಅಕ್ಕ ಪಡೆ" ಯೋಜನೆಯಡಿ ಮಹಿಳಾ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ : ನವೆಂಬರ್ 07, (ಕ.ವಾ): ಜಿಲ್ಲೆಯಲ್ಲಿ 2025-26ನೇ ಸಾಲಿನ "ಅಕ್ಕಪಡೆ" ಯೋಜನೆಯನ್ನು ಅನುಷ್ಠಾನಗೊಳಿಸಲು ಓಚಿಣುಂಟಿಚಿಟ ಅಚಿಜಜಣ ಅಂಡಿಠಿ (ಓಅಅ) ಯಲ್ಲಿ "ಅ" ಪ್ರಮಾಣ ಪತ್ರ ಪಡೆದಿರುವ ಮಹಿಳಾ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಯಾದಗಿರಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರು ತಿಪ್ಪಣ್ಣ ಶಿರಸಿ ಅವರು ತಿಳಿಸಿದ್ದಾರೆ.

ನಿಯಮಗಳು ಹಾಗೂ ಆಯ್ಕೆಯ ಮಾನದಂಡಗಳಿಗೆ ಒಳಪಟ್ಟು ಅರ್ಹ ಮಹಿಳಾ ಅಭ್ಯರ್ಥಿಗಳಿಂದ ಜಿಲ್ಲೆಯಲ್ಲಿ ಅಪಾಯದಲ್ಲಿರುವ ಅಥವಾ ಸಂಕಷ್ಟದಲ್ಲಿರುವ ಮಹಿಳೆಯರು ಮತ್ತು ಮಕ್ಕಳಿಗೆ ತಕ್ಷಣದ ರಕ್ಷಣೆ ನೀಡುವ ಪ್ರಾಥಮಿಕ ಉದ್ದೇಶದಿಂದ ಅನುಷ್ಠಾನಗೊಳ್ಳುತ್ತಿರುವ "ಅಕ್ಕಪಡೆ" ಯೋಜನೆಯಡಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸಲು ಎನ್‌ಸಿಸಿಯಲ್ಲಿ "ಅ" ಪ್ರಮಾಣಪತ್ರ ಪಡೆದಿರುವ, ದೈಹಿಕ ಸದೃಢತೆ ಹೊಂದಿರುವ, ಉತ್ತಮ ನಡವಳಿಕೆ, ಸಂವಹನ ಕಲೆ, ಕಾರ್ಯ ದಕ್ಷತೆ ಉಳ್ಳ ಮತ್ತು ಪಾಳಿಗಳಲ್ಲಿ ಕೆಲಸ ನಿರ್ವಹಿಸಲು ಸಿದ್ಧರಿರುವ 35 ರಿಂದ 45 ವರ್ಷ ಒಳಗಿರುವ ಮಹಿಳಾ ಅಭ್ಯರ್ಥಿಗಳಿಂದ ಅರ್ಜಿ ಸಲ್ಲಿಸಬೇಕು. ಈ ಹುದ್ದೆಯು ಗುತ್ತಿಗೆ ಅವಧಿ 11 ತಿಂಗಳಿಗೆ ಸೀಮಿತವಾಗಿದ್ದು ಕರ್ತವ್ಯ ನಿರ್ವಹಣೆ ತೃಪ್ತಿಕರವಾಗಿದ್ದಲ್ಲಿ ಸೇವೆಯನ್ನು ಮುಂದುವರರಿಸಲಾಗುವುದು.

ಅರ್ಹ ಅಭ್ಯರ್ಥಿಗಳು ಅರ್ಜಿಯನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರ ಕಛೇರಿ ಹಾಗೂ ಯಾದಗಿರಿ ಎನ್‌ಐಸಿ ವೆಬ್‌ಸೈಟ್ yadgir.nic.inನಲ್ಲಿ ಪಡೆದು, ಅಗತ್ಯ ದಾಖಲಾತಿಗಳೊಂದಿಗೆ 2025ರ ನವೆಂಬರ್ 12 ರಂದು ಸಂಜೆ 5 ಗಂಟೆಯ ಒಳಗೆ ಉಪ ನಿರ್ದೇಶಕರ ಕಛೇರಿಗೆ ಅರ್ಜಿ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಉಪ ನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕೋಣೆ ಸಂ.ಅ-17, 1ನೇ ಮಹಡಿ, ಮಿನಿ ವಿಧಾನ ಸೌಧ, ಯಾದಗಿರಿ ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನವೆಂಬರ್ 11ರಂದು ನಗರದಲ್ಲಿ ಏಕತಾ ಅಭಿಯಾನ ಅಂಗವಾಗಿ ಪಾದಯಾತ್ರೆ

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ:ನ:7(ಕ.ವಾ): ಭಾರತದ ಉಕ್ಕಿನ ಮನುಷ್ಯರೆಂದೆ ಕರೆಯಲ್ಪಡುವ ಸರ್ದಾರ್ ವಲ್ಲಭಭಾಯಿ ಪಟೇಲ ಅವರ 150ನೇ ಜನ್ಮ ವಾರ್ಷಿಕೋತ್ಸವ ಅಂಗವಾಗಿ ಇದೇ ನವೆಂಬರ್ 11ರಂದು ನಗರದಲ್ಲಿ "ಏಕತಾ ಅಭಿಯಾನ ಅಂಗವಾಗಿ ಪಾದಯಾತ್ರೆ" ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಶ್ರೀ ಹರ್ಷಲ್ ಭೋಯರ್ ಅವರು ಹೇಳಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಇಂದು ಈ ಕುರಿತು ವಿವರ ನೀಡಲು ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ಯುವ ಮತ್ತು ಕ್ರೀಡಾ ಸಚಿವಾಲಯದ ವ್ಯಾಪ್ತಿಯಲ್ಲಿ ಬರುವ ಮೇರಾ ಯುವ ಭಾರತ ಕೇಂದ್ರ, ಕಲ್ಬುರ್ಗಿ ಹಾಗೂ ಯಾದಗಿರಿ ಜಿಲ್ಲೆ ಇವರ ವತಿಯಿಂದ ಈ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ.ರಾಷ್ಟ ಪ್ರೇಮ ಉತ್ತೇಜನ, ನಾಗರಿಕ ಜವಾಬ್ದಾರಿ ಮನೋಭಾವ ಆಳವಾಗಿ ಬೆಳೆಸುವುದು ಮತ್ತು ಯುವಜನಾಂಗದಲ್ಲಿ ರಾಷ್ಟ್ರೀಯ ಐಕ್ಯತಾ ಭಾವನೆ ಬೆಳೆಸುವ ಉದ್ದೇಶದಿಂದ ಈ ಪಾದಯಾತ್ರೆ ಇದೇ ನವೆಂಬರ್ 11 ರಂದು ಹಮ್ಮಿಕೊಳ್ಳಲಾಗುತ್ತಿದ್ದು, ಯುವ, ಹಿರಿಯ ನಾಗರಿಕರು ಇದರಲ್ಲಿ ಪಾಲ್ಗೊಳ್ಳಬಹುದಾಗಿದೆ ಎಂದು ಅವರು ಹೇಳಿದರು.

ನವೆಂಬರ್ 11ರಂದು ಬೆಳಿಗ್ಗೆ 9 ಗಂಟೆಗೆ ನಗರದ ಸರ್ಕಾರಿ ಪದವಿ ಪೂರ್ವ ಕಾಲೇಜು (ಸ್ವಪ್ನಗ್ರೌಂಡ್) ಇಲ್ಲಿಂದ ಸಂಸದರು, ಶಾಸಕರು, ಗಣ್ಯರ ಉಪಸ್ಥಿತಿಯಲ್ಲಿ ಇದಕ್ಕೆ ಚಾಲನೆ ನೀಡಲಿದ್ದು, ಹಿರಿಯ ಅಧಿಕಾರಿಗಳು ಸೇರಿದಂತೆ 500 ಕ್ಕೂ ಹೆಚ್ಚು 30 ವರ್ಷರೊಳಗಿನ ಯುವ ವಿದ್ಯಾರ್ಥಿಗಳು, ಸಾರ್ವಜನಿಕರು ಇದರಲ್ಲಿ ಭಾಗವಹಿಸಲಿದ್ದಾರೆ ಎಂದು ಅವರು ತಿಳಿಸಿದರು.ಈ ಪಾದಯಾತ್ರೆಯೂ ಸರ್ಕಾರಿ ಪದವಿಪೂರ್ವ ಕಾಲೇಜು ಇಲ್ಲಿಂದ ಆರಂಭಗೊಂಡು, ಡಾ.ಬಿ.ಆರ್ ಅಂಬೇಡ್ಕರ್ ಸರ್ಕಲ್, ತಹಸೀಲ್ದಾರ ಕಚೇರಿ, ಲಾಲ್ ಬಹದ್ದೂರ್ ಶಾಸ್ತ್ರಿ ವೃತ್ತ, ಸುಭಾಷ್ ಚಂದ್ರ ಬೋಸ್ ವೃತ್ತದ ಮೂಲಕ ನಗರದ ಸರ್ಕಾರಿ ಪದವಿ ಮಹಾವಿದ್ಯಾಲಯದಲ್ಲಿ ಮುಕ್ತಾಯಗೊಳ್ಳಲಿದೆ.ನಂತರ ನಗರದ ಸರ್ಕಾರಿ ಪದವಿ ಮಹಾವಿದ್ಯಾಲಯ ಸಭಾಂಗಣದಲ್ಲಿ ಕಾರ್ಯಕ್ರಮ ನಡೆಯಲಿದ್ದು, ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಭಾವಚಿತ್ರಕ್ಕೆ ಪೂಜೆ, ಗೌರವ ಅರ್ಪಣೆ ಹಾಗೂ ಉಪನ್ಯಾಸ ಕಾರ್ಯಕ್ರಮ ನಡೆಯಲಿದೆ.ಈ ಕಾರ್ಯಕ್ರಮಕ್ಕೆ ಶಿಷ್ಟಾಚಾರದಂತೆ ಅತಿಥಿ ಗಣ್ಯರನ್ನು ಆಹ್ವಾನಿಸಲು, ಸೂಕ್ತ ಪೋಲಿಸ್ ಬಂದೋಬಸ್ತ್, ಕುಡಿಯುವ ನೀರಿನ ಸೌಲಭ್ಯ, ನುರಿತ ವೈದ್ಯರು ಒಳಗೊಂಡ ಅಂಬ್ಯುಲೆನ್ಸ್, ಟ್ರಾಫಿಕ್ ನಿರ್ವಹಣೆ, ಸೇರಿದಂತೆ ಅವಶ್ಯಕ ಸಿದ್ಧತೆ ಮಾಡಿಕೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಅವರು ತಿಳಿಸಿದರು.ಈ ಸಂದರ್ಭದಲ್ಲಿ ಅಪರ್ ಜಿಲ್ಲಾಧಿಕಾರಿ ರಮೇಶ ಕೋಲಾರ್, ಮೇರಾ ಯುವ ಭಾರತ ಕೇಂದ್ರದ ಅಧಿಕಾರಿ ಮಯೂರ್ ಕುಮಾರ್ ಉಪಸ್ಥಿತರಿದ್ದರು.

## ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ

# 8, 9ರಂದು ಪ್ರವೇಶ ಪರೀಕ್ಷೆ

ರಾಯಚೂರು ನವೆಂಬರ್ 07 (ಕರ್ನಾಟಕ ವಾರ್ತೆ): ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವತಿಯಿಂದ ಯುಪಿಎಸ್ ಗೆಜೆಟೆಡ್ ನಾಗರೀಕ ಸೇವೆ, ಕೆ.ಎ.ಎಸ್ ಗೆಜೆಟೆಡ್ ಪ್ರೊಬೇಷನರ್ ಮತ್ತು ಗ್ರೂಪ್-ಸಿ ಪರೀಕ್ಷಾ ಪೂರ್ವ ತರಬೇತಿ ನೀಡಲು ಉದ್ದೇಶಿಸಲಾಗಿದ್ದು, ನವೆಂಬರ್ 8 ಹಾಗೂ 9ರಂದು ಪ್ರವೇಶ ಪರೀಕ್ಷೆಯನ್ನು ಹಮ್ಮಿಕೊಳ್ಳಲಾಗಿದ್ದು, ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಹಾಜರಾಗುವಂತೆ ಕೋರಲಾಗಿದೆ.

ನಗರದ ಬೋಳಮಾನದೊಡ್ಡಿ ರಸ್ತೆಯ ಅಲ್ಪಸಂಖ್ಯಾತರ ಮೊರಾರ್ಜಿದೇಸಾಯಿ ವಸತಿ ಶಾಲೆಯಲ್ಲಿ ನವೆಂಬರ್ 8ರ ಬೆಳಿಗ್ಗೆ 10:30 ರಿಂದ 12:30 ಘಂಟೆಯವರೆಗೆ ಗ್ರೂಪ್-ಸಿ ಪರೀಕ್ಷಾ ಪೂರ್ವತರಬೇತಿಗೆ ಪ್ರವೇಶ ಪರೀಕ್ಷೆ ಹಾಗೂ ನವೆಂಬರ್ 9ರ ಬೆಳಿಗ್ಗೆ 10:30 ರಿಂದ 12:30 ಯುಪಿಎಸ್ ಗೆಜೆಟೆಡ್ ನಾಗರೀಕ ಸೇವೆ, ಕೆ.ಎ.ಎಸ್ ಗೆಜೆಟೆಡ್ ಪ್ರೊಬೇಷನರ್ ನಡೆಸಲಾಗುವುದು. ನಂತರ 2:00 ಘಂಟೆಯಿಂದ 3;30 ವರೆಗೆ 2ನೇ ಪೇಪರ್ ನಡೆಸಲಾಗುತ್ತಿದ್ದು, ಅರ್ಜಿ ಸಲ್ಲಿಸಿದ ಅರ್ಹ ಅಭ್ಯರ್ಥಿಗಳು ಸೇವಾಸಿಂಧು ವಿಳಾಸ: https://sevasindhu.karnataka.gov.in/Minority_HallTicket_App/Hall_Ticket.aspx ಲಿಂಕ್‌ನ್ನು ಬಳಸಿಕೊಂಡು ಪ್ರವೇಶ ಪತ್ರವನ್ನು ಪಡೆದು ಪ್ರವೇಶ ಪರೀಕ್ಷೆಗೆ ಕಡ್ಡಾಯವಾಗಿ ಹಾಜರಾಗುವಂತೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜೆಸ್ಕಾಂ-2: ನವೆಂಬರ್ 10 ರಿಂದ 12ರವರೆಗೆ ವಿದ್ಯುತ್ ವ್ಯತ್ಯಯ

ರಾಯಚೂರು ನವೆಂಬರ್ 07 (ಕರ್ನಾಟಕ ವಾರ್ತೆ): ಇಲ್ಲಿನ ಜೆಸ್ಕಾಂ ಕಾರ್ಯ ಮತ್ತು ಪಾಲನೆ ಉಪ ವಿಭಾಗ-2ರ ವ್ಯಾಪ್ತಿಯ ಎ.ಪಿ.ಎಂ.ಸಿ 11 ಕೆವಿಯಲ್ಲಿ ಸ್ಥಳಾಂತರ ಕಾಮಗಾರಿಯನ್ನು ನಿರ್ವಹಿಸುತ್ತಿರುವ ಪ್ರಯುಕ, ಇದೇ ನವೆಂಬರ್ 10 ರಿಂದ ನವೆಂಬರ್ 12ರವರೆಗೆ ಬೆಳಿಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದ್ದು, ಸಾರ್ವಜನಿಕರು ಸಹಕರಿಸುವಂತೆ ಕೋರಲಾಗಿದೆ.

ನಿಗದಿತ ದಿನಾಂಕಗಳಂದು ಸಿಎಮ್‌ಸಿ ವಾಟರ್ ಸಪ್ಲೈ, ಮಂಚಲಾಪುರ ರಸ್ತೆ, ಬೈಪಾಸ್ ರಸ್ತೆಯಲ್ಲಿರುವ ಇಂಡಸ್ಟ್ರೀಯಿಲ್ ಏರಿಯಾ, ರಿಮ್ಸ್ ಆಸ್ಪತ್ರೆ, ಓಪೆಕ್ ಆಸ್ಪತ್ರೆ, ಇಂಡಸ್ಟ್ರೀಯಿಲ್ ಏರಿಯಾ, ಎಲ್.ಬಿ.ಎಸ್. ನಗರ, ಪೋಲೀಸ್ ಕಾಲೋನಿ, ಅಲ್ಲಮಪ್ರಭು ಕಾಲೋನಿ, ಗಂಜ್ ಏರಿಯಾ, ಚಂದ್ರಬಂಡ ರಸ್ತೆ, ಹುಂಡೇಕರ್ ಕಾಲೋನಿ, ಎನ್‌ಜಿಓ ಕಾಲೋನಿ, ಆಶ್ರಯ ಕಾಲೋನಿ, ಯರಮರಸ್ ಕ್ಯಾಂಪ್, ಪೋತಗಲ್, ಅಮರಾವತಿ, ಯರಮರಸ್ ಕೈಗಾರಿಕಾ ಪ್ರದೇಶ, ನಂದಿನಿ ಹಾಲು ಡೈರಿ, ಗೆಸ್ಟ್ ಹೌಸ್, ಸರಕಾರಿ ಇಂಜಿಯಿಯರ್ ಕಾಲೇಜ್, ಎಸ್.ಎಲ್.ಎನ್. ಇಂಜಿನಿಯರಿಂಗ್ ಕಾಲೇಜ್, ಐ.ಐ.ಐಟಿ ಯರಮರಸ್ ಕ್ಯಾಂಪ್, ಪೋತಗಲ್, ಅಮರಾವತಿ, ಯರಮರಸ್ ದಂಡು, ಏಗನೂರು ಸೇರಿದಂತೆ ಸುತ್ತಮುತ್ತಲಿನ ಎಲ್ಲಾ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

# ಬೀದಿ ನಾಟಕ ಜಾನಪದ ಕಲಾ ತಂಡಗಳಿಂದ ಅರ್ಜಿ ಆಹ್ವಾನ

ಯಾದಗಿರಿ : ನವೆಂಬರ್ 07, (ಕ.ವಾ) : ಯಾದಗಿರಿ ಜಿಲ್ಲೆಯ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಬೀದಿ ನಾಟಕ ಜಾನಪದ ಕಲಾ ತಂಡಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಯಾದಗಿರಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಅವರು ತಿಳಿಸಿದ್ದಾರೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ರಾಷ್ಟ್ರೀಯ ಆರೋಗ್ಯ ಅಭಿಯಾನದ ಕಾರ್ಯಕ್ರಮ ಯೋಜನೆಗಳ ಕುರಿತು ತೀವ್ರ ಪ್ರಚಾರ ಆಂದೋಲನದ ಮೂಲಕ ಜಾಗೃತಿ ಮೂಡಿಸಲು ಯಾದಗಿರಿ ಜಿಲ್ಲೆಯ ನೊಂದಾಯಿತ ಬೀದಿ ನಾಟಕ ಕಲಾ ತಂಡಗಳು, ಸಾಂಗ್ ಮತ್ತು ಡ್ರಾಮಾ ಡಿವಿಜನ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಲ್ಲಿ ನೊಂದಾವಣೆಯಾಗಿರುವ ಬೀದಿ ನಾಟಕ ಜಾನಪದ ಕಲಾ ತಂಡಗಳಿಂದ ಅರ್ಜಿ ಆಹ್ವಾನಿಸಿದೆ.

ಅರ್ಜಿಸಲ್ಲಿಸಲು ಕಲಾ ತಂಡದಲ್ಲಿ ಕನಿಷ್ಠ 8 ಜನ ಕಲಾವಿದರು ಇರಬೇಕು. ಈ ಪೈಕಿ ಇಬ್ಬರು ಮಹಿಳಾ ಕಲಾವಿದರು ಇರುವುದು ಕಡ್ಡಾಯ ಕಲಾತಂಡದವರು ಯಾದಗಿರಿ ಜಿಲ್ಲೆಯವರು ಆಗಿರಬೇಕು. ಸರ್ಕಾರಿ ಯೋಜನೆಗಳ ಬಗ್ಗೆ ಬೀದಿನಾಟಕ ಪ್ರದರ್ಶಿಸಿದ ಅನುಭವ ಹೊಂದಿರಬೇಕು. ಆಸಕ್ತ ಅರ್ಹ ಬೀದಿನಾಟಕ ಕಲಾ ತಂಡಗಳು ತಮ್ಮ ಅರ್ಜಿಯನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ ಐ.ಇ.ಸಿ ವಿಭಾಗ ಯಾದಗಿರಿ 2025ರ ನವೆಂಬರ್ 15ರ ಒಳಗೆ ಅರ್ಜಿ ಪಡೆದು ಪುನಃ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ ಐ.ಇ.ಸಿ ವಿಭಾಗಕ್ಕೆ ಅರ್ಜಿಸಲ್ಲಿಸಲು 2025ರ ನವೆಂಬರ್ 15ರ ಸಂಜೆ 4.30 ಗಂಟೆಯ ಒಳಗೆ ಅರ್ಜಿಸಲ್ಲಿಸಬೇಕು ತಡವಾಗಿ ಸಲ್ಲಿಸಿದ ಅರ್ಜಿಯನ್ನು ಪರಿಗಣಿಸಲಾಗುವದಿಲ್ಲ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಹರಿನಾಥ ಮಹಾರಾಜ ಕಾರ್ತೀಕ ಹುಣ್ಣಿಮೆ ಜಾತ್ರೆ ನಿಮಿತ್ಯ ಪಲ್ಲಕ್ಕಿ ಮೆರವಣಿಗೆ



ಮಲ್ಲಮ್ಮ ನುಡಿ ವಾರ್ತೆ

ಕಮಲನಗರ:ತಾಲೂಕಿನ ಹೊಳಸಮುದ್ರ ಗ್ರಾಮದಲ್ಲಿ ಸಂತ ಹರಿನಾಥ ಮಹಾರಾಜಕಾರ್ತೀಕ ಹುಣ್ಣಿಮೆ ಜಾತ್ರೆ ನಿಮಿತ್ಯ ಶುಕ್ರವಾರ ಬೆಳಗ್ಗೆ ಹರಿನಾಥ ಮಹಾರಾಜ ಮೂರ್ತಿಯ ಪಲ್ಲಕ್ಕಿ ಮೆರವಣಿಗೆ ಅದ್ದೂರಿಯಾಗಿ ನಡೆಯಿತು.

ಜಾತ್ರೆ ನಿಮಿತ್ಯ ಮೂರು ದಿನಗಳ ಗ್ರಾಮದಲ್ಲಿ ಸಂಪೂರ್ಣ ಹಬ್ಬದ ವಾತಾವರಣ ಇತ್ತು. ಎಲ್ಲಿ ನೋಡಿದರು ಜನವೆ ಜನ ಅಂದು ಪರಿವಾರ ಸಮೇತ ಜೀವತ ಸಮಾಧಿ ತೆಗೆದುಕೊಂಡು ಹರಿನಾಥ ಮಹಾರಾಜರ ತ್ಯಾಗಮಯ ಸ್ಥಳಕ್ಕೆ ಸುತ್ತ ಮುತ್ತಲಿನ ಹಳ್ಳಿಯ ಜನ ಹಾಗೂ ಗ್ರಾಮದ ಸರ್ವ ಭಕ್ತರು ಜಾತ್ರೆಯಲ್ಲಿ ಆನಂದ ಸಮಯವನ್ನು ಕಳೆದರು.ಬುಧವಾರ ಗೋಂಧಳಿ ಕಾರ್ಯಕ್ರಮ, ಗುರುವಾರ ಬೆಳಗ್ಗೆ ಹರಿನಾಥ ಕೇಶವನಾಥ ಚಾರಿಟೇಬಲ್ ಟ್ರಸ್ಟ್ ವತಿಯಿಂದ ರಕ್ತದಾನ ಮತ್ತು ಉಚಿತ ಆರೋಗ್ಯ ತಪಾಸಣೆ ಶಿಬಿರ ಯಶಸ್ವಿಯಾಗಿ ನಡೆಯಿತು. ಗುರುವಾರ ಬೆಳಗ್ಗೆ 4 ಗಂಟೆಗೆಯಿಂದ ಹರಿನಾಥ ಮಹಾರಾಜರ ಸಮಾಧಿ ಮಹಾಭಿಷೇಕ, ಸಾಯಂಕಾಲ 6 ಗಂಟೆಗೆ ಸಾಮೂಹಿಕ ಮಹಾ ಆರತಿ ಮತ್ತು ಏಕನಾಥ ಮಹಾರಾಜ ಹಂಡೆ ಅವರಿಂದ ಕೀರ್ತನೆ ನಡೆಯಲಿದೆ. ಇಂದು ಕೊನೆಯ ದಿನ ಶುಕ್ರವಾರ ಭಜನೆ ಮತ್ತು ಗೌಳನಿ ಹಾಡುಗಳು, ಬೆಳಗ್ಗೆ 7 ಗಂಟೆಯಿಂದ 8ರವರೆಗೆ ಹರಿನಾಥ ಮಹಾರಾಜರ ಮೂರ್ತಿಯ ಪಲ್ಲಕಿ ಮೆರವಣಿಗೆ. 8 ರಿಂದ ಮದ್ದಾಹ್ನ 12 ವರೆಗೆ ಭಾರೂಡ್ ಕಾರ್ಯಕ್ರಮ ನಡೆಯಿತು. ನಂತರ ಕಾಲಾ ಕಾರ್ಯಕ್ರಮ ಅದ್ದೂರಿಯಾಗಿ ಸಾಗಿಬಂತು. ಜಾತ್ರಾ ಕಾರ್ಯಕ್ರಮದಲ್ಲಿ ಭಕ್ತರಿಗೆ ಪ್ರತಿ ದಿನ ಅನ್ನದಾಸೋಹ, ಭಕ್ತಿ ದಾಸೋಹ, ಚಹಾ ಹಾಗೂ ಹಾಲಿನ ವ್ಯವಸ್ಥೆಯನ್ನು ಭಕ್ತರು ಮಾಡಿದರು. ಒಟ್ಟಿನಲ್ಲಿ ಎಲ್ಲರೂ ಸೇರಿ ಜಾತ್ರಾ ಕಾರ್ಯಕ್ರಮವನ್ನು ಯಶಸ್ವಿಯಾಗಿ ಮಾಡಿದರು ಎಂದು ಹರಿನಾಥ ಕೇಶವನಾಥ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ಜ್ಞಾನೇಶ್ವರ ಪಾಟೀಲ ಹೇಳಿದರು.

# ಡಿ.13 ರಂದು ರಾಷ್ಟ್ರೀಯ ಲೋಕ್ ಅದಾಲತ್

**ರಾಜೀ ಸಂಧಾನದ ಮೂಲಕ ಪ್ರಕರಣಗಳ ಇತ್ಯರ್ಥ ಅತೀ ಶೀಘ್ರವಾಗಿ ಪರಿಹಾರ ಪಡೆದುಕೊಳ್ಳಲು ಇದೊಂದು ಸುವರ್ಣಾವಕಾಶವಾಗಿದೆ**

ಯಾದಗಿರಿ : ನವೆಂಬರ್ 07, (ಕ.ವಾ) : ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದದಿಂದ ರಾಜ್ಯದ ಎಲ್ಲಾ ನ್ಯಾಯಾಲಯದ ಆವರಣಗಳಲ್ಲಿ 2025ರ ಡಿಸೆಂಬರ್ 13 ರಂದು ರಾಷ್ಟ್ರೀಯ ಲೋಕ್ ಅದಾಲತ್‌ಗಳನ್ನು ಆಯೋಜಿಸಲಾಗಿದೆ, ಸಾರ್ವಜನಿಕರು ತಮ್ಮ ವ್ಯಾಜ್ಯ ಪೂರ್ವ ಹಾಗೂ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳನ್ನು ಅಂದು ರಾಷ್ಟ್ರೀಯ ಲೋಕ್ ಅದಾಲತ್ ಮೂಲಕ ಅತೀ ಶೀಘ್ರವಾಗಿ ಪರಿಹಾರ ಪಡೆದುಕೊಳ್ಳಲು ಇದೊಂದು ಸುವರ್ಣಾವಕಾಶವಾಗಿದೆ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಅಧ್ಯಕ್ಷರು ಹಾಗೂ ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರಾದ ಗೌರವಾನ್ವಿತ ಶ್ರೀ ಮರುಳಸಿದ್ದಾರಾಧ್ಯ ಅವರು ಹೇಳಿದರು. ನಗರದ ನೂತನ ಜಿಲ್ಲಾ ನ್ಯಾಯಾಲಯ ಸಂಕೀರ್ಣದಲ್ಲಿ ಬೆಂಗಳೂರು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಯಾದಗಿರಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸಂಯುಕ್ತಾಶ್ರಯದಲ್ಲಿ ರಾಷ್ಟ್ರೀಯ ಲೋಕ್ ಅದಾಲತ್ ಪತ್ರಿಕಾಗೋಷ್ಠಿ ಉದ್ದೇಶಿಸಿ ಅವರು ಮಾತನಾಡಿದರು.

ರಾಷ್ಟ್ರೀಯ ಲೋಕ್ ಅದಾಲತ್‌ನಲ್ಲಿ ರಾಜೀ ಸಂಧಾನದ ಮೂಲಕ ಇತ್ಯರ್ಥ ಪ್ರಕರಣಗಳು, ರಾಜೀಯಾಗಬಲ್ಲ ಅಪರಾಧಿಕ ಪ್ರಕರಣಗಳು, ಬ್ಯಾಂಕ್ ವಸೂಲಾತಿ ಪ್ರಕರಣಗಳು, ಉದ್ಯೋಗದಲ್ಲಿ ಪುನರ್ ಸ್ಥಾಪಿಸಲ್ಪಡುವ ಪ್ರಕರಣಗಳು, ಕೈಗಾರಿಕಾ ಕಾರ್ಮಿಕರ ವೇತನಕ್ಕೆ ಸಂಬಂಧಿಸಿದ ಕ್ಲೇಮುಗಳು, ಜಿಲ್ಲಾ ಗ್ರಾಹಕರ ವೇದಿಕೆಯಲ್ಲಿನ ಪ್ರಕರಣಗಳು, ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ, ಕರ್ನಾಟಕ ರಿಯಲ್ ಎಸ್ಟೇಟ್ ಪ್ರಾಧಿಕಾರಕ್ಕೆ ಸಂಬಂಧಪಟ್ಟ ಪ್ರಕರಣಗಳು, ಸಾಲ ವಸೂಲಾತಿ ನ್ಯಾಯಾಧೀಶಕರಣದ ಪ್ರಕರಣಗಳು, ಖಾಯಂ ಜನತಾ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳು, ಚೆಕ್ಕು ಅಮಾನ್ಯದ ಪ್ರಕರಣಗಳು, ಮೋಟಾರು ಅಪಘಾತ ಪರಿಹಾರ ನ್ಯಾಯಾಧೀಕರಣದ ಪ್ರಕರಣಗಳು, ಕಾರ್ಮಿಕ ವಿವಾದಗಳು, ವಿದ್ಯುತ್ ಹಾಗೂ ನೀರಿನ ಶುಲ್ಕಗಳು, ಭೂಸ್ವಾಧೀನ ಪ್ರಕರಣಗಳು, ವೇತನ ಮತ್ತು ಭತ್ಯೆಗಳಿಗೆ ಸಂಬಂಧಿಸಿದ ಸೇವಾ ಪ್ರಕರಣಗಳು ಹಾಗೂ ಪಿಂಚಣಿ ಪ್ರಕರಣಗಳು, ಸಾರ್ವಜನಿಕ ಉಪಯುಕ್ತತೆ ಸೇವೆಗಳ ಸಂಭದಿಸಿದ ಪ್ರಕರಣಗಳು, ರಾಜೀಯಾಗಬಲ್ಲ ಸಿವಿಲ್ ಮತ್ತು ಇತರೆ ಪ್ರಕರಣಗಳು, ವೈವಾಹಿಕ, ಕುಟುಂಬ ನ್ಯಾಯಾಲಯ ಪ್ರಕರಣಗಳು (ವಿಚ್ಛೇದನೆಯನ್ನು ಹೊರತುಪಡಿಸಿ) ಈ ಪ್ರಕಣಗಳನ್ನು ರಾಜೀ ಸಂಧಾನದ ಮೂಲಕ ಇತ್ಯರ್ಥಪಡಿಸಿಕೊಳ್ಳಲು ಅವಕಾಶ ನೀಡಿದೆ ಎಂದು ತಿಳಿಸಿದರು.

# ಮಹಾನಗರ ಪಾಲಿಕೆಯಲ್ಲಿ ಭ್ರಷ್ಟಾಚಾರ ಆರೋಪ ಬೀದರ ನಗರ ಬಿಜೆಪಿ ಮಂಡಲದಿಂದ ಗಂಭೀರ ಟೀಕೆ



ಮಲ್ಲಮ್ಮ ನುಡಿ ವಾರ್ತೆ

ಬೀದರ, ನ. 07 :- ಬೀದರ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಲ್ಲಿ ಭ್ರಷ್ಟಾಚಾರ ನಡೆದಿದೆ ಎಂಬ ಗಂಭೀರ ಆರೋಪವನ್ನು ಬಿಜೆಪಿ ಬೀದರ ನಗರ ಮಂಡಲ ಮಾಡಿದೆ. ಪಾಲಿಕೆಯ ಆಡಳಿತದಲ್ಲಿ ಪಾರದರ್ಶಕತೆ ಕುಸಿದಿದ್ದು ಜನಧನವನ್ನು ದುರುಪಯೋಗ ಮಾಡಲಾಗಿದೆ ಎಂದು ಬಿಜೆಪಿ ಮುಖಂಡರು ಆರೋಪಿಸಿದ್ದಾರೆ.

ಪಕ್ಷದ ಹೇಳಿಕೆಯ ಪ್ರಕಾರ, ರುದ್ರಭೂಮಿಯಲ್ಲಿ ಚಿತಾಗಾರ ಯಂತ್ರ ಅಳವಡಿಕೆ, ಬೀದಿ ದೀಪ ಅಳವಡಿಕೆ, ಪೌರ ಕಾರ್ಮಿಕರ ನೇಮಕಾತಿ ಮತ್ತು ಬಾಡಿಗೆ ವಾಹನಗಳ ನಿರ್ವಹಣೆ ಸೇರಿದಂತೆ ಹಲವು ವಿಭಾಗಗಳಲ್ಲಿ ಅನಿಯಮಿತತೆಗಳು ಕಾಣಿಸಿಕೊಂಡಿವೆ.

ಇದೆ ವೇಳೆ, ನಗರದ ಪ್ರಮುಖ ರಸ್ತೆಗಳು ಹಾಳಾಗಿರುವುದು, ಗುಂಡಿಗಳು ಹೆಚ್ಚಳಗೊಂಡಿರುವುದು ಹಾಗೂ ಮೂಲಭೂತ ಸೌಕರ್ಯಗಳ ಕೊರತೆ ನಾಗರಿಕರಲ್ಲಿ ಅಸಮಾಧಾನ ಉಂಟುಮಾಡಿದೆ "ನಾಗರಿಕರಿಗೆ ತೊಂದರೆ ಉಂಟಾಗುತ್ತಿರುವ ಈ ಸಂದರ್ಭದಲ್ಲಿ ಸರ್ಕಾರ ಮತ್ತು ಮಹಾನಗರ ಪಾಲಿಕೆ ಕಣ್ಮುಚ್ಚಿದಂತೆ ವರ್ತಿಸುತ್ತಿವೆ. ಪ್ರಶ್ನೆ ಕೇಳಿದರೆ ಭಯ ಹುಟ್ಟಿಸುವ ಸಂಸ್ಕೃತಿ ಬೆಳೆವುದೇ ದುಃಖಕರ. ಜನರ ಧ್ವನಿಯನ್ನೂ, ಜನರ ಹಣವನ್ನೂ ಗೌರವಿಸದ ಆಡಳಿತ ಎಷ್ಟು ಕಾಲ ಮುಂದುವರಿಯುತ್ತದೆ?" ಎಂದು ಪ್ರಶ್ನಿಸಿದೆ. "ಗ್ಯಾರಂಟಿಗಳ ಹೆಸರಿನಲ್ಲಿ ಜನಮನ ಗೆಲ್ಲುವ ರಾಜಕೀಯ ನಡೆಯುತ್ತಿದೆಯಾದರೂ, ಅದರ ಜವಾಬ್ದಾರಿಯುತ ಜಾರಿ ನಡೆಯುತ್ತಿಲ್ಲ. ರಾಜ್ಯದ ಸಮಗ್ರ ಹಿತಕ್ಕಾಗಿ ಮುಖ್ಯಮಂತ್ರಿಗಳು ಸೇರಿದಂತೆ ಸಂಬಂಧಿತ ಸಚಿವರು ರಾಜೀನಾಮೆ ನೀಡಬೇಕು," ಎಂದು ಆಗ್ರಹಿಸಿ ಇಂದು ನಗರ ಸಭೆ ಮುಂಭಾಗದಲ್ಲಿ ಧರಣಿ ನಡೆಸಿ ಮಹಾನಗರ ಪಾಲಿಕೆ ಆಯುಕ್ತರಿಗೆ ಮನವಿ ಸಲ್ಲಿಸಿದ್ದಾರೆ.

ಈ ಸಂದರ್ಭದಲ್ಲಿ ಜಿಲ್ಲಾ ಅಧ್ಯಕ್ಷರು ಶ್ರೀ ಸೋಮನಾಥ ಪಾಟೀಲ, ಮಾಜಿ ವಿಧಾನ ಪರಿಷತ್ ಸದಸ್ಯರು ರಘುನಾಥರಾವ ಮಲ್ಕಪುರೇ, ನಗರ ಮಂಡಲ ಅಧ್ಯಕ್ಷರು ಶಶಿಧರ ಹೊಸಳ್ಳಿ, ಮಾಜಿ ಬುಡಾ ಅಧ್ಯಕ್ಷರು ಬಾಬು ವಾಲಿ,, ಗುರುನಾಥ ಜಂತಿಕಾರ, ಪೀರಪ್ಪ ಔರಾದೆ, ರೇವಣಸಿದ್ದಪ್ಪ ಜಲಾದೆ, ರಾಜಶೇಖರ ನಾಗಮೂರ್ತಿ, ಬಾಬುರಾವ ಕಾರಬಾರಿ, ಸುಭಾಷ ಮಡಿವಾಳ, ರಾಜಕುಮಾರ ಚಿದ್ರಿ, ದೀಪಕ ಗದಾಗೆ, ಮಹೇಶ್ವರ ಸ್ವಾಮಿ, ರಾಜೇಂದ್ರಪೂಜಾರಿ, ಪ್ರಭುಶೆಟ್ಟಿ ಪ್ರಧಾನ, ರೋಷನ್ ವರ್ಮಾ, ಗಣೇಶ ಭೋಸಲೇ, ಸುನಿಲ ಗೌಳಿ, ನೀತಿನ ನವಲಕೆಲೇ, ವೀರೇಶಸ್ವಾಮಿ, ಸಂತೋಷ ರೆಡ್ಡಿ, ಗುರುನಾಥ ರಾಜಗೀರ, ಉಲ್ಲಾಸಿನಿ ಮುದ್ದಾಳೆ, ವಿಜಯಲಕ್ಷ್ಮಿ ಕೌಟಗೆ, ನವೀನ ಚಿಟ್ಟಾ, ಸಂಗಮೇಶ್ ಗುಮ್ಮಾ, ವಿಜಯಕುಮಾರ ಹೆಗ್ಗೆ, ಸಂದೀಪ ಪಾಟೀಲ, ಸಂಗಮೇಶ ಹುಮನಾಬಾದೆ, ನೀತಿನ ಕರ್ಪೂರ, ಪವನ್ ಉಂಡೆ ,ಪುಷ್ಪಕ್ ಜಾಧವ ಉಪಸ್ಥಿತರಿದ್ದರು.

# ಕಾನೂನು ಬದ್ಧ ದತ್ತು ಪ್ರಕ್ರಿಯೆ "ಜೀವ ಸೆಲೆ" ವಿಡಿಯೋ ವೀಕ್ಷಿಸಲು, ಸಂಕಲ್ಪ ಸಂದೇಶ ಪಡೆಯಲು ಸೂಚನೆ

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ : ನವೆಂಬರ್ 07, (ಕ.ವಾ) : ರಾಷ್ಟ್ರೀಯ ದತ್ತು ಮಾಸಾಚರಣೆ 2025ರ ನವೆಂಬರ್ ಅಂಗವಾಗಿ ಕಾನೂನು ಬದ್ಧ ದತ್ತು ಪ್ರಕ್ರಿಯೆ ಕುರಿತು ಸಿದ್ದಪಡಿಸಲಾದ "ಜೀವ ಸೆಲೆ" ವಿಡಿಯೋ ವೀಕ್ಷಿಸಲು ಮತ್ತು ಸಂಕಲ್ಪ ಸಂದೇಶ ಪಡೆಯಲು ಆದೇಶವನ್ನು ಯಾದಗಿರಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಅಧ್ಯಕ್ಷರು ಹಾಗೂ ಜಿಲ್ಲಾಧಿಕಾರಿ ಶ್ರೀ ಹರ್ಷಲ್ ಭೋಯರ್ ಅವರು ಹೊರಡಿಸಿದ್ದಾರೆ.

ಪ್ರತಿ ವರ್ಷ ನವೆಂಬರ್ ತಿಂಗಳನ್ನು ರಾಷ್ಟ್ರೀಯ ದತ್ತು ಮಾಸಾಚರಣೆಯನ್ನಾಗಿ ಆಚರಿಸಲಾಗುತ್ತಿದ್ದು, ಅದರಂತೆ 2025-26ನೇ ಸಾಲಿನ ದತ್ತು ನಿಯಮಾವಳಿ-2022ರ ನಿಯಮ 41 (1) ಮತ್ತು 35 (2) (ಜಿ) ರನ್ವಯ ದತ್ತು ಮಾಸಾಚರಣೆಯನ್ನು ಆಚರಿಸಲಾಗುತ್ತಿದ್ದು, ಈ ವರ್ಷದ ಘೋಷವಾಕ್ಯ "ವಿಶೇಷ ಚೇತನ ಮಕ್ಕಳ ದತ್ತು ಪ್ರಕ್ರಿಯೆ" (Adoption of Children Having SpecialNeeds)ವಾಗಿರುತ್ತದೆ.

ಇದರ ಅಂಗವಾಗಿ ಸಾರ್ವಜನಿಕರಲ್ಲಿ ಕಾನೂನು ಬದ್ಧ ದತ್ತು ಮತ್ತು ಕಾನೂನು ಬಾಹಿರವಾಗಿ ಮಕ್ಕಳನ್ನು ದತ್ತು ಪಡೆದಲ್ಲಿ ವಿಧಿಸಬಹುದಾದ ಶಿಕ್ಷೆಗಳ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸಲು ವ್ಯಾಪಕವಾದ ಪ್ರಚಾರ ಕೈಗೊಳ್ಳುವ ನಿಟ್ಟಿನಲ್ಲಿ ಜಿಲ್ಲೆಯಲ್ಲಿರುವ ವಿವಿಧ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿಗಳು, ಅಂಗನವಾಡಿ, ವೈದ್ಯರು ಮತ್ತು ಶುಶ್ರೂಷಕರು, ಆಶಾ ಮತ್ತು ಅಂಕನವಾಡಿ ಕಾರ್ಯಕರ್ತೆಯರು, ಗ್ರಾಮ ಪಂಚಾಯತಿ ಅಧಿಕಾರಿಗಳು, ಸರ್ಕಾರಿ ಆಸ್ಪತ್ರೆಗಳು, ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ, ಖಾಸಗಿ ಮತ್ತು ಹೆರಿಗೆ ವಿಭಾಗದ ವೈದ್ಯರು ಮತ್ತು ಶುಶ್ರೂಷಕರು, ಮತ್ತು ಸಿಬ್ಬಂದಿಗಳು, ಮಕ್ಕಳ ಪಾಲನಾ ಸಂಸ್ಥೆಗಳ ಅಧಿಕಾರಿ, ಸಿಬ್ಬಂದಿಗಳಿಗೆ ದತ್ತು ಪ್ರಕ್ರೀಯೆ ಕುರಿತು "ಸಂಕಲ್ಪ ಸಂದೇಶ" ಪಡೆಯುವಂತೆ ಮತ್ತು "ಜೀವ ಸೆಲೆ" ವಿಡಿಯೋ ವೀಕ್ಷಣೆಯನ್ನು ಮಾಡಲು ತಿಳಿಸಿದೆ.

ಅದರಂತೆ ನವೆಂಬರ್ ತಿಂಗಳಲ್ಲಿ 2025ರ ನವೆಂಬರ್ 17 ರಂದು ಬೆಳಿಗ್ಗೆ 10.30 ಗಂಟೆಗೆ ಸುಭಾಷ್ ಚೌಕ ನಿಂದ ಪದವಿ ಮಹಾವಿದ್ಯಾಲಯದವರೆಗೆ ಜಾಥಾ ಕಾರ್ಯಕ್ರಮ ಹಮ್ಮಿಕೊಂಡು, ನಂತರ ಪದವಿ ಮಹಾವಿದ್ಯಾಲಯದ ಸಭಾಂಗಣ, ಯಾದಗಿರಿ ಇಲ್ಲಿ ಜಿಲ್ಲಾ ಮಟ್ಟದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ನಂತರ 2025ರ ನವೆಂಬರ್ 18 ರಂದು ಯಾದಗಿರಿ, ಶಹಾಪುರ, ಸುರಪುರ, ಗುರುಮಿಠಕಲ್, ವಡಗೇರಾ, ಹುಣಸಗಿ ತಾಲ್ಲೂಕೂಗಳಲ್ಲಿ ರಾಷ್ಟ್ರೀಯ ದತ್ತು ಮಾಸಾಚರಣೆಯ ಕಾರ್ಯಕ್ರಮ ಹಮ್ಮಿಕೊಳ್ಳುವುದು, ಈ ಕಾರ್ಯಕ್ರಮದಲ್ಲಿ ಭಾಗವಹಿಸಿ "ಜೀವ ಸೆಲೆ" ವಿಡಿಯೋ ವೀಕ್ಷಿಸಲು ಮತ್ತು ಸಂಕಲ್ಪ ಸಂದೇಶ ಪಡೆಯುವ ಮೂಲಕ ಕಾನೂನಾತ್ಮಕ

ದತ್ತುಪ್ರಕ್ರಿಯೆಯನ್ನು ಪ್ರೋತ್ಸಾಹಿಸುವುದು ಹಾಗೂ ತಮ್ಮ ಕಛೇರಿಗಳಲ್ಲಿ, ಆಸ್ಪತ್ರೆಗಳಲ್ಲಿ ಅಂಗನವಾಡಿ ಕೇಂದ್ರಗಳಲ್ಲಿ, ತಾಲ್ಲೂಕೂ ಕಛೇರಿಗಳಲ್ಲಿ "ಜೀವ ಸೆಲೆ" ವಿಡಿಯೋ ವೀಕ್ಷಿಸಲು ಮತ್ತು ಸಂಕಲ್ಪ ಸಂದೇಶ ಪಡೆಯಲು ಆದೇಶ ಹೊರಡಿಸಿದೆ. ಅದರಂತೆ ಸಂಕಲ್ಪ ಪಡೆಯುವುದು ಹಾಗೂ "ಜೀವ ಸೆಲೆ" ವಿಡಿಯೋ ವೀಕ್ಷಿಸಲು ಕಾರ್ಯಕ್ರಮ ಆಯೋಜಿಸಿ ಛಾಯಾ ಚಿತ್ರಗಳೊಂದಿಗೆ ವರದಿಯನ್ನು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಕಛೇರಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಜಿಲ್ಲಾಡಳಿತ ಭವನ ಕಟ್ಟಡ, ಮೊದಲನೇ ಮಹಡಿ, ರೂ.ಸಿ-17, ಚಿತ್ತಾಪುರ ರಸ್ತೆ, ಯಾದಗಿರಿ ಈ ಕಛೇರಿಗೆ ಅಥವಾ ಈ ಕಛೇರಿಯ E-mail ID: dcpoyadgir@gmail.com ಮೂಲಕ ವರದಿಯನ್ನು ಸಲ್ಲಿಸಬೇಕು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬಸವಣ್ಣನವರ ಕಾರ್ಯಗಳ ಶಕ್ತಿ ನೀಲಾಂಬಿಕೆತಾಯಿ



ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ: ಶರಣೆ ನೀಲಾಂಬಿಕೆ ತಾಯಿ ಮಹಾಮನೆಯ ಮಹಾತಾಯಿ ಆಗಿದ್ದರು. ಮಹಾಮನೆಗೆ ಆಗಮಿಸಿದ ಎಲ್ಲರಿಗೆ ಪ್ರೀತಿಯಿಂದ ಬರಮಾಡಿಕೊಂಡು ಪ್ರಸಾದ ಮಾಡಿಸುತ್ತಿದ್ದರು. ಬಸವಣ್ಣನವರ ಎಲ್ಲ ಕಾರ್ಯಗಳಿಗೆ ಶಕ್ತಿಯಾಗಿ ನಿಂತಿದ್ದರು ಎಂದು ಹಿರೇಮಠ ಸಂಸ್ಥಾನದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ಹೇಳಿದರು. ಪಟ್ಟಣದ ಹಿರೇಮಠ ಸಂಸ್ಥಾನದಲ್ಲಿ ಆಯೋಜಿಸಿದ್ದ ಮಾಸಿಕ ಶಿವಾನುಭವ ಗೋಷ್ಠಿಯ ದಿವ್ಯ ಸಾನಿಧ್ಯ ವಹಿಸಿ ಅವರು ಮಾತನಾಡಿದರು. ನೀಲಾಂಬಿಕೆ ತಾಯಿಯವರು ನೂರಾರು ವಚನಗಳಲ್ಲಿ ಬಸವಣ್ಣನವರ ಕುರಿತು ಹೃದಯ ತುಂಬಿ ಮಾತನಾಡಿದ್ದಾರೆ. ಅವರು ಬಸವಣ್ಣನವರ ವಿಚಾರ ಪತ್ನಿ ಎಂದು ಹೇಳುತ್ತಾರೆ. ಸಿದ್ಧರಸ ಪದ್ಮಗಂಧಿಯ ಮಗಳಾದ ನೀಲಾಂಬಿಕೆ ತಾಯಿಯವರು ಬಿಜ್ಜಳ ಅರಸನ ಸಾಕು ತಂಗಿಯಾಗಿದ್ದಳು. ಬಸವಣ್ಣನವರ ಸಮತಾ ರಾಜ್ಯದ ನಿರ್ಮಾಣದಲ್ಲಿ ನೀಲಾಂಬಿಕೆ ತಾಯಿಯವರು ನೀಡಿರುವ ಕೊಡುಗೆ ಅಪಾರವಾಗಿದೆ. ನೀಲಾಂಬಿಕೆ ತಾಯಿ ಮತ್ತು ಬಸವಣ್ಣನವರ ದಾಂಪತ್ಯ ಜೀವನ ಮಾದರಿಯಾಗಿತ್ತು. ಅವರ ಮಾರ್ಗದಲ್ಲಿ ಮುನ್ನಡೆಯುವ ಮೂಲಕ ನಾವು ನಮ್ಮ ಜೀವನ ಸುಖಿಯಾಗಿಸಿಕೊಳ್ಳಬೇಕೆಂದು ತಿಳಿಸಿದರು. ಮಹಾನಂದಾ ದೇಶಮುಖ ಅಧ್ಯಕ್ಷತೆ ವಹಿಸಿದ್ದರು. ಶಿವಾನಿ ಭಾಷಣ ಮಾಡಿದರು. ಶೋಭಾ ವಚನ ಗಾಯನ ನಡೆಸಿಕೊಟ್ಟರು. ದೀಪಕ ಠಮಕೆ ನಿರೂಪಿಸಿ, ವಂದಿಸಿದರು.

ಪ್ರಭುಲಿಂಗ ದೇವರು, ಶಿವಬಸವ ದೇವರು ಸಮ್ಮುಖ ವಹಿಸಿದ್ದರು. ಸಾಹಿತಿ ಡಾ.ಎಂ.ಮಕ್ತುಂಬಿ ಅನುಭಾವ ನೀಡಿದರು. ಈ ಸಂದರ್ಭದಲ್ಲಿ ಹಿರೇಮಠ ಸಂಸ್ಥಾನ ವಿದ್ಯಾಪೀಠ ಟ್ರಸ್ಟ್ನ ಆಡಳಿತಾಧಿಕಾರಿ ಮೋಹನ ರೆಡ್ಡಿ ಸೇರಿದಂತೆ ಹಲವರು ಇದ್ದರು.

**ಸನ್ಮಾನ :**

**ಇದೇ ಸಂದರ್ಭದಲ್ಲಿ ಆಳಂದ ಕ್ಷೇತ್ರದ ಶಾಸಕರ ದಬಿ.ಆರ್.ಪಾಟೀಲ್ ಪುತ್ರಿ ಡಾ.ತೇಜಸ್ವಿನಿ ಪಾಟೀಲ್ ಮತ್ತು ಶಶಿತಾಯಿ ಗುಂಡಾಳ ಅವರನ್ನು ಶ್ರೀಮಠದಿಂದ ಪೂಜ್ಯರು ಸನ್ಮಾನಿಸಿ, ಆಶೀರ್ವದಿಸಿದರು.**

# ನ.9 ರಂದು ಕನ್ನಡ ರಾಜ್ಯೋತ್ಸವದ ನಿಮಿತ್ಯ ನೃಪತುಂಗ ಪ್ರಶಸ್ತಿ ಪ್ರದಾನ



ರಾಯಚೂರು,ನ.7–ಹೊಸಮನಿ ಪ್ರಕಾಶನ ವತಿಯಿಂದ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ನ.9 ರಂದು ನಗರದ ಕನ್ನಡ ಭವನದಲ್ಲಿ ನೃಪತುಂಗಪ್ರಶಸ್ತಿಪ್ರದಾನ ಸಮಾರಂಭ ಆಯೋಜಿಸಲಾಗಿದೆ ಎಂದು ಪ್ರದಾನ ಕಾರ್ಯದರ್ಶಿ ಶೀಘಾ ಹೊಸಮನಿ ಅವರು ಹೇಳಿದರು.

ಅವರಿಂದುನಗರದಸುದ್ದಿಗಾರರೊಂದಿಗೆ ಮಾತನಾಡುತ್ತಾ, ಕಾರ್ಯಕ್ರಮದ ಉದ್ಘಾಟನೆಯನ್ನು ಹಿರಿಯ ಸಾಹಿತಿ ರಾಮಣ್ಣ ಹವಳೆ ಅವರು ನೆರವೇರಿಸಲಿದ್ದಾರೆ. ಹೊಸಮನಿ ಪ್ರಕಾಶನ ಅಧ್ಯಕ್ಷರಾದ ಬಶೀರ ಅಹ್ಮದ್ ಹೊಸಮನಿ ಅವರು ಅಧ್ಯಕ್ಷತೆ ವಹಿಸಲಿದ್ದಾರೆ. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಜೆ. ಎಲ್. ಗೋಪಿ, ಷಂಷಾದಬೇಗಂ ಆಗಮಿಸಲಿದ್ದಾರೆ. ಹೊಸಮನಿ ಪ್ರಕಾಶನ ಪರ್ವಿನಬೇಗಂ ಅವರು ಕಾರ್ಯಕ್ರಮದ ಉಪಸ್ಥಿತಿ ವಹಿಸಲಿದ್ದಾರೆ ಎಂದರು. ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ನೃಪತುಂಗ ಪ್ರಶಸ್ತಿ ಪುರಸ್ಕೃತರಾದ ಕರ್ನಾಟಕ ರಾಜ್ಯ ರೈತ ಸಂಘ ಗೌರವಧ್ಯಕ್ಷರಾದ ಚಾಮರಾಸ ಮಾಲಿಪಾಟೀಲ್, ಹಿರಿಯ ಸಾಹಿತಿ ಅಯ್ಯಪಯ್ಯ ಹುಡಾ, ಬಾಬು ಭಂಡಾರಿಗಲ್, ಸೈಯದ್ ಗೌಸ್ ಮೋಹಿಯುದ್ದೀನ್ ಪೀರಜಾದೆ,

ಈರಣ್ಣ ಕೋಸಗಿ, ರಾಮಲಿಂಗಪ್ಪ ಕುಣ್ಣಿ, ಬೀರಪ್ಪ ಶಂಭೋಜಿ, ವೀರೇಂದ್ರಕುಮಾರ ಕುರ್ಡಿ, ಅಣ್ಣಪ್ಪ ಮೇಟಿಗೌಡ, ರಘುನಾಥರೆಡ್ಡ ಮನ್ಸಲಪೂರು, ಎಂ ಭೇರಿ, ವೇಣು ಜಾಲಿಬೆಂಚಿ ಸೇರಿದಂತೆ ಅನೇಕ ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದರು. ಈ ಸಂದರ್ಭದಲ್ಲಿ ಬಶೀರ್ ಅಹ್ಮದ್ ಹೊಸಮನಿ, ಪರ್ವಿನಬೇಗಂ ಹೊಸಮನಿ, ರಫೀಕ ಅಹ್ಮದ್, ಆರ್ ಶಿವಮ್ಮ, ಮಹೇಂದ್ರ ಸಿಂಗ್ ಸೇರಿದಂತೆ ಉಪಸ್ಥಿತರಿದ್ದರು.

# ಉಚಿತ ಆರೋಗ್ಯ ತಪಾಸಿನ ಶಿಬಿರ



ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ನಗರದ ಸಾರ್ವಜನಿಕ ಗ್ರಂಥಾಲಯ ಹತ್ತಿರವಿರುವ ಓಂ ಸಾಯಿ ಧ್ಯಾನ ಮಂದಿರದಲ್ಲಿ ರಾಯಚೂರು ಪೂರ್ಣಿಮಾ ಆಯುರ್ವೇದಿಕ್ ಮಹಾ ವಿದ್ಯಾಲಯ ಹಾಗೂ ಸಂಶೋಧನಾ ಆಸ್ಪತ್ರೆ ವತಿಯಿಂದ ದಿನಾಂಕ 6 /11/ 2025 ರಂದು ಉಚಿತ ಆರೋಗ್ಯ ತಪಾಸಿನ ಶಿಬಿರ ಕಾರ್ಯಕ್ರಮ ಜರಗಿತು. ಓಂ ಸಾಯಿ ಜ್ಞಾನ ಮಂದಿರದ ಧರ್ಮಾಧಿಕಾರಿ ಸಾಯಿಕಿರಣ್ ಆದೋನಿ ಯವರು ಸಸಿಗೆ ನೀರಾಕುವುದರ ಮೂಲಕ ಉಚಿತ ಆರೋಗ್ಯ ಶಿಬಿರವನ್ನು ಉದ್ಘಾಟಿಸಿದರು. ನಂತರ ಅವರು ಮಾತನಾಡುತ್ತಾ ಜನಸಾಮಾನ್ಯರಿಗೆ ಮತ್ತು ನಮ್ಮ ಸಾಯಿ ಮಂದಿರದ ಸದ್ಭಕ್ತರಿಗೆ ಅನುಕೂಲವಾಗಲೆಂದು ಈ ಉಚಿತ ಆರೋಗ್ಯ ತಪಾಸಿನ ಶಿಬಿರವನ್ನು ಪೂರ್ಣಿಮಾ ಆಯುರ್ವೇದಿಕ್ ಮೆಡಿಕಲ್ ಕಾಲೇಜಿನವರು ಇಲ್ಲಿ ಆಯೋಜನೆ ಮಾಡಿದ್ದಾರೆ. ಇದರ ಸದುಪಯೋಗ ಪ್ರತಿಯೊಬ್ಬರು ಪಡೆದುಕೊಳ್ಳಬೇಕೆಂದು ಹೇಳಿದರು. ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಶಿಕ್ಷಣ ವಿಭಾಗದ ಜಿಲ್ಲಾ ಸಂಚಾಲಕರಾದ ಡಾ. ದಂಡಪ್ಪ ಬಿರಾದಾರ ಮಾತನಾಡುತ್ತಾ ಆಯುರ್ವೇದಿಕ್ ಪದ್ಧತಿ ಬಹಳ ಪುರಾತನವಾದ ಒಂದು ಚಿಕಿತ್ಸಾ ಕ್ರಮ. ರಾಜ ಮಹಾರಾಜರ ಕಾಲದಲ್ಲಿ ಇಂಥ ಚಿಕಿತ್ಸೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಡಲಾಗುತ್ತಿತ್ತು. ರಾಮಾಯಣ ಮತ್ತು ಮಹಾಭಾರತ ಕಥೆಗಳ ಇರುವ ಸಂದರ್ಭದಲ್ಲಿ ಆಗಿನ ರಾಜರು ಇವೊಂದು ಚಿಕಿತ್ಸೆ ಪದ್ಧತಿಯನ್ನು ಅನುಸರಿಸಿಕೊಂಡು ಬರುತ್ತಿದ್ದರು. ಇದು ನಿಧಾನಗತಿಯಲ್ಲಿ ಫಲಿತಾಂಶವನ್ನು ಕೊಡ್ತಾ ಇದೆ. ನಿಧಾನವೇ ಪ್ರಧಾನ ಎಂಬ ತತ್ವವನ್ನು ಇದು ಹೊಂದಿರುತ್ತದೆ. ಎಂದು ಹೇಳಿದರು. ಈ ಸಂದರ್ಭದಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ರಾಜ್ಯ ಮಹಿಳಾ ಘಟಕದ ಪ್ರಧಾನ ಕಾರ್ಯದರ್ಶಿ ಡಾ. ನಾಗವೇಣಿ ಪಾಟೀಲ್. ಪೂರ್ಣಿಮಾ ಆಯುರ್ವೇದಿಕ್ ಮೆಡಿಕಲ್ ಕಾಲೇಜಿನ ಡಾ. ಅಂಬಿಕಾ ಡಾ. ರಾಘವೇಂದ್ರ ಡಾ. ಶಿವಕುಮಾರ್ ಡಾ. ರಶ್ಮಿ ಡಾ. ಕೀರ್ತಿ ಸಂಗೀತ ಕಲಾವಿದರ ಎಂ ನೂಲಿ ಕಲಾವಿದರಾದ ಗುರುಲಿಂಗಪ್ಪ ಕಾಲೇಜಿನ ವಿದ್ಯಾರ್ಥಿಗಳು ಸಿಬ್ಬಂದಿಯವರು. ಉಪಸ್ಥಿತರಿದ್ದರು

ಈ ಒಂದು ಶಿಬಿರದಲ್ಲಿ ಹಲವಾರು ಜನರು ತಮ್ಮ ವೈಯಕ್ತಿಕವಾದ ರೋಗಗಳ ಕುರಿತು ತಪಾಸಣೆ ಮಾಡಿಸಿಕೊಂಡುರು. ಕೆಲವರು ಮಲಬದ್ಧತೆ. ರಕ್ತ ಹೀನತೆ, ಕಾಮಲೇ. ಆಮ್ಲ ಪಿತ್ತ. ಅಸ್ತಮಾ ಅಲರ್ಜಿ. ತಲೆನೋವು. ಸಕ್ಕರೆ ಕಾಯಿಲೆ ಬೊಜ್ಜುತನ ಇನ್ನಿತರ ಅಂಶಗಳ ಕುರಿತು ಆರೋಗ್ಯ ತಪಾಸಣಿ ನಡೆಯಿತು. ಈ ಸಂದರ್ಭದಲ್ಲಿ ರವೀಂದ್ರನಾಯಕ ಸ್ವಾಗತಿಸಿದರು. ಡಾ. ಕೀರ್ತಿ ಕೊನೆಯಲ್ಲಿ ವಂದಿಸಿದರು

# ಪಟ್ಟಣದಲ್ಲಿ 8 ಅಡಿ ಕನಕದಾಸ ಕಂಚಿನ ಪುತ್ಥಳಿಗೆ ಸರ್ಕಾರದ ಅನುಮೋದನೆ: ಕೆ. ಆಂಜನೇಯ



ರಾಯಚೂರು:ನಗರದ ಪತ್ರಿಕಾಭವನದಲ್ಲಿ ಮಾತನಾಡಿದ ಶ್ರೀ ದಾಸ ಶ್ರೇಷ್ಠ ಕನಕದಾಸ ಉದ್ಯಾನವನ ಸಮಿತಿಯ ಅಧ್ಯಕ್ಷರು ಕೆ. ಆಂಜನೇಯ ಅವರು ದೇವದುರ್ಗ ಮತ್ತು ಸಿರವಾರ ಪಟ್ಟಣಗಳಲ್ಲಿ 8 ಅಡಿ ಎತ್ತರದ ಕನಕದಾಸರ ಕಂಚಿನ ಪ್ರತಿಮೆ ಸ್ಥಾಪನೆಗೆ ಸರ್ಕಾರ ಹಸಿರು ನಿಶಾನೆ ತೋರಿಸಿರುವುದಾಗಿ ಹೇಳಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿಶೇಷ ಅನುದಾನದಿಂದ 50 ಲಕ್ಷ ರೂಪಾಯಿ ಬಿಡುಗಡೆಯಾಗಿದ್ದು, ಎರಡೂ ಪಟ್ಟಣ ಪಂಚಾಯಿತಿಗಳಿಗೆ ಜಿಲ್ಲಾಧಿಕಾರಿಗಳು ಆಡಳಿತಾನುಮೋದನೆ ನೀಡಿರುವುದಾಗಿ ಅವರು ತಿಳಿಸಿದರು.

ದೇವದುರ್ಗದಲ್ಲಿ ಬಸ್ ಸ್ಟಾಂಡ್ ಎದುರು 2020 ಅಡಿ ಜಾಗ ಮತ್ತು ಸಿರವಾರದಲ್ಲಿ ಗಾಳಿ ಆಂಜನೇಯಸ್ವಾಮಿ ದೇವಸ್ಥಾನದ ಎದುರು ಇದೇ ಪ್ರಮಾಣದ ಜಾಗವನ್ನು ಜಿಲ್ಲಾಡಳಿತ ಗುರುತಿಸಿ ರಾಜ್ಯ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ.

ಮುಂದುವರೆದು, ಕರ್ನಾಟಕ ಪ್ರದೇಶ ಕುರುಬರ ಸಂಘದ ಹೆಸರಿಗೆ ಬಡ ವಿದ್ಯಾರ್ಥಿಗಳಿಗಾಗಿ ವಸತಿ ನಿಲಯ ಕಟ್ಟಲು ಯರಮರಸ್ ಗ್ರಾಮದ ಸರ್ವೆ ನಂ. 55ರಲ್ಲಿ 14 ಗುಂಟೆ ಜಾಗ ಸಂಪುಟ ಸಭೆಯಲ್ಲಿ ಈಗಾಗಲೇ ಮಂಜೂರಾಗಿದೆ. ಇದೇ ಪ್ರದೇಶದಲ್ಲಿರುವ 1 ಎಕರೆ ಭೂಮಿಯನ್ನು 'ಕನಕ ಭವನ' ನಿರ್ಮಾಣಕ್ಕೆ ನೀಡಬೇಕೆಂಬ ಮನವಿಗೆ ಸಹ ಮುಖ್ಯಮಂತ್ರಿ ಸ್ಪಂದಿಸಿದ್ದು, ಕಂದಾಯ ಪ್ರಧಾನ ಕಾರ್ಯದರ್ಶಿಗಳಿಗೆ ಸೂಚನೆ ನೀಡಿರುವುದಾಗಿ ಕೆ. ಆಂಜನೇಯ ಹೇಳಿದರು. ಕನಕ ಭವನದ ಭೂಮಿ ಪೂಜೆ ಹಾಗೂ ದೇವದುರ್ಗ–ಸಿರವಾರ ಪಟ್ಟಣಗಳಲ್ಲಿ ಕಂಚಿನ ಪ್ರತಿಮೆ ಅನಾವರಣ ಕಾರ್ಯಕ್ರಮಗಳನ್ನು ಶೀಘ್ರದಲ್ಲೇ ಆಯೋಜಿಸಲು ಸಮಿತಿ ಸಿದ್ಧತೆ ನಡೆಸುತ್ತಿದೆ ಎಂದು ಅವರು ತಿಳಿಸಿದರು.

# ಗಾಯಕಿ ಸಂತೋಷಿಗೆ ಒಲಿದು ಬಂದ ಕರ್ನಾಟಕ ರತ್ನ ಶ್ರೀ ಪ್ರಶಸ್ತಿ.



ಮಲ್ಲಮ್ಮ ನುಡಿ ವಾರ್ತೆ

ರಾಯಚೂರು: ನಗರದ ಗಾಯಕಿ, ನಿರೂಪಕಿ ಕು. ಸಂತೋಷಿ ಇವರು ರಾಜ್ಯ ಮಟ್ಟದ ಕರ್ನಾಟಕ ರತ್ನ ಶ್ರೀ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಬೆಂಗಳೂರಿನ ಸಂಜಯ ನಗರದ ವಸಂತ ಲಕ್ಷ್ಮಿ ಫೌಂಡೇಶನ್ ಇವರಿಂದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಬೆಂಗಳೂರಿನ ಸದಾಶಿವ ನಗರದ ವೀರಶೈವ ಸಭಾ ಭವನದಲ್ಲಿ ನ. 9ರಂದು ರವಿವಾರ ಬೆಳಗ್ಗೆ 10 ಗಂಟೆಗೆ ರಾಜ್ಯದ 20 ಜನ ಸಾಧಕರಿಗೆ ಪ್ರಶಸ್ತಿ ಪ್ರದಾನವನ್ನು ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮದಲ್ಲಿ ಸಂತೋಷಿ ಅವರಿಗೆ ಗಾಯನ ಕ್ಷೇತ್ರದಲ್ಲಿ ರಾಜ್ಯ ಮಟ್ಟದ ಕರ್ನಾಟಕ ರತ್ನ ಶ್ರೀ ಪ್ರಶಸ್ತಿ ಪ್ರಧಾನ ನಡೆಯಲಿದೆ. ಈ ಕಾರ್ಯಕ್ರಮದಲ್ಲಿ ಸಾಹಿತಿ ನಾಡೋಜ ಕುಂ. ವೀರಭದ್ರಪ್ಪ, ಚಲನಚಿತ್ರ ಸಂಗೀತ ನಿರ್ದೇಶಕರಾದ ವಿ. ಮನೋಹರ್, ನಟಿ ರೇಖಾ ದಾಸ್, ಡಾ. ಪೂಜಾ ರಮೇಶ್, ಮಾಜಿ ಸಚಿವ ವರ್ತೂರ್ ಪ್ರಕಾಶ್, ಕಟ್ಟಾ ಜಗದೀಶ್ ಸುಬ್ರಹ್ಮಣ್ಯಂ ನಾಯ್ಡು ಪ್ರಶಸ್ತಿ ಪ್ರಧಾನ ಸಮಾರಂಭದ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ವಸಂತ ಲಕ್ಷ್ಮಿ ಫೌಂಡೇಶನ್ ಕಾರ್ಯದರ್ಶಿ ಕೆ. ಕುಮಾರ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ದಿ.8 ರಿಂದ ರಾಜ್ಯ ಚಾಂಪಿಯನ್ ಶಿಪ್ ಬ್ಯಾಡ್ಮಿಂಟನ್ ಪಂದ್ಯಾವಳಿ



ಮಲ್ಲಮ್ಮ ನುಡಿ ವಾರ್ತೆ

ರಾಯಚೂರು,ನ.7–ರಾಯಚೂರು ಜಿಲ್ಲಾ ಬ್ಯಾಡ್ಮಿಂಟನ್ ಅಸೋಸಿಯೇಷನ್ ಸಹಯೋಗದಲ್ಲಿ ದಿ.8 ರಿಂದ 13 ವರೆಗೆ ಯೋನೆಕ್ಸ್ ಸನ್ ರೈಸ್ ಕರ್ನಾಟಕ ರಾಜ್ಯ ಚಾಂಪಿಯನ್ ಶಿಪ್ ಬ್ಯಾಡ್ಮಿಂಟನ್ ಪಂದ್ಯಾವಳಿ ನಗರದ ಮಹಾತ್ಮಾ ಗಾಂಧಿ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯಲಿದೆ ಎಂದು ಅಸೋಸಿಯೇಷನ್ ಅಧ್ಯಕ್ಷರಾದ ಬೆಲ್ಲಂ ಕಿರಣ್ ಅವರು ಹೇಳಿದರು.

ಅವರಿಂದುನಗರದಸುದ್ದಿಗಾರರೊಂದಿಗೆ ಮಾತನಾಡುತ್ತಾ, ಈ ಪಂದ್ಯಾವಳಿ ವಿಕ್ಟರಿ ಬ್ಯಾಡ್ಮಿಂಟನ್ ಅಕಾಡೆಮಿ ಆಯೋಜಿಸಲಾಗಿದೆ. ಕರ್ನಾಟಕದ ಯುವ ಬ್ಯಾಡ್ಮಿಂಟನ್ ಪ್ರತಿಭೆಯನ್ನು ಗುರುತಿಸುವುದು, ಹಾಗೂ ರಾಜ್ಯ ಮಟ್ಟದ ವೇದಿಕೆಯಲ್ಲಿ ತಮ್ಮ ಕೌಶಲ್ಯವನ್ನು ಪ್ರದರ್ಶನಕ್ಕೆ ಅವಕಾಶ ಕಲ್ಪಿಸುವ ಉದ್ದೇಶದಿಂದ ಬ್ಯಾಡ್ಮಿಂಟನ್ ಪಂದ್ಯಾವಳಿ ಆಯೋಜಿಸಲಾಗಿದೆ ಎಂದರು. ಜಿಲ್ಲೆಯಿಂದ 10 ಜನ ಕ್ರೀಡಾಪಟುಗಳು ಭಾಗವಹಿಸಲಿದ್ದಾರೆ ಅದೇ ರೀತಿ ರಾಜ್ಯದ ವಿವಿಧ ಜಿಲ್ಲೆಗಳ ಸುಮಾರು 500 ಕ್ಕೂ ಹೆಚ್ಚು ಕ್ರೀಡಾಪಟುಗಳು ಈ ಸ್ಪರ್ಧೆಯಲ್ಲಿ ಭಾಗವಹಿಸಲಿದ್ದಾರೆ. ಟೂರ್ನಮೆಂಟ್‌ನಲ್ಲಿ ಉನ್ನತ ಮಟ್ಟದ ಸ್ಪರ್ಧೆ ನಡೆಯಲಿದ್ದು, ಸ್ಪರ್ಧೆಯಲ್ಲಿ ವಿಜೇತರಾದ ಕ್ರೀಡಾಪಟುಗಳಿಗೆ ಪ್ರಶಸ್ತಿ ಮತ್ತು ಪ್ರಮಾಣಪತ್ರ ನೀಡಲಾಗುವುದು ಎಂದರು. ಈ ಸಂದರ್ಭದಲ್ಲಿ ರಾಮಲಿಂಗಯ್ಯ, ಚೇತನ್ ದೋಖಾ, ಸೋಮ ಅರ್ಜುನ, ಅರವಿಂದ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಟೆಕ್ನಾನ್ ಸ್ಟೀಲ್ ಕಾರ್ಖಾನೆಯ ವಿರುದ್ಧ ಕನ್ನಡಪರ ಸಂಘಟನೆಗಳ ಆಕ್ರೋಶ

## ಸುರೇಶ್ ಬಾಬು ನೇತೃತ್ವದಲ್ಲಿ ಅಪರ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಕೆ

ರಾಯಚೂರು: ವಣ್ಣೂರು ಸೀಮಾಂತರದಲ್ಲಿರುವ ಟೆಕ್ನಾನ್ ಸ್ಟೀಲ್ ಲಿಮಿಟೆಡ್ ಕಾರ್ಖಾನೆಯಿಂದ ಉಂಟಾಗುತ್ತಿರುವ ದೂಳು, ಶಬ್ದ ಮಾಲಿನ್ಯ ಹಾಗೂ ಸ್ಥಳೀಯರ ಸಮಸ್ಯೆಗಳ ಬಗ್ಗೆ ತಕ್ಷಣ ಕ್ರಮ ಕೈಗೊಳ್ಳುವಂತೆ ಕನ್ನಡಪರ ಸಂಘಟನೆಗಳು ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿವೆ. ಚಿಕ್ಕಸೂಗೂರು ಜಿಲ್ಲಾ ಪಂಚಾಯತ್ ಕ್ಷೇತ್ರ ಘಟಕದ ಕರ್ನಾಟಕ ರಕ್ಷಣಾ ವೇದಿಕೆಯ ಅಧ್ಯಕ್ಷ ಸುರೇಶ್ ಬಾಬು ಅವರ ನೇತೃತ್ವದಲ್ಲಿ ಗುರುವಾರ ಅಪರ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲಾಯಿತು.

ಮನವಿಯಲ್ಲಿ ವಣ್ಣೂರು, ಚಿಕ್ಕಸೂಗೂರು, ಹೆಗ್ಗಸನಹಳ್ಳಿ ಗ್ರಾಮಗಳು ಕಾರ್ಖಾನೆ ಚಟುವಟಿಕೆಗಳಿಂದ ಹೆಚ್ಚು ಬಾಧಿತವಾಗಿದ್ದು, ಸ್ಥಳೀಯರು ಮತ್ತು ರೈತರು ನಿರಂತರವಾಗಿ ಸಮಸ್ಯೆಗಳನ್ನು ಎದುರಿಸುತ್ತಿರುವುದಾಗಿ ತಿಳಿಸಲಾಗಿದೆ. ಕಾರ್ಖಾನೆ ಆಡಳಿತ ಬಡಾವಣೆ ಪ್ರದೇಶಕ್ಕೆ ಯಾವುದೇ ಮೂಲಭೂತ ಸೌಲಭ್ಯ ಒದಗಿಸದಿರುವುದು ಹಾಗೂ ಹಲವಾರು ಬಾರಿ ಮನವಿ ಮಾಡಿದರೂ ಅಧಿಕಾರಿಗಳು ಸ್ಪಂದಿಸದಿರುವುದನ್ನು ಸಂಘಟನೆಯವರು ಖಂಡಿಸಿದ್ದಾರೆ.

**ಸಲ್ಲಿಸಿದ ಪ್ರಮುಖ ಬೇಡಿಕೆಗಳು:**

* **ದೂಳು ಮಾಲಿನ್ಯದಿಂದ ಹಾನಿಗೊಳಗಾದ ರೈತರ ಬೆಳೆಗಳಿಗೆ ಪರಿಹಾರ**
* **ಮೂರೂವರೆ ವರ್ಷಗಳಿಂದ ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುವ ಸ್ಥಳೀಯರನ್ನು ಖಾಯಂಗೊಳಿಸುವುದು**
* **ಕಾರ್ಖಾನೆ ಆವರಣದಲ್ಲಿ ಹೊರರಾಜ್ಯದ ಕಾರ್ಮಿಕರ ವಾಸ್ತವ್ಯ ನಿಷೇಧ**
* **ಸ್ಥಳೀಯರಿಗೆ ಉದ್ಯೋಗದಲ್ಲಿ ಮೊದಲ ಆದ್ಯತೆ ಮತ್ತು ಸ್ಥಳೀಯ ಗುತ್ತಿಗೆದಾರರಿಗೆ ಪ್ರಾಮುಖ್ಯತೆ**



* **ಕಾರ್ಮಿಕರಿಗೆ ಸರ್ಕಾರ ನಿಗದಿಪಡಿಸಿದ ಸೌಲಭ್ಯಗಳ ಪೂರ್ಣ ಅನುಷ್ಠಾನ**
* **ಚಿಕ್ಕಸೂಗೂರು 2ನೇ ಕ್ರಾಸ್‌ನಿಂದ ಕಾರ್ಖಾನೆಯವರೆಗೆ ಇರುವ ರಸ್ತೆಯ ರಕ್ಷಣೆ-ನಿರ್ವಹಣೆ ಕಂಪನಿಯೆ ಅವರೇ ನಿಭಾಯಿಸುವ ವ್ಯವಸ್ಥೆ**

ಮನವಿಯಲ್ಲಿ ಬೇಡಿಕೆಗಳಿಗೆ ಸ್ಪಂದನೆ ದೊರಕದಿದ್ದರೆ ತೀವ್ರ ಹೋರಾಟಕ್ಕೆ ಮುಂದಾಗುವುದಾಗಿ ಕನ್ನಡಪರ ಸಂಘಟನೆಗಳು ಎಚ್ಚರಿಸಿವೆ.

ಮನವಿ ಸಲ್ಲಿಕೆಯಲ್ಲಿ ಖಾಜಹುಸೇನ್ (ಕ.ಯು.ಜಾ.ವೇ), ಬಾವುದ್ದೀನ್, ಮಾರುತಿ ಚಿಕ್ಕಸೂಗೂರು, ಮಂಜುನಾಥ ರೈತ ಸಂಘ ಸೇರಿದಂತೆ ಹಲವಾರು ಕನ್ನಡಪರ ಮುಖಂಡರು ಭಾಗವಹಿಸಿದ್ದರು. ಮನವಿ ಪ್ರತಿಗಳನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಕಾರ್ಮಿಕ ಇಲಾಖೆ, ತಹಶೀಲ್ದಾರ್ ಹಾಗೂ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಗೆ ಸಹ ಸಲ್ಲಿಸಲಾಗಿದೆ.

# ಜಿಲ್ಲೆಯಲ್ಲಿ ತಂಬಾಕು ಮುಕ್ತ ಯುವ ಅಭಿಯಾನ ಜಿಲ್ಲಾಧಿಕಾರಿ ನಿತೀಶ್ ಕೆ. ಸೂಚನೆ



ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ನವೆಂಬರ್ 07 (ಕರ್ನಾಟಕ ವಾರ್ತೆ): ತಂಬಾಕು ಮುಕ್ತ ಸಮಾಜ ನಿರ್ಮಾಣ ಗುರಿ ಹಿನ್ನೆಲೆಯಲ್ಲಿ, ರಾಷ್ಟ್ರೀಯ ಆರೋಗ್ಯ ಅಭಿಯಾನ ನೀಡಿದ ಮಾರ್ಗಸೂಚಿಯಂತೆ ರಾಯಚೂರು ಜಿಲ್ಲೆಯಲ್ಲಿ ತಂಬಾಕು ಮುಕ್ತ ಯುವ ಅಭಿಯಾನ 3.0 ಅಚ್ಚುಕಟ್ಟಾಗಿ ನಡೆಯಬೇಕು ಎಂದು ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಅವರು ಆರೋಗ್ಯ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ನವೆಂಬರ್ 6ರ ಗುರುವಾರದಂದು ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ನಡೆದ ಜಿಲ್ಲಾ ತಂಬಾಕು ನಿಯಂತ್ರಣ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ತಂಬಾಕಿನ ಹಾನಿಕಾರಕ ಪರಿಣಾಮಗಳ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕು. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಜಿಲ್ಲೆಯಲ್ಲಿ ಕನಿಷ್ಠ 30 ಗ್ರಾಮಗಳನ್ನು ತಂಬಾಕು ಮುಕ್ತ ಗ್ರಾಮವನ್ನಾಗಿ ಘೋಷಿಸಬೇಕು. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಯೋಗದೊಂದಿಗೆ ಅಭಿಯಾನದಲ್ಲಿ ಯುವಕರನ್ನು ತಂಬಾಕಿನ ಹಸ್ತಕ್ಷೇಪದಿಂದ ರಕ್ಷಿಸಲು ಸಾಮಾಜಿಕ ಮಾಧ್ಯಮದ ಮೂಲಕ ಅರಿವು ಮೂಡಿಸಬೇಕು.

ತಂಬಾಕು ನಿಯಂತ್ರಣ ಕಾರ್ಯಕ್ರಮದ ಬಗ್ಗೆ ವಿವಿಧ ಇಲಾಖೆಯ ಅಧಿಕಾರಿಗಳಿಗೆ ಅರಿವು ಮೂಡಿಸಬೇಕು. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮೂಲಕ ಜಿಲ್ಲೆಯಲ್ಲಿ ಕನಿಷ್ಠ 30 ಐಇಸಿ ಅಭಿಯಾನ ನಡೆಸಬೇಕು.

ಶಿಕ್ಷಣ ಇಲಾಖೆಯ ಮೂಲಕ ಜಿಲ್ಲೆಯಲ್ಲಿ ಕನಿಷ್ಠ 400 ಶಾಲಾ, ಕಾಲೇಜುಗಳನ್ನು ತಂಬಾಕು ಮುಕ್ತ ಶೈಕ್ಷಣಿಕ ಸಂಸ್ಥೆಯಾಗಿ ಘೋಷಿಸಿಲು ಕ್ರಮಕೈಗೊಳ್ಳಬೇಕು. ಇತರ ಇಲಾಖೆಯ ಹಾಗೂ ಸರ್ಕಾರೇತರ ಸಂಸ್ಥೆಯ ಸಹಯೋಗದೊಂದಿಗೆ ವಿವಿಧ ಚಟುವಟಿಕೆಗಳನ್ನು ನಡೆಸಬೇಕು.

ಇದಕ್ಕೆ ಸಂಬಂಧಿಸಿದಂತೆ ಜಿಲ್ಲಾ ತಂಬಾಕು ನಿಯಂತ್ರಣ ಸಮನ್ವಯ ಸಭೆಗಳು ನಿಯಮಿತವಾಗಿ ನಡೆಯುವಂತೆ ಕ್ರಮವಹಿಸಬೇಕು.

ಜಿಲ್ಲಾ ಕ್ರಿಯಾ ಯೋಜನೆಯನ್ನು ರೂಪಿಸಿ ಅಭಿಯಾನ ನಡೆಸಬೇಕು. ಚಟುವಟಿಕೆಗಳ ಅನುಷ್ಠಾನ ವರದಿಯನ್ನು ಸಂಬಂಧಪಟ್ಟ ಇಲಾಖೆಯವರು ಜಿಲ್ಲಾ ತಂಬಾಕು ನಿಯಂತ್ರಣ ಘಟಕ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಸಲ್ಲಿಸಬೇಕೆಂದು ಜಿಲ್ಲಾಧಿಕಾರಿಗಳು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ತಂಬಾಕು ಮುಕ್ತ ಯುವ ಅಭಿಯಾನ– 3.0 ಚಟುವಟಿಕೆಗಳನ್ನು ಜಿಲ್ಲೆಯಲ್ಲಿ ಸರಿಯಾಗಿ ನಡೆಸಿ ವರದಿಯನ್ನು ರಾಜ್ಯ ಮಟ್ಟಕ್ಕೆ ನಿಗದಿತ ಎಮ್ಐಎಸ್ ಪೋರ್ಟಲ್ ಮೂಲಕ ನೀಡಬೇಕು. ತಂಬಾಕು ಮುಕ್ತ ಸಮಾಜವನ್ನು ಕಟ್ಟುವ ನಿಟ್ಟಿನಲ್ಲಿ ಈ ಅಭಿಯಾನಕ್ಕೆ ಶಾಲಾ ಶಿಕ್ಷಣ ಇಲಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ, ಪೊಲೀಸ್ ಇಲಾಖೆ, ವಾರ್ತಾ ಇಲಾಖೆ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಸಹಕಾರ ನೀಡಬೇಕೆಂದು ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು. ಪ್ರಕಟಣೆಗಳ ಬಿಡುಗಡೆ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮದಡಿ ಪ್ರಕಟಿಸಿದ ಜನಜಾಗೃತಿ ಪ್ರಕಟಣೆಗಳನ್ನು ಇದೆ ವೇಳೆ ಬಿಡುಗಡೆ ಮಾಡಲಾಯಿತು.

ಸಭೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಡಾ. ಸುರೇಂದ್ರಬಾಬು, ಜಿಲ್ಲಾ ಆರ್ ಸಿಎಚ್ ಅಧಿಕಾರಿ ಡಾ. ನಂದಿತಾ ಎನ್ ಎಮ್, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ಗಣೇಶ ಕೆ., ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಡಾ. ಈಶ್ವರ್ ಹೆಚ್ ದಾಸಪ್ಪನವರ, ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಬಸಯ್ಯ, ವಾರ್ತಾ ಇಲಾಖೆಯ ವಾರ್ತಾ ಸಹಾಯಕರಾದ ಗವಿಸಿದ್ದಪ್ಪ ಹೊಸಮನಿ, ತಂಬಾಕು ನಿಯಂತ್ರಣ ಕಾರ್ಯಕ್ರಮದ ಸಿಬ್ಬಂದಿ ಪ್ರಿಯಾಂಕ ರೇವಣಕರ, ಯಂಕೋಬಾ ಸರ್ಜಾಪುರ, ಅಣ್ಣಪೂರ್ಣಬಾಯಿ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಇದ್ದರು.

# ಯುತ್ ಫಾರ್ ಸಿಟಿ ಅಭಿಯಾನದಡಿ ಸ್ಪರ್ಧಾತ್ಮಕ ಪರೀಕ್ಷೆಯ ತರಬೇತಿ ಶಿಬಿರ: ಜುಬಿನ್ ಮೊಹಪಾತ್ರ



ರಾಯಚೂರು ನವೆಂಬರ್ 07 (ಕರ್ನಾಟಕ ವಾರ್ತೆ): "ಸಿಟಿ ಫಾರ್ ಯುತ್, ಯುತ್ ಫಾರ್ ಸಿಟಿ" ಅಭಿಯಾನದಡಿ ರಾಯಚೂರು ಮಹಾನಗರ ಪಾಲಿಕೆಯು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಸಹಯೋಗದಲ್ಲಿ ಹಮ್ಮಿಕೊಂಡ ಸ್ಪರ್ಧಾತ್ಮಕ ಪರೀಕ್ಷೆಯ ಪೂರ್ವಭಾವಿ ತರಬೇತಿ ಶಿಬಿರದಲ್ಲಿ ವಿದ್ಯಾರ್ಥಿಗಳು ಸಕ್ರಿಯ ಭಾಗಿಯಾಗಬೇಕು ಎಂದು ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ ಅವರು ವಿದ್ಯಾರ್ಥಿಗಳಲ್ಲಿ ಮನವಿ ಮಾಡಿದ್ದಾರೆ.

ವಿದ್ಯಾರ್ಥಿ–ಯುವಜನರು ಈ ದೇಶದ ಬಹುದೊಡ್ಡ ಸಂಪತ್ತು. ಸಕಾಲಕ್ಕೆ ಮಾರ್ಗದರ್ಶನ ಸಿಗದೇ ಇದ್ದಲ್ಲಿ ಯುವಜನತೆ ದಾರಿತಪ್ಪುವ ಸಾಧ್ಯತೆ ಹೆಚ್ಚಿರುತ್ತದೆ. ಇದನ್ನರಿತು ರಾಯಚೂರು ಮಹಾನಗರ ಪಾಲಿಕೆಯು "ಸಿಟಿ ಫಾರ್ ಯುತ್, ಯುತ್ ಫಾರ್ ಸಿಟಿ" ಅಭಿಯಾನದಡಿ ಯುವಜನರಿಗೆ ಉತ್ತಮ ಮಾರ್ಗದರ್ಶನದ ಕಾರ್ಯಕ್ರಮಗಳನ್ನು ರೂಪಿಸುತ್ತಿದೆ. ಈ ಅಭಿಯಾನದ ಮುಂದುವರೆದ ಭಾಗವಾಗಿ ಈಗ ಈ ಶಿಬಿರ ಆಯೋಜನೆ ಮಾಡಿದ್ದೇವೆ.

ಈ ಭಾಗದ ವಿದ್ಯಾರ್ಥಿಗಳು ದೂರದ ಬೆಂಗಳೂರು, ಮಂಗಳೂರ, ಧಾರವಾಡ, ವಿಜಯಪುರ, ಮೈಸೂರ ಸೇರಿದಂತೆ ಅನೇಕ ಕಡೆಗೆ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿಗೆ ತೆರಳುತ್ತಾರೆ. ಇದರಿಂದ ಅವರಿಗೆ ಆರ್ಥಿಕ ಹೊರೆಯಾಗುತ್ತದೆ. ಇದನ್ನು ತಪ್ಪಿಸಲು ಈ ಭಾಗದ ವಿದ್ಯಾರ್ಥಿಗಳಿಗೆ ಅನುಕೂಲವಾಗಲು ರಾಯಚೂರು ಜಿಲ್ಲೆಯಲ್ಲಿ ಪ್ರಪ್ರಥಮ ಬಾರಿಗೆ ಈ ಸ್ಪರ್ಧಾತ್ಮಕ ಪರೀಕ್ಷೆಯ ಪೂರ್ವಭಾವಿ ಉಚಿತ ತರಬೇತಿ ಶಿಬಿರ ಆಯೋಜನೆ ಮಾಡಿದ್ದೇವೆ. ರಾಯಚೂರಲ್ಲಿ 30 ದಿನ ನಡೆಯುವ ಸ್ಪರ್ಧಾತ್ಮಕ ಪರೀಕ್ಷೆಯ ತರಬೇತಿ ಶಿಬಿರಕ್ಕೆ ಹೆಸರು ನೋಂದಣಿಗೆ ನವೆಂಬರ್ 8 ಕೊನೆಯ ದಿನವಾಗಿದ್ದು, ಆಸಕ್ತರು ಬೇಗನೇ ಹೆಸರು ನೋಂದಣಿ ಮಾಡಬೇಕು. ಐಎಎಸ್, ಐಪಿಎಸ್, ಐಆರ್‌ಎಸ್, ಕೆಎಎಸ್ ಪರೀಕ್ಷೆಗಳು ಜೊತೆಗೆ ಎಫ್‌ಡಿಎ, ಎಸ್ ಡಿಎ, ಪೊಲೀಸ್, ಪಿಡಿಓ ಸೇರಿದಂತೆ ಅನೇಕ ಬಗೆಯ ಸ್ಪರ್ಧಾತ್ಮಕ ಪರೀಕ್ಷೆ ಪಾಸು ಮಾಡುವ ಕನಸು ನನಸು ಮಾಡಿಕೊಳ್ಳಬೇಕು ಎಂದು ಅವರು ಮನವಿ ಮಾಡಿದ್ದಾರೆ.

ನವೆಂಬರ್ 12ರಂದು ಮಧ್ಯಾಹ್ನ 3 ರಿಂದ 4.30ರವರೆಗೆ ರಾಯಚೂರಿನ ಜಿಲ್ಲಾ ರಂಗಮಂದಿರ ಹತ್ತಿರದ ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜಿನಲ್ಲಿ ನಡೆಯುವ ಅರ್ಹತಾ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆಯುವ ಮೊದಲ 100 ಅಭ್ಯರ್ಥಿಗಳಿಗೆ ಉಚಿತ ತರಬೇತಿಗೆ ಅವಕಾಶ ನೀಡಲಾಗುತ್ತದೆ.

ಪಿಯುಸಿ ಪಾಸಾದ ಹಾಗೂ ಪದವಿ ಓದುತ್ತಿರುವ ಅಥವಾ ಪದವಿ ಪೂರ್ಣಗೊಳಿಸಿದ ರಾಯಚೂರ ಸೇರಿದಂತೆ ರಾಜ್ಯದ ಯಾವುದೇ ಭಾಗದ ಆಸಕ್ತ ವಿದ್ಯಾರ್ಥಿಗಳು ಕ್ಯುಆರ್ ಕೋಡ್ ಬಳಸಿ ಹೆಸರು ನೋಂದಣಿ ಮಾಡಬಹುದಾಗಿದೆ. ಈ ತರಬೇತಿಗೆ ಯಾವುದೇ ಪ್ರವೇಶಾತಿ ಮತ್ತು ತರಬೇತಿ ಶುಲ್ಕ ಇರುವುದಿಲ್ಲ. ಇನ್ನಿತರ ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ರಂಗಮಂದಿರ ಹಿಂದುಗಡೆಯ ಜಿಲ್ಲಾ ಗ್ರಂಥಾಲಯದ ಕಚೇರಿಯನ್ನು ಕಚೇರಿ ಅವಧಿಯಲ್ಲಿ ಸಂಪರ್ಕಿಸಬಹುದಾಗಿದೆ ಎಂದು ಆಯುಕ್ತರಾದ ಜುಬಿನ್ ಮೊಹಪಾತ್ರ ಅವರು ತಿಳಿಸಿದ್ದಾರೆ.

# ಕ್ಯಾನ್ಸರ್‌ಗೆ ರಾಯಚೂರಿನ ಓಪೇಕ್ ಆಸ್ಪತ್ರೆಯಲ್ಲಿ

## ಕೀಮೋಥೇರಫಿ ಡೇ ಕೇರ್ ಚಿಕಿತ್ಸೆ ಲಭ್ಯ: ಡಾ.ಸುರೇಂದ್ರ ಬಾಬು



ರಾಯಚೂರು ನವೆಂಬರ್ 07 (ಕರ್ನಾಟಕ ವಾರ್ತೆ): ಕ್ಯಾನ್ಸರ್ ರೋಗ ತಡೆಗೆ ಸಂಬಂಧಿಸಿದಂತೆ ರಾಯಚೂರಿನ ರಾಜೀವಗಾಂಧಿ ಸೂಪರ್ ಸ್ಪೆಷಾಲಿಟಿ (ಓಪೇಕ್) ಆಸ್ಪತ್ರೆಯಲ್ಲಿ ಕೀಮೋಥೇರಫಿ ಡೇ ಕೇರ್ ಚಿಕಿತ್ಸೆ ಲಭ್ಯವಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ ಸುರೇಂದ್ರಬಾಬು ತಿಳಿಸಿದರು.

ವಿಶ್ವ ಕ್ಯಾನ್ಸರ್ ದಿನಾಚರಣೆಯ ಅಂಗವಾಗಿ ನವೆಂಬರ್ 7ರಂದು ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ಮನುಷ್ಯನಿಗೆ ಕಂಡು ಬರುವ ಖಾಯಿಲೆಗಳಲ್ಲಿ ಭಯ ಹುಟ್ಟಿಸುವ ಕಾನ್ಸರ್ ( ಅರ್ಬುದ ಖಾಯಿಲೆ ) ರೋಗವು ಕ್ರಮವಿಲ್ಲದ ಜೀವನ ಶೈಲಿ, ಬೆಳೆಗಳಿಗೆ ಅತಿಯಾದ ರಾಸಾಯನಿಕಗಳ ಬಳಕೆ, ಸೂಕ್ತವಲ್ಲದ ದೈನಂದಿನ ಆಹಾರ ಪದ್ಧತಿ, ವೈಯಕ್ತಿಕ ಅಶುಚಿತ್ವ, ತಂಬಾಕು ಉತ್ಪನ್ನಗಳ ಬಳಕೆ, ಬೀಡಿ ಸಿಗರೇಟ್ ಬಳಕೆಗಳಿಂದ ಉಂಟಾಗುವದನ್ನು ತಡೆಗಟ್ಟುವಿಕೆಗಾಗಿ ಆರಂಭಿಕ ಪತ್ತೆಗಾಗಿ ನಿಯಮಿತ ಪರೀಕ್ಷೆ ಮಾಡಿಸಿಕೊಳ್ಳಲು ಜನತೆಯು ಮುಂದೆ ಬರಬೇಕು.

ಕ್ಯಾನ್ಸರ್‌ನ ವಿವಿಧ ರೂಪಗಳು, ಅಪಾಯಕಾರಿ ಅಂಶಗಳು ಮತ್ತು ತಡೆಗಟ್ಟುವಿಕೆ ಬಗ್ಗೆ ಜನರಿಗೆ ಮಾಹಿತಿ ನೀಡಲು ಡಾ. ಗಣೇಶ್ ಜಿಲ್ಲಾ ಸರ್ವೇಕ್ಷಣಾಧಿಕಾರಿಯವರ ನೇತೃತ್ವದಲ್ಲಿ ಜಿಲ್ಲೆಯ ಎಲ್ಲ ತಾಲೂಕುಗಳ ಆಯುಷ್ಮಾನ್ ಆರೋಗ್ಯ ಕೇಂದ್ರಗಳಲ್ಲಿ ಶಿಬಿರಗಳನ್ನು ಏರ್ಪಡಿಸಿ ತಪಾಸಣೆ, ಜಾಗೃತಿಯನ್ನು ನೀಡುವ ಜೊತೆಗೆ ಕ್ಯಾನ್ಸರ್ ಶಂಕೀತರನ್ನು ಮೇಲ್ಮಟ್ಟದ ಆಸ್ಪತ್ರೆಗೆ ಕಳುಹಿಸಿ ಕೊಡಲಾಗುತ್ತಿದೆ. ರೋಗದ ಲಕ್ಷಣಗಳನ್ನು ಮೊದಲೇ ಪತ್ತೆ ಹಚ್ಚುವುದರಿಂದ ಸೂಕ್ತ ಚಿಕಿತ್ಸೆಯ ಮೂಲಕ ರೋಗಿಯನ್ನು ಸಂಪೂರ್ಣ ಗುಣಮುಖರಾಗಿಸಲು ಸಾಧ್ಯವಿದೆ ಎಂದು ತಿಳಿಸಿದರು.

ಓಪೇಕ್ ಆಸ್ಪತ್ರೆಯಲ್ಲಿ ಕೇಂದ್ರ ಆರಂಭ: ಕರ್ನಾಟಕ ಸರಕಾರದ ಮಾರ್ಗಸೂಚಿಗಳನ್ವಯ ಈಗಾಗಲೆ ಜಿಲ್ಲಾಧಿಕಾರಿಗಳ ಮಾರ್ಗದರ್ಶನದಡಿ ಜಿಲ್ಲಾಡಳಿತ ಮೂಲಕ ರಾಯಚೂರ ನಗರದಲ್ಲಿರುವ ಓಪೇಕ್ ಆಸ್ಪತ್ರೆಯಲ್ಲಿ ಡೆ ಕೇರ್ ಕೀಮೋಥೇರಫಿ ಕೇಂದ್ರ ಆರಂಭಿಸಲಾಗಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಲು ವಿನಂತಿಸಿದರು. ಮುಂದಿನ ದಿನಗಳಲ್ಲಿ ಸಿಂಧನೂರು ಸಾರ್ವಜನಿಕ ಆಸ್ಪತ್ರೆಯಲ್ಲಿ ಕ್ಯಾನ್ಸರ್ ಚಿಕಿತ್ಸೆಗಾಗಿ "ಸ್ಪೋಕ್ ಕೇಂದ್ರ" ವನ್ನು ಆರಂಭಿಸಲಾಗುವುದು ಎಂದು

# ನ.08 ರಂದು ಬಳ್ಳಾರಿ ಘಟಕದ ಕೃಷಿ ಸಮಾಜದ ನೂತನ ಕಟ್ಟಡ ಉದ್ಘಾಟನಾ ಸಮಾರಂಭ

ಬಳ್ಳಾರಿ,ನ.07(ಕರ್ನಾಟಕ ವಾರ್ತೆ):

ಜಿಲ್ಲಾಡಳಿತ, ಕರ್ನಾಟಕ ಪ್ರದೇಶ ಕೃಷಿಕ ಸಮಾಜ ಬೆಂಗಳೂರು,ಕೃಷಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಬಳ್ಳಾರಿ ಘಟಕದ ಕೃಷಿ ಸಮಾಜದ ನೂತನ ಕಟ್ಟಡದ ಉದ್ಘಾಟನಾ ಸಮಾರಂಭವು ನ.08 ರಂದು ಬೆಳಿಗ್ಗೆ 11 ಗಂಟೆಗೆ ನಗರದ ಹಳೇ ತಾಲ್ಲೂಕು ಕಚೇರಿ ಆವರಣದಲ್ಲಿ ನಡೆಯಲಿದೆ.


ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಅವರು ಕಟ್ಟಡದ ಉದ್ಘಾಟನೆ ನೆರವೇರಿಸುವರು.

ವಸತಿ,ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಹಾಗೂ ಬಳ್ಳಾರಿ ಉಸ್ತುವಾರಿ ಸಚಿವ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಅವರು ಘನ ಉಪಸ್ಥಿತರಿರುವರು.

ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಅವರು ಅಧ್ಯಕ್ಷತೆ ವಹಿಸುವರು.

ಸಂಸದರಾದ ಈ.ತುಕಾರಾಂ,ಕೆ.ರಾಜಶೇಖರ ಬಸವರಾಜ ಹಿಟ್ನಾಳ್,ಡಾ.ಸೈಯದ್ ನಾಸೀರ್ ಹುಸೇನ್,ಶಾಸಕರಾದ ಬಿ.ನಾಗೇಂದ್ರ, ಜೆ.ಎನ್.ಗಣೇಶ್, ಬಿ.ಎಂ.ನಾಗರಾಜ, ಈ.ಅನ್ನಪೂರ್ಣ, ವಿಧಾನಪರಿಷತ್ ಶಾಸಕರಾದ ಡಾ.ಚಂದ್ರಶೇಖರ್ ಬಿ.ಪಾಟೀಲ, ಶಶೀಲ್ ನಮೋಶಿ, ವೈ.ಎಂ.ಸತೀಶ್,ಡಾ.ಬಾಬು ಜಗಜೀವನ್‌ರಾಮ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುಂಡರಗಿ ನಾಗರಾಜ, ಮಹಾನಗರ ಪಾಲಿಕೆಯ ಮಹಾಪೌರರಾದ ಮುಲ್ಲಂಗಿ ನಂದೀಶ್,ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜೆ.ಎಸ್.ಆಂಜನೇಯಲು, ಕರ್ನಾಟಕ ರಾಜ್ಯ ಖನಿಜ ನಿಗಮ ನಿಯಮಿತದ ಉಪಾಧ್ಯಕ್ಷ ಹೆಚ್.ಲಕ್ಷ್ಮಣ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಕೆ.ಇ.ಚಿದಾನಂದಪ್ಪ, ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ಆಡಳಿತ ಅಧ್ಯಕ್ಷ ಮಂಜುನಾಥ್ ಗೌಡ ಎಸ್.ಆರ್., ಬಳ್ಳಾರಿ ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷ ಗಾದೆಪ್ಪ, ಕೃಷಿ ಸಮಾಜದ ಉಪಾಧ್ಯಕ್ಷ ಎಸ್.ಕೆ ವಿಶಾಲಾಕ್ಷಿ ಕುಮಾರಸ್ವಾಮಿ, ಕೃಷಿಕ ಸಮಾಜದ ರಾಜ್ಯ ಪ್ರತಿನಿಧಿ ಸುರೇಶ್ ನಂದಿ.ಪಿ ಸೇರಿದಂತೆ ಇತರರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಕೃಷಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಡಾ.ಎಸ್ ಸೆಲ್ವಕುಮಾರ್, ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರು ಮತ್ತು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ.ತ್ರಿಲೋಕಚಂದ್ರ ಕೆ.ವಿ., ಕೃಷಿ ಇಲಾಖೆಯ ಕೃಷಿ ಆಯುಕ್ತ ಯಲಗೌಡ ಶಿವನಗೌಡ ಪಾಟೀಲ್, ಜಲಾನಯನ ಅಭಿವೃದ್ಧಿ ಇಲಾಖೆಯ ಆಯುಕ್ತ ಉಪೇಂದ್ರ ಪ್ರತಾಪ್ ಸಿಂಗ್, ಕೃಷಿ ಇಲಾಖೆಯ ಕೃಷಿ ನಿರ್ದೇಶಕ ಡಾ.ಜಿ.ಟಿ ಪುತ್ರ, ಜಲಾನಯನ ಅಭಿವೃದ್ಧಿ ಇಲಾಖೆಯ ನಿರ್ದೇಶಕ ಮಹಮ್ಮದ್ ಫರ್ವೇಜ್ ಬಂಟನಾಳ್, ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭಾರಾಣಿ ವಿ.ಜೆ.,ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹಾರಿಸ್ ಸುಮೇರ್,ಜಂಟಿ ಕೃಷಿ ನಿರ್ದೇಶಕ ಸೋಮಸುಂದರ ಕೆ.ಎಂ., ಉಪ ಕೃಷಿ ನಿರ್ದೇಶಕ ಮಂಜುನಾಥ್ ಎಸ್.ಎನ್ ಸೇರಿದಂತೆ ರಾಜ್ಯದ ನಿರ್ದೇಶಕರು, ಎಲ್ಲಾ ಜಿಲ್ಲಾ ಪ್ರತಿನಿಧಿಗಳು ಮತ್ತು ನಿರ್ದೇಶಕರು, ತಾಲ್ಲೂಕು ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಮತ್ತು ನಿರ್ದೇಶಕರು, ಜಿಲ್ಲಾ ಮತ್ತು ತಾಲ್ಲೂಕು ಖಜಾಂಚಿ ಮತ್ತು ಕಾರ್ಯದರ್ಶಿಗಳು, ಕೃಷಿ ಸಮಾಜದವರು, ಜಿಲ್ಲೆಯ ಎಲ್ಲಾ ಜನ ಪ್ರತಿನಿಧಿಗಳು, ಎಲ್ಲಾ ರೈತ ಮತ್ತು ಸಂಘ–ಸಂಸ್ಥೆಗಳು, ಪ್ರತಿಪರ ರೈತರು ಮತ್ತು ರೈತ ಮಹಿಳೆಯರು, ಸಾರ್ವಜನಿಕರು ಹಾಗೂ ಇತರರು ಉಪಸ್ಥಿತರಿರುವರು ಎಂದು ಪ್ರಕಟಣೆ ತಿಳಿಸಿದೆ.



ಬಸವಕಲ್ಯಾಣ :– ಇಲ್ಲಿನ ಸಾಹಿತ್ಯ ಹಾಗೂ ಕವಿಗಳಾದ ನಾಗೇಂದ್ರ ಬಿರಾದಾರ ರವರ ನಿವಾಸದಲ್ಲಿ ಕರ್ನಾಟಕ ರಾಜ್ಯ ಉತ್ಸವ ದಿನದಂದು ಇತ್ತೀಚೆಗೆ ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪಡೆದ ಶಿಕ್ಷಕ ನಾಗಪ್ಪಾ ನಿಣ್ಣೆ ಯವರಿಗೆ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಡಾ. ರುದ್ರಮಣಿ ಮಠಪತಿ. ಉಪಾಧ್ಯಕ್ಷರಾದ ರಮೇಶ ಉಮಾಪೂರೆ. ಕವಿಗಳಾದ ನಾಗೇಂದ್ರ ಬಿರಾದಾರ. ವೀರಶೆಟ್ಟಿ ಪಾಟೀಲ್. ನಿವೃತ್ತ ಮುಖ್ಯ ಗುರುಗಳಾದ ಬಸವರಾಜ ಮಠಪತಿ. ಶಿಕ್ಷಕರಾದ ಮಾಣಿಕಪ್ಪ ಸಂಗನಬಟ್ಟೆ. ಚಿತ್ರ ಕಲಾವಿದ ಸಂತೋಷ ವೀರನ್ನೋರ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. (ಮಲ್ಲಮ್ಮ ನುಡಿ ಚಿತ್ರ)


# ಬಸವಾದಿ ಶರಣರ ವಚನಗಳೇ ಮನುಕುಲದ ದಾರಿದೀಪ– ಆಕಾಶ ಖಂಡಾಳೆ

ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ:– ನ 7,ಮಾನವನ ಉನ್ನತಿಗೆ ವಚನಗಳು ಪ್ರೇರಣೆ. ವಚನಗಳು ಓದಿದರೆ ನಮ್ಮೆಲ್ಲರ ಅಂತರಂಗ ಶುದ್ಧವಾಗುತ್ತದೆ. ಮಕ್ಕಳಲ್ಲಿ ವಚನ ಓದುವ ಹವ್ಯಾಸ ಬೆಳೆಸಬೇಕು.ಸಂಸ್ಕಾರಯುತ ಸಮಾಜ ನಿರ್ಮಾಣ ಮಾಡಬೇಕೆಂದರೆ ಬಸವಾದಿ ಶಿವ ಶರಣರ ವಚನಗಳೇ ದಾರಿದೀಪಗಳಾಗುತ್ತವೆ. ಎಂದು ತಾಲೂಕಿನ ಬಸವ ಕೇಂದ್ರದ ಅಧ್ಯಕ್ಷರಾದ ಆಕಾಶ ಖಂಡಾಳೆ ತಿಳಿಸಿದರು.

ಹುಲಸೂರ ತಾಲೂಕಿನ ಗೋರ್ಟಾ ಗ್ರಾಮದಲ್ಲಿ ಲಿಂಗಾಯತ ಮಹಾಮಠ ದಲ್ಲಿ ಮಾಸಿಕ ಶರಣ ಸಂಗಮ ಕಾರ್ಯಕ್ರಮ ಹಾಗೂ ಜಗದ್ಗುರು ಶ್ರೀ ಬಸವಕುಮಾರ ಶಿವಯೋಗಿಗಳು ಹುಲಸೂರು ಇವರ ಪುಣ್ಯಸ್ಮರಣೆಯ ಸುವರ್ಣ ಮಹೋತ್ಸವದ ನಿಮಿತ್ಯ

'ಶರಣ ಸಂದೇಶ ಯಾತ್ರೆಯ' ಕಾರ್ಯಕ್ರಮದಲ್ಲಿ ಮಾತನಾಡಿ ಶರಣರು ನಮಗಾಗಿ ಪ್ರಾಣವನ್ನು ಕೊಟ್ಟು ವಚನ ಸಾಹಿತ್ಯವನ್ನು ಉಳಿಸಿದ್ದಾರೆ.ಉಳಿಸಿದ ವಚನಗಳು



ಜನಮಾನಸದಲ್ಲಿ ಬಿತ್ತುವ ಕಾರ್ಯ ನಾವು ನೀವೆಲ್ಲ ಮಾಡಬೇಕಾಗಿದೆ. 12ನೇ ಶತಮಾನದ ನಂತರ ಆಗಿಹೋದ ಅನೇಕ ಪ್ರವಚನಕಾರರ ಶಿವಯೋಗಿಗಳ ಜೀವನ ಸಂದೇಶ ತಿಳಿಸುವ ನಿಟ್ಟಿನಿಂದ ಶರಣ ಸಂದೇಶ ಯಾತ್ರೆ ಕಾರ್ಯಕ್ರಮ ಪೂಜ್ಯಶ್ರೀ ಹುಲಸೂರಿನ ಶಿವಾನಂದ ಮಹಾಸ್ವಾಮಿಗಳ ಮಾರ್ಗದರ್ಶನದಂತೆ 50 ಗ್ರಾಮಗಳಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮ ವನ್ನು ರವೀಂದ್ರ ಕೊಳಕೂರ ಉದ್ಘಾಟಿಸಿ ಮಾತನಾಡಿ

ಶರಣೆ ಡಾ. ಜಯದೇವಿತಾಯಿ ಲಿಗಾಡೆಯವರ ಜೀವನ ಸಂದೇಶವನ್ನು ತಿಳಿಸಿದರು.

ಜಯದೇವಿ ತಾಯಿಯವರು ಕನ್ನಡ ಮತ್ತು ವಚನ ಸಾಹಿತ್ಯದ ಕುರಿತು ಅಪಾರ ಪ್ರೇಮವನ್ನು ಹೊಂದಿದವರು.ಸಾವಿರಾರು ತ್ರಿಪದಿಗಳು ರಚಿಸಿರುವ ಜಯದೇವಿತಾಯಿ ಲಿಗಾಡೆಯವರು ತಮ್ಮ ಕೊನೆಯ ಜೀವನವನ್ನು ಬಸವಕಲ್ಯಾಣದಲ್ಲಿ ಕಳೆದ ಮಹಾನ್ ಶರಣೆ ಎಂದು ತಿಳಿಸಿದರು.

ಕಾರ್ಯಕ್ರಮದ ಲಿಂಗಾಯತ ಮಹಾಮಠ ಗೋರ್ಟಾ ಗ್ರಾಮದ ಪೀಠಾಧಿಪತಿಗಳಾದ ಪೂಜ್ಯಶ್ರೀ ಪ್ರಭುದೇವ ಮಹಾಸ್ವಾಮಿಜಿ ಸಾನಿಧ್ಯ ವಹಿಸಿ ಮಾತನಾಡಿ

ಶರಣರ ಸಿದ್ಧಾಂತ ನಡೆ–ನುಡಿಯ ಸಿದ್ಧಾಂತ. ನಡೆ–ನುಡಿಗೆ ಕರ್ತನು ನೀನೇ ಬಸವ ಎನ್ನುತ್ತಾರೆ ಶಿವಯೋಗಿ ಸಿದ್ಧರಾಮೇಶ್ವರರು. ನಮ್ಮ ಮಾತು ಇನ್ನೊಬ್ಬರ ಮನಸ್ಸು ಅರಳಿಸುವಂತಿರಬೇಕೆ, ವಿನಹ ಕೆರಳಿಸುವಂತಿರಬಾರದು. ಮಾತನಾಡಿದರೆ ಮುತ್ತಿನಂತಿರಬೇಕು ಸುತ್ತಮುತ್ತಿನವರು ಆಯಿಬೇಕು.

ವಸ್ತುಮಾಡಿ ಕೊರಳಾಗಧರಿಸಬೇಕು ಎಂದು ಜಯದೇವಿತಾಯಿ ಲಿಗಾಡೆಯವರು ತ್ರಿಪದಿಯಲ್ಲಿ ಹೇಳಿದ್ದಾರೆ.

ಮುಖ್ಯ ಅತಿಥಿಗಳಾಗಿ


ಮಲ್ಲಿಕಾರ್ಜುನ ದೇವಪ್ಪ ಹಾಗೂ ಮಹಾದೇವ ಮಹಾಜನ. ವಿಜಯಲಕ್ಷ್ಮಿ ರಾಜೋಳೆ.ಬಾಬುರಾವ ರಾಜೋಳೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಲಿಂಗಾಯತ ಸೇವಾದಳದ ಅಧ್ಯಕ್ಷರಾದ ಸುಪ್ರೀತ ಪತಂಗೆ ಕಾರ್ಯಕ್ರಮ ನಡೆಸಿ ಕೊಟ್ಟರು

ಪ್ರಜ್ವಲ ರಾಜೋಳೆ ನಿರೂಪಿಸಿದರು. ಶಾಶ್ವತ ಸೋಮನಾಥಪ್ಪ ರಾಜೇಶ್ವರೆ ಸ್ವಾಗತಿಸಿದರು.

ಶ್ರೀಮಂತಪ್ಪ ರಾಜೇಶ್ವರೆ

ಚಂದ್ರಕಾಂತ ಕಣಜೆ. ವಚನ ಗಾಯನ ಮಾಡಿದರು.

# ಕ್ಷೇತ್ರ ಸಮನ್ವಯಾಧಿಕಾರಿ ದಮ್ಮೂರಮಠಗೆ ಸನ್ಮಾನ



ತಾಳಿಕೋಟೆ: ತಾಲೂಕಿನ ಪೀರಾಪೂರ ಸರಕಾರಿ ಪ್ರೌಢಶಾಲೆಯ ಮುಖ್ಯ ಶಿಕ್ಷಕರಾಗಿದ್ದ ಆರ್.ಬಿ. ದಮ್ಮೂರಮಠ ಅವರು ಮುದ್ದೇಬಿಹಾಳ ಕ್ಷೇತ್ರ ಸಮನ್ವಯಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡ ಹಿನ್ನೆಲೆಯಲ್ಲಿ ತಾಳಿಕೋಟೆಯಲ್ಲಿ ಆರ್ಯಭಟ ಅಕಾಡೆಮಿ ವತಿಯಿಂದ ಅವರನ್ನು ದಂಪತಿ ಸಹಿತ ಸನ್ಮಾನಿಸಿ ಗೌರವಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಎಸ್.ಎಸ್.ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎಚ್.ಎಸ್.ಪಾಟೀಲ ಅವರು ಮಾತನಾಡಿ ದಮ್ಮೂರಮಠ ಅವರು ಪರಿಶ್ರಮಿ, ಸ್ನೇಹಜೀವಿ, ಬದುಕಿನ ಹಲವು ಮಜಲುಗಳಲ್ಲಿ ಸಿಹಿಕಹಿಯನ್ನುಂಡರೂ ಎಲ್ಲವನ್ನೂ ಸಮವಾಗಿ ಸ್ವೀಕರಿಸಿದವರು.ಕರುಣೆ, ಪರೋಪಕಾರ, ತಾಳ್ಮೆ, ನಗು ಅವರ ಬಲವಾಗಿದ್ದು ಶಿಕ್ಷಣ ಇಲಾಖೆ, ಶಾಲೆ ಹಾಗೂ ಶಿಕ್ಷಕರುಗಳ ಮಧ್ಯೆ ಸಂವಹನ ಸಾಧಿಸಿ ಉತ್ತಮ ಆಡಳಿತ ನೀಡುವ ಸಮರ್ಥರು ಅವರಾಗಿದ್ದಾರೆ. ಅವರಿಗೆ ಈಗಾಗಲೇ ಆಡಳಿತದ ಅನುಭವವಿದೆ. ಕುಗ್ರಾಮ ಪೀರಾಪುರ ಗ್ರಾಮದಲ್ಲಿನ ಸರ್ಕಾರಿ ಪ್ರೌಢಶಾಲೆಯನ್ನು ಒಂದು ಅತ್ಯುತ್ತಮ ಪ್ರೌಢಶಾಲೆನ್ನಾಗಿಸಿ ಸಾವಿರಾರು ಮಕ್ಕಳ ಬಾಳಲ್ಲಿ ದೀಪ ಬೆಳಗಿಸಿದವರು ಈಗ ಕ್ಷೇತ್ರ ಸಮನ್ವಯಾಧಿಕಾರಿಯಾಗಿ ಬಂದಿರುವುದು ಭಾಗ್ಯವೇ ಸರಿ ಎಂದರು.ಸನ್ಮಾನಿತರಾದ ಕ್ಷೇತ್ರ ಸಮನ್ವಯಾಧಿಕಾರಿ ಆರ್.ಬಿ.ದಮ್ಮೂರಮಠ ಗೌರವ ಸನ್ಮಾನ ನೀಡಿದುದಕ್ಕೆ ಕೃತಜ್ಞತೆ ಅರ್ಪಿಸಿದರು.ಶಿಕ್ಷಕ ಗುಂಡುರಾವ್ ಧನಪಾಲ, ಹುಣಶ್ಯಾಳ ಸರ್ಕಾರಿ ಉರ್ದು ಪ್ರೌಢಶಾಲೆಯ ಮುಖ್ಯಶಿಕ್ಷಕ ಎಸ್.ಎಸ್.ಗಡೇದ, ಉಪಪ್ರಾಂಶುಪಾಲ ಜಗದೀಶ ಕಟ್ಟಿಮನಿ, ನಿವೃತ್ತ ಉಪಪ್ರಾಂಶುಪಾಲ ಎಸ್.ಡಿ.ಕರ್ಜಗಿ ಮಾತನಾಡಿದರು.


ವೇದಿಕೆಯಲ್ಲಿ ಅಕಾಡೆಮಿ ಅಧ್ಯಕ್ಷ ಅಲ್ಲಾಭಕ್ಷ ಇನಾಮದಾರ, ವಿಕಾಸ ಪಬ್ಲಿಕ ದಸ್ಕೂಲ್‌ನ ಅಧ್ಯಕ್ಷ ರಾಮನಗೌಡ ಬಾಗೇವಾಡಿ, ಸರ್ವಜ್ಞ ವಿದ್ಯಾಪೀಠ ಪ್ರಾಥಮಿ ಪ್ರೌಢ ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮ ಶಾಲೆಯ ಅಧ್ಯಕ್ಷ ಸಿದ್ಧನಗೌಡ ಮಂಗಳೂರ, ಬ್ರಿಲಿಯಂಟ ಶಿಕ್ಷಣ ಸಂಸ್ಥೆ ಮೈಲೇಶ್ವರ ಎಂ.ಬಿ.ಮಡಿವಾಳರ ಉಪಸ್ಥಿತರಿದ್ದರು. ಎಸ್.ಎಂ.ಪಾಟೀಲ ನಿರ್ವಹಿಸಿದರು. ಆರ್.ಎಸ್.ಬೂದಿಹಾಳ ಸ್ವಾಗತಿಸಿದರು.

# ಭಕ್ತಶ್ರೇಷ್ಠ 'ಕನಕದಾಸ' ಜಯಂತಿ



**ಕುಲಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ**
**ಕುಲದ ನೆಲೆಯನೇನಾದರೂ ಬಲ್ಲಿರಾ?**
**ಕುಲವ ಕುಲವೆನ್ನುತಿಹರು ಕುಲವ ದ್ಯಾವುದು**
**ಸತ್ಯ ಸಖ್ಯವುಳ್ಳ ಜನರಿಗೆ?**
**ಆತ್ಮ ಯಾವ ಕುಲ, ಜೀವ ಯಾವ ಕುಲ**
**ತತ್ವೇಂದ್ರಿಯ ಕುಲ**
**ಪೇಳಿರಯ್ಯಾ........................**

ಎಂದು ಹೇಳುವ ಮೂಲಕ ಸಮಾಜದಲ್ಲಿ ಕಂಟಕಪ್ರಾಯವಾದ ಸಾಮಾಜಿಕ ಪಿಡುಗು ಈ ಜಾತಿ ಪದ್ಧತಿಗೆ ಮಣಿದ ಜನರಿಗೊಂದು ಕಿವಿಮಾತು ಹೇಳಿದ, ಮಾನವ ಜನಾಂಗಕ್ಕೆ ಸರಿಮಾರ್ಗ ತೋರಿದ ಭಕ್ತಶ್ರೇಷ್ಠ ಕನಕದಾಸರ ಪರಿಚಯ ಹೇಳಬೇಕಿಲ್ಲ. ಅವರ ತತ್ವಾದರ್ಶಗಳೇ ವರನ್ನು ಪರಿಚಯಿಸಿವೆ. ಕನಕದಾಸರು ಕನ್ನಡ ನಾಡಿನ ಸಾಂಸ್ಕೃತಿಕ ಪರಂಪರೆಯಲ್ಲಿ ತಮ್ಮ ವ್ಯಕ್ತಿತ್ವದಿಂದ, ತತ್ವಾದರ್ಶಗಳಿಂದ ಅಳಿಸಲಾಗದ ಛಾಪು ಮೂಡಿಸಿದ್ದಾರೆ. ನಾಡು ಕಂಡ ಕನ್ನಡ ಸಾಹಿತ್ಯದ ಅತ್ಯಂತ ಪ್ರಮುಖ ಕೀರ್ತನೆಕಾರರ ಕವಿ, ಸಾಮಂತ, ಜ್ಞಾನ, ದಾರ್ಶನಿಕರಾಗಿ ಅವರು ನೀಡಿದ ಕೊಡುಗೆ ಅಪಾರ, ಅನಂತ. ಕುಲದ ಬಗ್ಗೆ ತಿಳಿಸಿದ ಅವರು ವರ್ಗ ತಾರತಮ್ಯದ ವಿರುದ್ಧ ದನಿ ಎತ್ತಿದ ಶ್ರೇಷ್ಠ ಸಂತರು ಇವರು. ಅಂ–ದು ಕಣ್ಣಿಗೆ ಕಾಣುತ್ತಿದ್ದ ಜಾತಿ ಪದ್ಧತಿಯ ವಿರುದ್ಧ ಈ ಶ್ರೇಷ್ಠರು ಸೆಣಸಾಡಿದರು. ಆದರೆ ಈಗ ಆ ಅನಿಷ್ಠ ಪದ್ಧತಿ ಅಲ್ಲಲ್ಲಿ ಕೆಲವು ಆಚರಣೆಗಳಲ್ಲಿ ಕಂಡು ಬರುತ್ತಿದೆ. ಆದರೂ ಕಣ್ಣಿಗೆ ಕಾಣುತ್ತಿಲ್ಲ. ಕಾನೂನಿನ ಕೈಗೂ ಸಿಗುತ್ತಿಲ್ಲ. ಇದನ್ನು ಬುಡಸಮೇತ ತೆಗೆದುಹಾಬೇಕೆಂದೆ ನಾವಿಂದು ಇಂತಹ ಮಹಾತ್ಮರನ್ನು ನೆನಪಿಸಿಕೊಳ್ಳುವ ದಿನ ಬಂದೊದಗಿದೆ ಎಂಬುದನ್ನು ಎಲ್ಲರೂ ಕೂಡ ತಿಳಿದುಕೊಳ್ಳಲೇಬೇಕು. ನಮ್ಮ ರಾಜ್ಯದಲ್ಲಿ ದಾಸ ಪರಂಪರೆಗೆ ಸರಿಸುಮಾರು 500 ವರ್ಷದ ಭವ್ಯ ಇತಿಹಾಸ ಇದೆ. ಹಿಂದೆ ಬುದ್ಧ ಸವಣ್ಣನವರು ಈ ಜಾತಿ ಪದ್ಧತಿಯನ್ನು ಕಿತ್ತೆಸೆಯಲು ಪ್ರಯತ್ನಿಸಿದರು. ಅದು ಅಲಲ್ಲಿ ಉಳಿದು ಸಣ್ಣ–ಸಣ್ಣ ಮೊಳಕೆ ಒಡೆಯೋ ೀಜದಂತ್ತಿದ್ದ ಆ ಪದ್ಧತಿ ಈ ಹರಿದಾಸರ ಕಾಲದಲ್ಲಿ ಸ್ವಲ್ಪ ಹುಲುಸಾಗಿ ಬೆಳೆದು ನಿಂತಿತು. ಸಮಾಜದಲ್ಲಿ ಬೇರು ಬಿಟ್ಟಿದ್ದ ಮೇಲ್ಜಾತಿ–ಕೆಳಜಾತಿ ಂಬ ಭಾವನೆ ಮತ್ತು ಜಾತಿ–ಮತಗಳ ಸಿದ್ಧಾಂತಗಳು ಕನಕದಾಸರಂತಹ ವಿಚಾರವಂತ ಸಂತರಿಂದ ಸ್ವಲ್ಪ ಮಟ್ಟಿಗೆ ಕಣ್ಮರೆಯಾದವು. ದೈವಭಕ್ತಿಯೇ, ದೇವಸುತ್ತಿಯೇ ಎಲ್ಲಕಿಂತ ಮುಖ್ಯ ಎನಿಸಿರುವ ಭಕ್ತಿ ಪರಂಪರೆಯ ಕಾಲದಲ್ಲಿ ಧ್ರುವ ತಾರೆಯಂತೆ ಅವತರಿಸಿದ ಭಕ್ತಶ್ರೇಷ್ಠ ಕನಕದಾಸರು ತಮ್ಮ ವೈಚಾರಿಕ ಮತ್ತು ಪ್ರತಿಭಟನಾ ನೆಲೆಗಟ್ಟಿನಿಂದ ದಾಸ ಸಾಹಿತ್ಯಕ್ಕೆ ತನ್ಮೂಲಕ ಕನ್ನಡ ಸಾಹಿತ್ಯಕ್ಕೆ ವೈಚಾರಿಕ ರೂಪವನ್ನು ನೀಡಿದ್ದಾರೆ. ಇವರು ಆದಿ ಗುರು ಶ್ರೀ ಶಂಕರಾಚಾರ್ಯರು ಅನುಪಾಲನೆ ಮಾಡಿರುವಂತಹ ಅದ್ವೈತ ಸಿದ್ಧಾಂತವನ್ನು ಅನುಸರಿಸಿ ನಾನು, ನನ್ನದು ಎಂಬ ಮೋಹ, ಪರಬ್ರಹ್ಮ ಜೀವನ ಸಾರವನ್ನು ಸಮಾಜಕ್ಕೆ ತಿಳಿಸಿ ಮನುಜಕುಲ ಒಂದೇ ಎಂಬ ತತ್ವಸಾರವನ್ನು ತಿಳಿಸಿದ್ದಾರೆ. 500 ವರ್ಷಗಳ ಹಿಂದೆಯೇ ಒಬ್ಬ ಸಂತ, ಆಧ್ಯಾತ್ಮಿಕ ಸಂತಕವಿ ಮನುಷ್ಯನ ಬದುಕಿನಲ್ಲಿ ಏನೆಲ್ಲಾ ಎದುರಿಸಬೇಕಾಗುತ್ತದೆ ಎಂಬುದನ್ನು ಚಿತ್ರಿಸುತ್ತ, ಜೀವನ ಮೌಲ್ಯಗಳನ್ನು ತಿಳಿ ಹೇಳಿದ್ದರು. ಕನಕದಾಸರನ್ನು ಕನ್ನಡ ಕೀರ್ತನ ಸಾಹಿತ್ಯದ ಅಶ್ವಿನಿ ದೇವತೆಗಳೆಂದು ವರ್ಣಿಸಲಾಗಿದೆ. ಇಷ್ಟೆಲ್ಲಾ ಸಮಾಜದ ಅನಿಷ್ಟಗಳನ್ನು ದೂರ ಮಾಡಲೆತ್ನಿಸಿದ ಈ ಶ್ರೇಷ್ಠರ ಬಾಲ್ಯದ ಬಗ್ಗೆ ತಿಳಿದುಕೊಳ್ಳಲೇಬೇಕು. ಕನಕದಾಸರು 16ನೇ ಶತಮಾನದ ಪೂರ್ವಾರ್ಧದಲ್ಲಿ ಹಾವೇರಿ ಜಿಲ್ಲೆಯ, ಶಿಗ್ಗಾಂವಿ ತಾಲೂಕಿನ ಬಾಡ ಎಂಬ ಗ್ರಾಮದಲ್ಲಿ ಬೀರಪ್ಪಾ ನಾಯಕ ಮತ್ತು ಬಚ್ಚಮ್ಮಾ ಎಂಬ ದಂಪತಿಗಳಿಗೆ ಜನಿಸಿದರು. ಅನೇಕ ವರ್ಷಗಳಿಂದ ಸಂತಾನ ಭಾಗ್ಯ ಇಲ್ಲ ಎನ್ನುತ್ತಿದ್ದ ತಿಮ್ಮಪ್ಪ ನಾಯಕ ದಂಪತಿಗಳಿಗೆ ಕನಕರು ಜನಿಸಿದರು. ಇವರು ಚಿಕ್ಕವಯಸ್ಸಿನಿಂದಲೇ ಅಕ್ಷರ ಅಭ್ಯಾಸ, ಕತ್ತಿವರಸೆ, ಕುದುರೆ ಸವಾರಿ ಕಲಿತ್ತಿದ್ದರು. ಕನಕದಾಸರು ತಿಮ್ಮಪ್ಪ, ತಿಮ್ಮನಾಯಕ ಎಸರಿನವರಾಗಿ ವಿಜಯನಗರ ಅರಸರಲ್ಲಿ ಒಬ್ಬ ಪಾಳೆಯಗಾರರಾಗಿದ್ದರು. ಒಮ್ಮೆ ಭೂಮಿ ಅಗೆಯುವಾಗ ಅಪಾರ ಹೊನ್ನು ಲಭಿಸಿತು. ಆದ್ದರಿಂದ ಅವರಿಗೆ ಕನಕನಾಯಕ ಎಂಬ ಹೆಸರು ಬಂದಿತು. ವಿಜಯನಗರ ಅರಸರ ಪರವಾಗಿ ಅವರು ಯುದ್ಧ ಮಾಡುವಾಗ ಯುದ್ಧ ಭೂಮಿಯಲ್ಲಿ ಸೋತು ಅಪ್ರಜ್ಞೆ ಅವಸ್ಥೆಯಲ್ಲಿ ಬಿದ್ದು ಎಚ್ಚರವಾದಾಗ ಅಶರೀರವಾಣಿಯೊಂದು 'ನೀ ದಾಸನಾಗಿ ಜಗ ಬೆಳಗು' ಎಂಬುವುದಾಗಿ ಹೇಳಿತ್ತೆಂದು ಉಲ್ಲೇಖವಿದೆ. ಹೀಗಾಗಿ ಈ ಘಟನೆಯಿಂದ ಪರಿವರ್ತನೆಗೊಂಡ ಕನಕದಾಸರು ಸಮಸ್ತ ರಾಜ್ಯವನೆಲ್ಲಾ ತೊರೆದು ಶ್ರೀಹರಿಯನ್ನೇ ಸ್ಮರಿಸುತ್ತಾ ತಂಬೂರಿ–ತಾಳವನ್ನು ಕೈಯಲ್ಲಿಹಿಡಿದು ಕನಕದಾಸರಾದರು. ವ್ಯಕ್ತಿಗಳಲ್ಲಿ ನಾನು ಎಂಬ ಅಹಂಭಾವ ಬಿಟ್ಟುಹೋಗಬೇಕು. ಆಗ ಮನುಷ್ಯ ಶ್ರೇಷ್ಠನಾಗುತ್ತಾನೆ. ಎಂದಿದ್ದರು. ಆಧುನಿಕ ಬರಹಗಾರರು ಇವರ ಮಾತಿಗೆ ಹೋಲಿಕೆ ಆಗುವ ರೀತಿಯಲ್ಲಿಯೇ ಒಂದು ಮಾತು ಹೇಳಿದ್ದಾರೆ. "ಇದು ನನ್ನಿಂದ ಸಾಧ್ಯ ಆಗುತ್ತದೆ ಎನ್ನಬೇಕೇ ಹೊರತು ಎಲ್ಲವೂ ನನ್ನಿಂದಲೇ ಸಾಧ್ಯವಾಯಿತು" ಎನ್ನಬಾರದು ಎಂದಿದ್ದಾರೆ. ಶ್ರೇಷ್ಠ ಬರಹಗಾರರೊಬ್ಬರು ಹೇಳುವಂತೆ ಕನಕದಾಸರ ಜೋಳಿಗೆಯಲ್ಲಿ ಭಕ್ತಿಯ ಸಿಂಚನವಿದೆ. ಅವರ ನುಡಿಮುತ್ತಿನಲ್ಲಿ ಮಧುರಾಮೃತವಿದೆ. ನಮ್ಮೆಲ್ಲರನ್ನು ಕಾಪಾಡುವವನೊಬ್ಬನಿದ್ದಾನೆ. ಆ ಕಾಯುವವನನ್ನು ನೆನೆದರೆ ಭಾರವಾದ ಹೃದಯ ಹಗುರವಾಗುತ್ತದೆ. ಜಗದ ಜಂಜಾಟದಲ್ಲಿ, ಸ್ವಾರ್ಥ ಲಾಲಸಗಳಲ್ಲಿ ಮನವೇಕೋ ಮುದುಡಿದೆ, ಬಾಡಿಹೋದ ಹೂವಂತ್ತಾಗಿದೆ. ಮುದುಡಿದ ಮನವ ತಣಿಸುವುದೆಂತು? ಮತ್ತೆ ಅದರಲ್ಲಿ ಚೈತನ್ಯವ ತುಂಬಿಸುವುದೆಂತು? ಸಾಂತ್ವನದ ನುಡಿ ಬಿಂಬಗಳನ್ನು ಸಿಂಪಡಿಸಿದರೆ ಸಾಲದು ಅದರೊಂದಿಗೆ ಆಧ್ಯಾತ್ಮಕ, ಆಪ್ತತೆಯ ಸವಿಬೆರೆಸಬೇಕೆಂದು ಕನಕದಾಸರು ಹೇಳಿದ್ದಾರೆ. ಕನಕದಾಸರ ಬದುಕು ನಮ್ಮೆಲ್ಲರಿಗೆ ಆದರ್ಶಮಯ. ಬಿಡಿಸಿ ಎಣಿಸಿ ಪೋಣಿಸಿದ ಪದಗಳನ್ನು ಅರ್ಥೈಸಿಕೊಂಡರಷ್ಟೇ ನಾವು ಯಾರು ಎಂದು ನಮ್ಮ ಅರವಿಗೆ ಬರುತ್ತದೆ. ಇವರು ಯಾವುದೋ ಒಂದು ಜಾತಿ ಅಥವಾ ಜನಾಂಗದ ಅಭಿಮಾನಕ್ಕೆ, ಆದರಕ್ಕೆ ಮಾತ್ರ ಕಟ್ಟುಬೀಳದೆ ನೊಂದ ಬದುಕುಗಳ ನಡುವಿನಿಂದ ಎದ್ದುಬಂದ ಸಂತ. ವರು ಶ್ರೇಷ್ಠ ವ್ಯಕ್ತಿತ್ವ ದಾನ ಇವುಗಳಿಷ್ಟೇ ಹೆಸರಾಗದೇ ಸಾಹಿತ್ಯದ ವಿವಿಧ ಪ್ರಕಾರಗಳಾದ ಕೀರ್ತನೆಗಳು, ಉಪಭೋಗಗಳು ಕನ್ನಡ ಸಾಹಿತ್ಯಕ್ಕೆ ಅಷ್ಟೇ ಸಿಕ್ಕಿರುವುದಲ್ಲದೇ ಸಂಗೀತ ಪ್ರಪಂಚಕ್ಕೆ ತನ್ನದೇ ಆದಂತಹ ಕೊಡುಗೆ ನೀಡಿದ್ದಾರೆ. ಅವರ ನಾಲ್ಕು ಮುಖ್ಯ ಕಾವ್ಯ ಕೃತಿಗಳೆಂದರೆ ಮೋಹನ ತರಂಗಿಣಿ, ನಳಚರಿತ್ರೆ, ರಾಮಧಾನ್ಯ ಚರಿತ್ರೆ, ಹರಿಭಕ್ತಿಸಾರ. ಶ್ರೀ ಕೃಷ್ಣನ ದರ್ಶನಕ್ಕೆಂದು ಒಮ್ಮೆ ಉಡುಪಿಗೆ ಹೋದಾಗ ಕನಕದಾಸರಿಗೆ ದೇವರ ದರುಶನ ಮಾಡುವುದು ತುಂಬಾ ಕಷ್ಟ ಆದಾಗ ಅವರು ದೇವಾಲಯದ ಹಿಂದೆ ಹೋಗಿ ಧ್ಯಾನಿಸಲು ಆರಂಭಿಸುತ್ತಾರೆ. ಆಗ ಶ್ರೀಕೃಷ್ಣನೇ ಹಿಂದಕ್ಕೆ ಮುಖಮಾಡಿ ಕನಕದಾಸರಿಗೆ ಶ್ರೀಕೃಷ್ಣ ಒಂದು ಕಿಂ–ಡಿಯ ಮೂಲಕ ದರ್ಶನ ಕೊಟ್ಟರು. ಇವತ್ತಿಗೂ ಕೂಡ ಉಡುಪಿಯ ಶ್ರೀ ಕೃಷ್ಣ ಮಂದಿರದಲ್ಲಿ ಕೃಷ್ಣನ ವಿಗ್ರಹವನ್ನು ಕಿಂಡಿಯ ಮೂಲಕ ನೋಡುವ ಸಂಪ್ರದಾಯವಿದೆ. ಈ ಕಿಂಡಿಯನ್ನೇ ಕನಕನ ಕಿಂಡಿ ಎಂದು ಪ್ರತೀತ. 1485 ರಲ್ಲಿ ಜನ್ಮ ಪಡೆದ ಇವರು 1595 ರ ವರೆಗೆ ಸರಿಸುಮಾರು 110 ವರ್ಷಗಳ ಕಾಲ ಬದುಕಿ ಬಾಳಿದರು. ಕನಕದಾಸರು ಹೊಸಗನ್ನಡ ಸಾಹಿತ್ಯ ಲೋಕಕ್ಕೆ ಕೋಗಿಲೆ ಎನಿಸಿಕೊಂಡಿದ್ದಾರೆ. ಎಲ್ಲಾ ಮತೀಯ ಸಂಕೋಲೆಯಿಂದ ಮುಕ್ತಿ ಪಡೆದು ಸಾಮಾಜಿಕ ಕಟ್ಟುನಿಟ್ಟುಗಳಿಂದ ದೂರವಾಗಿ ಆಧ್ಯಾತ್ಮ ಸಿದ್ಧಿಯ ಶಿಖರವನ್ನೇರಿದ ವಿಶ್ವಬಂಧು ಇವರು ಎಂದು ಹೇಳಬಹುದು.



ಲೇಖಕರು:– ಕೆ.ವೀರಾರೆಡ್ಡಿ ಎಂ.ಎ.,ಎಂ.ಈಡಿ
ಸಹ ಶಿಕ್ಷಕ
ಸರಕಾರಿ ಪ್ರೌಢ ಶಾಲೆ ವಳಖಿಂಡಿ ತಾ: ಚಿಟಗುಪ್ಪಾ ಜಿ: ಬೀದರ್
ಮೋ.ನಂ.+91 9620940149

# ವಂದೇ ಮಾತರಂ ಭಾರತ ಮಾತೆಯ ಪ್ರೇರಣಾ ಶಕ್ತಿ: ಗದ್ದಿಗೌಡರ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ: ಪ್ರತಿ ಭಾರತೀಯ ಕಣ ಕಣದಲ್ಲಿ ಸ್ವಾತಂತ್ರ್ಯದ ರಣಕಹಳೆ ಮೊಳಗಿಸಿದ ವಂದೇ ಮಾತರಂ ಗೀತೆ ಭಾರತದ ಏಕತೆಯ ಸಂಕೇತವಾಗಿದ್ದು ಅದೊಂದು ಪ್ರೇರಣಾ ಶಕ್ತಿಯಾಗಿದೆ ಎಂದು ಸಂಸದ ಪಿ.ಸಿ.ಗದ್ದಿಗೌಡರ ಹೇಳಿದರು.

ಅವರು ನಗರದ ಬಿವಿವಿಸಂಘದ ನೂತನ ಸಭಾಭವನದಲ್ಲಿ ಭಾರತೀಯ ಜನತಾ ಪಾರ್ಟಿಯಿಂದ ಹಮ್ಮಿಕೊಂಡ ರಾಷ್ಟ್ರೀಯ ಗೀತೆ ವಂದೇ ಮಾತರಂ 150ರ ಸಂಭ್ರಮಾಚರಣೆಯ ಕಾರ್ಯಕ್ರಮವನ್ನು ಭಾರತಮಾತೆಯ ಭಾವಚಿತ್ರಕ್ಕೆ ಪುಷ್ಪಾಂಜಲಿ ಸಲ್ಲಿಸುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು 1875ರಲ್ಲಿ ಬಂಕಿಮ್ ಚಂದ್ರ ಚಟರ್ಜಿ ಅವರು ವಂದೇ ಮಾತರಂ ಅನ್ನು ಪ್ರಕಟಿಸಿದಾಗ, ಕೆಲವರು ಕೇವಲ ಹಾಡು ಎಂದು ಭಾವಿಸಿದ್ದರು, ಆದರೆ ಅದು ಭಾರತದ ಸ್ವಾತಂತ್ರ್ಯ ಹೋರಾಟದ ಧ್ವನಿಯಾಗಿ ರಾಷ್ಟ್ರದಲ್ಲಿ ಏಕತೆ ಮೂಡಿಸಿತು ಎಂದರು.

ಮಾಜಿ ಶಾಸಕರಾದ ಡಾ. ವೀರಣ್ಣ ಚರಂತಿಮಠ ಮಾತನಾಡಿದ ಅವರು ವಂದೇ ಮಾತರಂ, ಇಂದು ಐಕ್ಯತೆಯ ಮಂತ್ರ ಅದೊಂದು ಶಕ್ತಿ, ಒಂದು ಸಂಕಲ್ಪ, ದೇಶ ಸುರ್ಧಿರ್ಘ 90 ವರ್ಷಗಳ ಸ್ವಾತಂತ್ರ್ಯ ಹೋರಾಟದಿಂದ 1947 ರಂದು ಸ್ವತಂತ್ರವನ್ನು ಪಡೆಯಿತು, ಲಕ್ಷಾಂತರ ಸ್ವಾತಂತ್ರ್ಯ ಹೋರಾಟಗಾರರಿಗೆ ಐಕ್ಯತೆಯ ಧ್ವನಿಯಾಗಿ ಹೋರಾಟದ ಕಿಚ್ಚನ್ನು ತುಂಬುವ ಮೂಲಕ ಪ್ರೇರಣೆಯಾಗಿದ್ದು ಈ ವಂದೇ ಮಾತರಂ ಗೀತೆ, ನಿಜವಾಗಲೂ ರಾಷ್ಟ್ರಗೀತೆಯಾಗಬೇಕಿದ್ದ ವಂದೇ ಮಾತರಂ ಕಾಂಗ್ರೆಸ್ಸ ಮಾಡಿದ ತಪ್ಪಿನಿಂದಾಗಿ ರಾಷ್ಟ್ರಗೀತೆಯಾಗಲಿಲ್ಲಾ ಎಂದರು.

ರಾಜ್ಯ ಯುವ ಮೋರ್ಚಾ ಉಪಾಧ್ಯಕ್ಷ ಮಲ್ಲಿಕಾರ್ಜುನ ಬಾಳಿಕಾಯಿ ಮಾತನಾಡಿ ಭಾರತ ಮಾತೆಯನ್ನು ಗುಣಗಾನ ಮಾಡಿ ಭಾರತೀಯರಿಗೆ ಶಕ್ತಿ ತುಂಬಿ, ತಾಯಿ ಭಾರತೀಗೆ ಯಾವುದೆ ತ್ಯಾಗಕ್ಕೂ ಸಿದ್ದ ಎಂಬ ತರುಣ ಪಡೆಯನ್ನ, ದೇಶಭಕ್ತರ ಪಡೆಯನ್ನ, ರಣದೀರರ ಪಡೆಯನ್ನ ನಿರ್ಮಾಣ ಮಾಡಿರುವ ಶ್ರೇಯಸ್ಸು ವಂದೇ ಮಾತರಂ ಗೀತೆ ಸಲ್ಲುತ್ತದೆ, ರಾಷ್ಟ್ರಗೀತೆಯ ಸಮನಾಗಿ ರಾಷ್ಟ್ರೀಯ ಗೀತೆಯ ಸ್ಥಾನವನ್ನು ನೀಡಿದ ಭಾರತ ಸರಕಾರದ ಕಾರ್ಯ ಶ್ಲಾಘನೀಯವಾಗಿದೆ, ಎಲ್ಲಿತನಕ ಭಾರತವಿರುತ್ತದೆ ಅಲ್ಲಿ ತನಕ ವಂದೇ ಮಾತರಂ ಇರುತ್ತದೆ, ಎಲ್ಲಿವರೆಗೂ ವಂದೇ ಮಾತರಂ ಎಂಬ ಪಂಚಾಕ್ಷರಿ ಮಂತ್ರ ನಮ್ಮ ನಾಲಿಗೆ ಮೇಲೆ ಇರುತ್ತದೆಯೋ ಅಲ್ಲಿ ತನಕ ಭಾರತವನ್ನು ಎದರಿಸುವ ತಾಕತ್ತು ಜಗತ್ತಿನ ಯಾವ ದುಷ್ಟಶಕ್ತಿಗೂ ಇರುವುದಿಲ್ಲ, ಇಂದು ಭಾರತ ಜಗತ್ತಿನ ನಾಲ್ಕನೆ ಸುಪರ್ ಪವರ್ ಆಗಿದೆ, ದೇಶಕ್ಕೆ ಸ್ವಾತಂತ್ರ್ಯದ ಬಂದು 100 ವರ್ಷ ತುಂಬುವುದರೊಳಗೆ ಭಾರತ ಜಗತ್ತಿನ ನಂ 1 ಅಥವಾ 2 ನೇ ಸೂಪರ್ ಪವರ ರಾಷ್ಟ್ರವಾಗುತ್ತದೆ ಎಂದರು.

ಪ್ರಸ್ತಾವಿಕವಾಗಿ ಮಾತನಾಡಿ ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಮಾತನಾಡಿ ತ್ಯಾಗ ಬಲಿದಾನಗಳ ಹಾಗೂ ಸ್ವಾತಂತ್ರ್ಯ ಎಂಬ ಹೋರಾಟದ ಅರಿವು ಮುಖ್ಯವಾಗಿದೆ, ಭಾರತದ ಇತಿಹಾಸದಲ್ಲಿ ವಂದೇ ಮಾತರಂಗೆ ಅಗ್ರಸ್ಥಾನವಿದೆ, ಇದರಲ್ಲಿ ಭಾರತ ಮಾತೆಯ ವರ್ಣನೆ ಇದೆ, ಮುಂದಿನ ಪಿಳಿಗೆಗೆ ನಿಜವಾದ ಸ್ವತಂತ್ರ್ಯ ಹೋರಾಟದ ಇತಿಹಾಸ, ದೇಶದ ಪರಂಪರೆ ಸಂಸ್ಕೃತಿಯನ್ನು ತಿಳಿಸುವ ಜವಾಬ್ದಾರಿ ನಮ್ಮಮೇಲಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಸಿ ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ ಅವರು ಸ್ವದೇಶಿ ಪ್ರತಜ್ಞಾ ವೀಧಿ ಬೋದಿಸಿದರು.

ವೇದಿಕೆ ಮೇಲೆ ಮಾಜಿ ಶಾಸಲ ಎಂ.ಕೆ,. ಪಟ್ಟಣಶೇಟ್ಟಿ, ಪ್ರಧಾನ ಕಾರ್ಯದರ್ಶಿ ರಾಜು ನಾಯ್ಕರ, ರಾಜು ರೇವಣಕರ, ಬಸವರಾಜ ಯಂಕಂಚಿ, ನಗರಮಂಡಲ ಅಧ್ಯಕ್ಷ ಬಸವರಾಜ ಹುನಗುಂದ, ಗ್ರಾಮೀಣ ಮಂಡಲ ಅಧ್ಯಕ್ಷ ಸುರೇಶ ಕೋಣ್ಣೂರ ಇದ್ದರು.

ವಂದೇ ಮಾತರಂ ಸಮೂಹ ಕಂಪನ: ಬಸವೇಶ್ವರ ಕಲಾ ಮಹಾವಿದ್ಯಾಲಯದ ಸಂಗೀತ ವಿಭಾಗದ ವಿದ್ಯಾರ್ಥಿಗಳಿಂದ ಸಾಮೂಹಿಕ ಸಂಪೂರ್ಣ ವಂದೇ ಮಾತರಂ ಗೀತೆಯನ್ನು ಹಾಡಲಾಯಿತು. ಕಾರ್ಯಕ್ರಮದಲ್ಲಿ ಲಕ್ಷ್ಮೀನಾರಾಯಣ ಕಾಸಟ್, ಜಿ.ಎನ್.ಪಾಟೀಲ, ಡಾ.ಎಂ.ಎಸ್.ದಡ್ಡೆನ್ನವರ, ಮಹೇಶ ಅಥಣಿ, ಗುರುಬಸವ ಸೂಳಿಬಾವಿ, ಮಹಾಂತೇಶ ಶೆಟ್ಟರ, ವೀರಣ್ಣ ಹಲಕುರ್ಕಿ, ನಗರಸಭೆ ಉಪಾಧ್ಯಕ್ಷೆ ಶೋಭಾ ರಾವ, ಜ್ಯೋತಿ ಭಜಂತ್ರಿ, ಶಶಿಕಲಾ ಮಜ್ಜಗಿ, ರೇಖಾ ಕಲಬುರಗಿ, ಸ್ಮಿತಾ ಪವಾರ, ಸೋಮಸಿಂಗ ಲಮಾಣಿ, ಕಲ್ಲಪ್ಪ ಭಗವತಿ, ರಾಜು ಮುದೇನೂರ ಸೇರಿದಂತೆ ಅನೇಕರು ಭಾಗವಹಿಸಿದ್ದರು.

# ಹಿಂಗಾರು ಬೇಸಿಗೆ ಹಂಗಾಮು ಬೆಳೆಗಳಿಗೆ ವಿಮೆ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ನ.7–ಪ್ರಸಕ್ತ ಸಾಲಿನ ಹಿಂಗಾರು ಹಾಗೂ ಬೇಸಿಗೆ ಹಂಗಾಮಿಗಾಗಿ ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಬಿಮಾ (ವಿಮಾ) ಯೋಜನೆಯಡಿ ರೈತರು ಅಧಿಸೂಚಿತ ಬೆಳೆಗಳಿಗೆ ನೋಂದಣಿ ಮಾಡಿಸಲು ಸರಕಾರ ಅಧಿಸೂಚನೆ ಹೊರಡಿಸಿದೆ. ಅಧಿಸೂಚಿತ ಬೆಳೆಗೆ ಬೆಳೆಸಾಲ ಪಡೆದ ರೈತರಿಗೆ ಈ ಯೋಜನೆ ಕಡ್ಡಾಯವಾಗಿದ್ದು, ಒಂದು ವೇಳೆ ಬೆಳೆಸಾಲ ಪಡೆದ ರೈತರು ಈ ಯೋಜನೆಯಡಿ ಭಾಗವಹಿಸಲು ಇಚ್ಛೆಪಡದೇ ಇದ್ದಲ್ಲಿ ಈ ಕುರಿತು ಬೆಳೆಸಾಲ ಪಡೆದ ಬ್ಯಾಂಕಿನ ವ್ಯವಸ್ಥಾಪಕರಿಗೆ ಬೆಳೆ ನೋಂದಣಿಯ ಅಂತಿಮ ದಿನಾಂಕಕ್ಕಿಂತ 7 ದಿನಗಳ ಮುಂಚಿತವಾಗಿ ಲಿಖಿತವಾಗಿ ಮುಚ್ಚಳಿಕೆ ಪತ್ರವನ್ನು ನೀಡಿದಲ್ಲಿ ಅಂತಹ ರೈತರನ್ನು ಬೆಳೆವಿಮೆ ಯೋಜನೆಯಿಂದ ಕೈಬಿಡಲಾಗುವುದು. ಬೆಳೆಸಾಲ ಪಡೆಯದ ರೈತರಿಗೆ ಬೆಳೆವಿಮೆ ಯೋಜನೆಯು ಐಚ್ಛಿಕವಾಗಿರುತ್ತದೆ. ಪ್ರಸಕ್ತ ಸಾಲಿನಲ್ಲಿ ಜಿಲ್ಲೆಗೆ ಯುನಿವರ್ಸಲ್ ಸೊಂಪೊ, ಜಿ.ಐ.ಸಿ, ವಿಮಾ ಕಂಪನಿ ಆಯ್ಕೆಯಾಗಿರುತ್ತವೆ. ಬೆಳೆವಿಮೆ ಮಾಡಿಸುವ ರೈತರು ಪ್ರೂಟ್ಸ್ ತಂತ್ರಾಂಶದ ಎಫ್ಐಡಿ ಹೊಂದಿರುವುದು ಕಡ್ಡಾಯ. ರೈತರು ಬೆಳೆ ವಿಮೆಯನ್ನು ತಮ್ಮ ಹತ್ತಿರದ ಬ್ಯಾಂಕ್‌ಗಳು, ಸಾಮಾನ್ಯ ಸೇವಾ ಕೇಂದ್ರಗಳು, ಕರ್ನಾಟಕ ಒನ್ ಹಾಗೂ ಗ್ರಾಮ ಒನ್ ಕೇಂದ್ರಗಳಲ್ಲಿ ಮಾಡಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಹತ್ತಿರದ ರೈತ ಸಂಪರ್ಕ ಕೇಂದ್ರ, ತಾಲೂಕ ಸಹಾಯಕ ಕೃಷಿ ನಿರ್ದೇಶಕರ ಕಚೇರಿ ಅಥವಾ ಬೆಳೆ ವಿಮೆ ಕಂಪನಿಯ ತಾಲೂತಾ ಪ್ರತಿನಿಧಿಗಳಾದ ಸಂಗಪ್ಪ ಬೆಣ್ಣಿ (9964397577) ಬಾದಾಮಿ, ಗುಳೇದಗುಡ್ಡ, ಸಂತೋಷ ಕಮತಗಿ (8151074930) ಇಲಕಲ್ಲ, ಬಸವರಾಜ ಧೂಪದ (9036620814) ಬಾಗಲಕೋಟೆ, ಬೀಳಗಿ, ಮಹಾಂತೇಶ ನಾಗಠಾಣ (8971544829) ಜಮಖಂಡಿ, ರಬಕವಿ–ಬನಹಟ್ಟಿ, ಅನೀಲ ಆರ್ (6360923667) ಮುಧೋಳ ಇವರನ್ನು ಸಂಪರ್ಕಿಸಬಹುದು.

ಜೋಳ (ಮ, ನೀ), ಕುಸುಬೆ, ಹುರಳಿ (ಮ.ಆ) ಬೆಳೆಗಳಿಗೆ ವಿಮೆ ಕಂತು ಪಾವತಿಗೆ ನವೆಂಬರ 15 ಕೊನೆಯ ದಿನವಾದರೆ, ಸೂರ್ಯಕ್ರಾಂತಿ (ಮ.ನೀ.ಆ), ಗೋದಿ (ಮ.ಆ) ಬೆಳೆಗೆ ಡಿಸೆಂಬರ 1, ಗೋವಿನ ಜೋಳ, ಗೋದಿ, ಈರುಳ್ಳಿ (ನೀ) ಬೆಳೆಗಳಿಗೆ ಡಿಸೆಂಬರ 15, ಕಡಲೆ (ಮ.ನೀ.ಆ) ಬೆಳೆಗಳಿಗೆ ಡಿಸೆಂಬರ 31 ಹಾಗೂ ಬೇಸಿಗೆ ಹಂಗಾಮಿಗೆ ಸೂರ್ಯಕ್ರಾಂತಿ (ನೀ), ಶೇಂಗಾ, ಈರುಳ್ಳಿ (ನೀ) ಬೆಳೆಗಳಿಗೆ ಫೆಬ್ರವರಿ, 2, 2026 ಕೊನೆಯ ದಿನವಾಗಿರುತ್ತದೆ.

# ಕಬ್ಬಿಗೆ ಟನ್‌ಗೆ 3500 ರೂ.ನೀಡಲು ಒತ್ತಾಯಿಸಿ ರೈತರ ಪ್ರತಿಭಟನೆ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ನ.7–ಪ್ರತಿ ಟನ್ ಕಬ್ಬಿಗೆ 3500 ರೂಪಾಯಿ ಬೆಲೆ ನಿಗದಿ ಮಾಡಿ ಸಕ್ಕರೆ ಕಾರ್ಖಾನೆ ಪ್ರಾರಂಭಿಸಬೇಕು, ತೂಕದಲ್ಲಿ ರೈತರಿಗೆ ಆಗುತ್ತಿರುವ ಮೋಸವನ್ನು ತಡೆಯಬೇಕು ಎಂಬುದು ಸೇರಿ ಹಲವು ಬೇಡಿಕೆಗಳನ್ನು ಮುಂದಿಟ್ಟು ಶುಕ್ರವಾರ ಸಮೀಪದ ಸಂಗಮಕ್ರಾಸ್ ಬಳಿ ರೈತರು ರಸ್ತೆ ತಡೆ ಮಾಡಿ ಪ್ರತಿಭಟನೆ ನಡೆಸಿದರು. ರೈತ ಭಾರತ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಮುತ್ತಪ್ಪ ಹಿರೇಕುಂಬಿ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಶಿರೂರ, ಹೊನ್ನಾಕಟ್ಟಿ, ಬೆನಕಟ್ಟಿ, ಗುಂಡನಪಲ್ಲೆ, ಮಲ್ಲಾಪೂರ, ಬಾಗಲಕೋಟೆ ಸೇರಿದಂತೆ ಅನೇಕ ಗ್ರಾಮಗಳ ಕಬ್ಬು ಬೆಳೆದ ರೈತರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ಮುಂಜಾನೆ 11 ಗಂಟೆಗೆ ಬೆಳಗಾವಿ–ರಾಯಚೂರ ರಸ್ತೆಯ ಸಂಗಮಕ್ರಾಸ್ ನಲ್ಲಿ ಜಮಾಯಿಸಿದ ರೈತರು ರಸ್ತೆಗೆ ಮೋಟರ್ ಬೈಕ್, ಕಟ್ಟಿಗೆ ಇಟ್ಟು ರಸ್ತೆ ಬಂದ್ ಮಾಡಿದರು. ಸರ್ಕಾರ ಹಾಗೂ ಸಕ್ಕರೆ ಕಾರ್ಖಾನೆಗಳ ವಿರುದ್ಧ ಘೋಷಣೆ ಕೂಗಿದ ಪ್ರತಿಭಟನಾಕಾರರು ಸರ್ಕಾರ ಸಕ್ಕರೆ ಕಾರ್ಖಾನೆ ಮಾಲಿಕರ ಲಾಬಿಗೆ ಮಣಿಯಬಾರದು. ರೈತರಿಗೆ 3500 ರೂ. ಬೆಲೆ ಕೊಡಿಸಲು ಮುಂದಾಗಬೇಕು ಎಂದು ಒತ್ತಾಯಿಸಿದರು. ರೈತರು ಕಾರ್ಖಾನೆಗೆ ಕಳುಹಿಸುವ ಕಬ್ಬಿನ ತೂಕದಲ್ಲಿ ಮೋಸ ನಡೆಯುತ್ತಿದೆ. ಹಿಂದಿನ ವರ್ಷಗಳ ಬಿಲ್ ಬಾಕಿ ಉಳಿದಿದೆ. ಸಾಕಷ್ಟು ಲಾಭ ಮಾಡಿಕೊಳ್ಳುತ್ತಿದ್ದರೂ ರೈತರಿಗೆ ಯೋಗ್ಯ ದರ ನೀಡಲು ಕಾರ್ಖಾನೆಗಳು ಮೊಂಡುತನ ತೋರುತ್ತಿವೆ ಎಂದು ದೂರಿದ ರೈತ ಭಾರತ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಮುತ್ತಪ್ಪ ಹಿರೇಕುಂಬಿ, ಸರ್ಕಾರ ಕಾರ್ಖಾನೆ ಮಾಲಿಕರ ಪರವಾಗಿ ನಿಲ್ಲದೇ ರೈತರ ನೆರವಿಗೆ ಬರಬೇಕು ಎಂದು ಆಗ್ರಹಿಸಿದರು. ಬೆಳಗಾವಿ, ಬಾಗಲಕೋಟೆ, ವಿಜಯಪುರ ಜಿಲ್ಲೆಗಳಲ್ಲಿ ರೈತರ ಹೋರಾಟ ನಡೆದು ವಾರ ಕಳೆದರೂ ಸರ್ಕಾರ ಸಮಸ್ಯೆ ಪರಿಹರಿಸಲು ಮುಂದಾಗುತ್ತಿಲ್ಲ. ಸಕ್ಕರೆ ಸಚಿವರೂ ಸಹ 3500 ರೂ. ದರ ನಿಗದಿಗೊಳಿಸುವಂತೆ ಕಾರ್ಖಾನೆಗಳಿಗೆ ಸೂಚಿಸುತ್ತಿಲ್ಲ. ಹೀಗಾಗಿ ರೈತರು ಹೋರಾಟಕ್ಕೆ ಇಳಿದಿದ್ದಾರೆ. ಈಗಲಾದರೂ ಸರ್ಕಾರ ರೈತರ ಕೇಳುವ 3500 ರೂ. ದರ ಕೊಡಿಸಬೇಕು. ತೂಕದಲ್ಲಿ ಆಗುತ್ತಿರುವ ಮೋಸವನ್ನು ತಡೆಯಲು ಕ್ರಮಕೈಗೊಳ್ಳಬೇಕು ಎಂದು ಅವರು ಆಗ್ರಹಿಸಿದರು.

ರೈತ ಪ್ರಮುಖ ತಿಪ್ಪಣ್ಣ ಮೇಟಿ ಮಾತನಾಡಿ, ಸರ್ಕಾರ 3500 ರೂ. ಬೆಲೆ ಕೊಡಿಸದೇ ಹೋದರೆ ಹೋರಾಟ ತೀವ್ರಗೊಳ್ಳಲಿದೆ. ಇದರಿಂದ ಅನಾಹುತಕ್ಕೆ ಸರ್ಕಾರವೇ ಹೊಣೆಯಾಗಬೇಕಾಗುತ್ತದೆ ಎಂದರು.

ಮಲ್ಲನಗೌಡ ಗೌಡರ, ಶಂಭುಲಿಂಗ ಮೇಟಿ, ಮಂಜುನಾಥ ಕೋಟಿಕಲ್, ಜಗದೀಶ ಮಣ್ಣೂರ, ರಾಜು ಬಾವಲತ್ತಿ, ಯಲ್ಲಪ್ಪ ಬೆಣ್ಣೂರ, ವೆಂಕಟೇಶ ಕಟಗೇರಿ, ಹನಮಂತ ಕೋಟಿಕಲ್, ವಿನೋದ ಗೌಡರ, ಶೇಖಪ್ಪ ಬಂಡಿ, ಲಕ್ಷ್ಮಣ ಲೋಂಡವೆ, ರಾಘು ಯಡಹಳ್ಳಿ, ರಂಗಣ್ಣ ಬೆಣ್ಣೂರ, ರಾಜು ಉಗಲವಾಟ ಮತ್ತಿತರರು ಹೋರಾಟದಲ್ಲಿದ್ದರು. 1 ಗಂಟೆಗೂ ಹೆಚ್ಚು ಸಮಯ ರಸ್ತೆ ತಡೆ ನಡೆಸಿದ್ದರಿಂದಾಗಿ ವಾಹನಗಳ ಸಂಚಾರಕ್ಕೆ ಅಡಚಣೆಯಾಯಿತು. ಸಿಪಿಐ ಸಿ.ಬಿ.ಚಿಕ್ಕೋಡಿ, ಗ್ರಾಮೀಣ ಪಿಎಸ್ಐ ಆರ್.ಡಿ.ಲಮಾಣಿ, ಎಎಸ್ಐಗಳಾದ ಎಸ್.ಎಂ.ಉಕ್ಕಲಿ, ಎಸ್.ಜಿ.ಕಟ್ಟಿಮನಿ ನೇತೃತ್ವದಲ್ಲಿ ಪೋಲಿಸ್ ಬಂದೋಬಸ್ತ್ ಮಾಡಲಾಗಿತ್ತು.

# ಶಾಸಕ ಚೆನ್ನಾರಡ್ಡಿ ಪಾಟೀಲ್ ತುನ್ನೂರುಗೆ ಜಮಾದಾರ ಸನ್ಮಾನ



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ: ಶಹಾಪೂರ ತಾಲ್ಲೂಕಿನ ದೋರನಳ್ಳಿ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯಾಗಿ ಮೇಲ್ದರ್ಜೆಗೇರಿಸಿ ಆದೇಶ ಹೊರಿಡಿಸಲು ಕಾರಣರಾದ ಶಾಸಕ ಚೆನ್ನಾರಡ್ಡಿ ಪಾಟೀಲ್ ತುನ್ನೂರು ಅವರಿಗೆ ದೋರನಳ್ಳಿಯ ಕಾಂಗ್ರೆಸ್ ಮುಖಂಡರು ಸನ್ಮಾನಿಸಿ ಗೌರವಿಸಿದರು.

ಕೆಪಿಸಿಸಿ ರಾಜ್ಯ ಸಂಯೋಜಕ ಹಾಗೂ ಕೆಪಿಸಿಸಿ ಕಿಸಾನ್ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ರಾಜ್ ಮೈನುದ್ದಿನ್ ಎಂ.

ಜಮಾದಾರ ದೋರನಳ್ಳಿ ನೇತೃತ್ವದಲ್ಲಿ ಗ್ರಾಮದ ಮುಖಂಡರು ಶಾಲು ಹೊದಿಸಿ ಸನ್ಮಾನಿಸಿ ಗೌರವಿಸಿ ಗ್ರಾಪಂ ವನ್ನು ಪಪಂ ಮಾಡಲು ಶ್ರಮಿಸಿದ್ದರಿಂದ ಇಂದು ಗ್ರಾಮಕ್ಕೆ ಹಿರಿಮೆ ಬಂದಿದೆ ಎಂದು ಅರು ಹೇಳಿದರು.

ಪಪಂ ಮಾಡಲು ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿಕೆ ಶಿವಕುಮಾರ,

ಸಚಿವರಾದ ಪ್ರಿಯಾಂಕ್ ಖರ್ಗೆ, ಸಚಿವ ಶರಣಬಸಪ್ಪ ದರ್ಶನಾಪೂರ, ರಹೀಮ್ ಖಾನ್ ಸೇರಿದಂತೆ ಎಲ್ಲರ ಶ್ರಮದಿಂದ ದೋರನಳ್ಳೀಗೆ ಗೌರವ ಬಂದಿದೆ ಅವರೆಲ್ಲರಿಗೂ ಅಭಿನಂದನೆಗಳು ಸಲ್ಲುತ್ತವೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಗ್ರಾಪಂ ಸದಸ್ಯರಾದ ಹುಸೇನ್ ಮಸಬಾಯಿ, ಉಸ್ಮಾನ್ ಮಠ, ಯುವ ಮುಖಂಡ ಶಬ್ಬೀರ್ ಕೆಂಭಾವಿ ಸೇರಿದಂತೆ ಇನ್ನಿತರರು ಇದ್ದರು.

# ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ನ.7–ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ವೈದ್ಯಕೀಯ ಪರಿಹಾರ, ವಿದ್ಯಾರ್ಥಿ ಪ್ರೋತ್ಸಾಹ ಧನ, ನಿರುದ್ಯೋಗ ಭತ್ಯೆ, ಟಾಕಿಂಗ್ ಲ್ಯಾಪಟಾಪ್, ಬ್ರೈಲ್ ಕಿಟ್, ಪ್ರತಿಭಾ ಯೋಜನೆ ಸೇರಿದಂತೆ 13 ವಿವಿಧ ಫಲಾನುಭವಿ ಆಧಾರಿತ ಯೋಜನೆಗಳಿಗೆ 2025–26ನೇ ಸಾಲಿಗೆ ವಿಕಲಚೇತನ ಫಲಾನುಭವಿಗಳಿಂದ ಆನ್‌ಲೈನ್ ಸೇವಾಸಿಂಧು ತಂತ್ರಾಶದ ಮೂಲಕ (https://sevasindhu.karnataka.gov.in) ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಲು ನವೆಂಬರ್ 15 ರವರೆಗೆ ಅವಧಿ ವಿಸ್ತರಿಸಲಾಗಿದ್ದು, ಅರ್ಹ ಫಲಾನುಭವಿಗಳು ಇದರ ಸದುಪಯೋಗ ಪಡೆದುಕೊಳ್ಳುವಂತೆ ತಿಳಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಇಲಾಖಾ ಕಾರ್ಯಕರ್ತರು ಪ್ರತಿಭಾ ಮಾದರ 9606151149, ಪಾಂಡು ಲಮಾಣಿ 9538714441, ಎಮ್.ಬಿ.ಪಾಟೀಲ್ 9481135932, ಎಸ್.ಟಿ.ಬಿರಗೊಂಡ 8970565869, ಕಾವ್ಯಾ ಛಬ್ಬಿ 7676980002, ಎಮ್.ಬಿ.ಮುದ್ನೂರ 9008173773, ಎನ್.ಬಿ.ಹನಗಂಡಿ 9900417764, ಶಬ್ಬಿರ ಆರ್ ಪಕಾಲಿ 9739936205 ಇವರನ್ನು ಸಂಪರ್ಕಿಸುವಂತೆ ಜಿಲ್ಲಾ ವಿಕಲಚೇತನರ ಕಲ್ಯಾಣಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕನಕಸಿರಿ ಪ್ರಶಸ್ತಿಗೆ ಡಾ.ಅಂಬಲಿ ಆಯ್ಕೆ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ನ.7–ಪ್ರತಿ ವರ್ಷ ಕನಕ ಜಯಂತಿ ದಿನದಂದು ಕೊಡಮಾಡುವ ಜಿಲ್ಲಾ ಮಟ್ಟದ 'ಕನಕಸಿರಿ' ಪ್ರಶಸ್ತಿಗೆ ಹಾವೇರಿ ಜಿಲ್ಲೆ ಸವಣೂರ ತಾಲೂಕಿನ ಹುರಳೀಪುಪ್ಪಿ ಗ್ರಾಮದ ಡಾ.ನೀಲಪ್ಪ ಮೈಲಾರಪ್ಪ ಅಂಬಲಿ ಭಾಜನರಾಗಿದ್ದಾರೆ.

ದಿ.ಭೀಮಪ್ಪ ಹನಮಪ್ಪ ಗೊರವರ ಸ್ಮರಣಾರ್ಥ ಅವರ ಪುತ್ರ ನಿವೃತ್ತ ಕೃಷಿ ಅಧಿಕಾರಿ ಹನಮಂತ ಭೀಮಪ್ಪ ಗೊರವರ ಪ್ರತಿ ವರ್ಷ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಪ್ರಶಸ್ತಿ ಹಾಗೂ ನಗದು ಪುರಸ್ಕಾರ ನೀಡಲಾಗುತ್ತದೆ. ಕನಕದಾಸರ ಸಾಹಿತ್ಯ, ಸಂಶೋಧನೆ, ಕೀರ್ತನೆ ಕುರಿತಂತೆ ಗಣನೀಯ ಸೇವೆ ಸಲ್ಲಿಸಿದ ಸಾಧಕರನ್ನು ಗುರಿತಿಸಿ ಕೊಡುವ ಈ ಪ್ರಶಸ್ತಿಯನ್ನು ಈ ಬಾರಿ ನವೆಂಬರ 8 ರಂದು ಜರಗುವ ಕನಕದಾಸರ ಜಯಂತಿಯಂದು ಪ್ರಧಾನ ಮಾಡಲಾಗುತ್ತಿದೆ ಎಂದು ಜಿಲ್ಲಾ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಕಟಣೆ ತಿಳಿಸಿದೆ.

# ನರೇಗಾ ಯೋಜನೆಯ ಲಾಭ ಪಡೆದುಕೊಳ್ಳಿ: ಕೈವಾರೆ



ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:–ತಾಲ್ಲೂಕಿನ ಉಡಬಾಳ ಗ್ರಾಮ ಪಂಚಾಯತ್ ಆವರಣದಲ್ಲಿ 2025–26ನೇ ಸಾಲಿನ ಸಾಮಾಜಿಕ ಪರಿಶೋಧನೆ ಗ್ರಾಮ ಸಭೆ ಜರುಗಿ–ತ್ತು. ಸಾಮಾಜಿಕ ಲೆಕ್ಕ ಪರಿಶೋಧನೆ ಕಾರ್ಯಕ್ರಮದ ತಾಲೂಕ ವ್ಯವಸ್ಥಾಪಕ ರಾಹುಲ್ ಕೈವಾರೆ ಮಾತನಾಡಿ, ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ಗಂಡು ಹೆಣ್ಣಿಗೂ ಸಮಾನ ಕೆಲಸ ಹಾಗೂ ಸಮಾನ ವೇತನ ನೀಡಲಾಗುತ್ತಿದೆ. ಪ್ರತಿಯೊಂದು ಕುಟುಂಬಕ್ಕೂ ವರ್ಷಕ್ಕೆ 100 ದಿನಗಳ ಕೆಲಸ ನೀಡಲಾಗುತ್ತಿದ್ದು, ಪ್ರತಿಯೋಬ್ಬರು ಯೋಜನೆಯ ಸದ್ಬಳಕೆ ಮಾಡಿಕೊಳ್ಳಬೇಕು ಎಂದರು. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ 15ನೇ ಹಣಕಾಸು ಆಯೋಗದ ಅನುದಾನ ಮತ್ತು 2020–21ನೇ ಸಾಲಿನಿಂದ 2024–25ನೇ ಸಾಲಿನ ವರೆಗೆ ಜಿಲ್ಲಾ ಮತ್ತು ತಾಲೂಕು ಪಂಚಾಯತನ ರಾಜ್ಯ ಹಣಕಾಸು ಆಯೋಗದ ಅನುದಾನದಡಿ ಅನುಷ್ಠಾನ ಮಾಡಿರುವ ಕಾಮಗಾರಿಗಳ /ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿದರು. ಸಾಮಾಜಿಕ ಪರಿಶೋಧನೆ ಪ್ರಕ್ರಿಯೆಯಲ್ಲಿ ಕಂಡು ಬಂದಿರುವ ಅಂಶಗಳ ಬಗ್ಗೆ ಮಾಹಿತಿ ನೀಡಿದರು. ಅದರಂತೆ ಸಭೆಯಲ್ಲಿ ತಿರ್ಮಾನಗಳು ಕೈಗೊಳಲಾಯಿತು. ಈ ಸಂದರ್ಭದಲ್ಲಿ ಗ್ರಾಮ ಪಂಚಾಯತ ಅಧ್ಯಕ್ಷೆ ಅನುಸುಯಾ, ಉಪಾಧ್ಯಕ್ಷೆ ಜಗದೇವಿ ಅಭಿವೃದ್ದಿ ಅಧಿಕಾರಿ ಸವಿತಾ ಎಲ್. ಭಯ್ಯಾ, ಕಾರ್ಯದರ್ಶಿ ಶಂಕರ, ಐಇಸಿ ಸಂಯೋಜಕ ವಿಶ್ವನಾಥ ಗಡ್ಡಿಮನಿ, ರಜನಿಕಾಂತ್ ವರ್ಮಾ, ತಾಂತ್ರಿಕ ಸಹಾಯಕ ಮಹೇಬೂಬ್, ರೇಷ್ಮೆ ಇಲಾಖೆ ಅಧಿಕಾರಿ ಲಕ್ಷ್ಮಣ ಪೂಜಾರಿ, ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಹಾಲಿ ಸದಸ್ಯ ನರಸಾರೆಡ್ಡಿ, ಸೇರಿದಂತೆ ಗ್ರಾಮ ಪಂಚಾಯತ್ ಸದಸ್ಯರು, ಗ್ರಾಮಸ್ಥರು, ಪಂಚಾಯತ ಸಿಬ್ಬಂದಿ ವರ್ಗದವರು, ಕೂಲಿ ಕಾರ್ಮಿಕರು ಉಪಸ್ಥಿತರಿದ್ದರು.

# ಬೆಣ್ಣೂರು ಗ್ರಾಮದಲ್ಲಿ ಪ್ರಥಮ ವಿಶ್ವಕರ್ಮ ಪೂಜಾ ಮಹೋತ್ಸವ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜ.28:ಜಿಲ್ಲೆಯ ಮುಧೋಳ ತಾಲೂಕಿನ ಅಕ್ಕಿಮರಡಿ ಗ್ರಾಮದಲ್ಲಿ ಉನ್ನತೀಕರಿಸಿದ ಸರಕಾರಿ ಪ್ರೌಢಶಾಲೆಯಲ್ಲಿ ನಡೆದಿರುವ 10 ಕೊಠಡಿಗಳ ನಿರ್ಮಾಣ ಕಾಮಗಾರಿಯ ಸ್ಥಳಕ್ಕೆ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ ಭೇಟಿ ನೀಡಿ ಕಾಮಗಾರಿ ವೀಕ್ಷಣೆ ಮಾಡಿದರು.

ಮಂಗಳವಾರ ಗ್ರಾಮಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಕಾಮಗಾರಿ ವೀಕ್ಷಣೆ ಮಾಡಿ ಗುಣಮಟ್ಟದ ಕಾಮಗಾರಿಗೆ ಹೆಚ್ಚಿನ ಒತ್ತು ನೀಡಬೇಕು. ನಿಗದಿತ ಅವಧಿಯಲ್ಲಿ ಕಾಮಗಾರಿ ಪೂರ್ಣಗೊಳಿಸಬೇಕು ಎಂದು ಅವರು ಸೂಚಿಸಿದರು. ಸರಕಾರಿ ಪ್ರೌಢಶಾಲಾ ಮಕ್ಕಳೊಂದಿಗೆ ಬಿಸಿಊಟ ಸವಿದ ನಂತರ ಅಂಗನವಾಡಿ ಕೇಂದ್ರಕ್ಕೆ ಭೇಟಿ ನೀಡಿ ಮಕ್ಕಳ ಹಾಜರಾತಿ ಪರಿಶೀಲಿಸಿ, ಮಕ್ಕಳಿಗೆ ನೀಡುತ್ತಿರುವ ಪೌಷ್ಠಿಕ ಆಹಾರದ ಗುಣಮಟ್ಟ ಕಾಪಾಡಿಕೊಳ್ಳಲು ಸೂಚಿಸಿದರು. ಸ್ವಚ್ಛತೆಗೆ ಹೆಚ್ಚಿನ ಮಹತ್ವಕೊಟ್ಟು ಕಲಿಕಾ ವ್ಯವಸ್ಥೆಯಲ್ಲಿ ಸುಧಾರಣೆ ಮಾಡಿಕೊಳ್ಳಲು ತಿಳಿಸಿದರು. ಕೇಸರಕೊಪ್ಪದಲ್ಲಿರುವ ಪದವಿ ಪೂರ್ವ ಕಾಲೇಜಿನ ಕೊಠಡಿ ನಿರ್ಮಾಣ ಕಾಮಗಾರಿ ವೀಕ್ಷಣೆ ಮಾಡಿದ ಕು–ರೇರ್, ಡಾ.ಬಿ.ಆರ್.ಅಂಬೇಡ್ಕರ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರಲ್ಲದೇ ಮಿರ್ಜಿ ಸರಕಾರಿ ಪ್ರೌಢಶಾಲೆಯ ಎರಡು ಕೊಠಡಿ ನಿರ್ಮಾಣ ಕಾಮಗಾರಿ ವೀಕ್ಷಿಸಿದರು. ಉತ್ತೂರ ಪ್ರಾಥಮಿಕ ಆರೋಗ್ಯ ಕೇಂದ್ರ–ಕ್ಕೆ ಭೇಟಿ ನೀಡಿದ ನಂತರ ಮೆಟಗುಡ್ಡ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಅಂಗನವಾಡಿ ಕಾರ್ಯಕರ್ತೆಯರ ವಲಯ ಸಭೆ ನಡೆಸಿದರು.

ನಿಂಗಾಪೂರ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ದಾದನಟ್ಟಿ ಗ್ರಾಮ ಪಂಚಾಯತ ಕಾರ್ಯಾಲಯ, ಅಂಗವನಾಡಿ ಕೇಂದ್ರ 67ಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ದಾದನಟ್ಟಿ ಜಲ ಸಂರಕ್ಷಣ ಘಟಕದ ಕಾಮಗಾರಿ, ಕೆರೆ ಜೀರ್ಣೋದ್ದಾರ ಕಾಮಗಾರಿ, ಲೋಕಾಪೂರ ಬಾಲಕರ ಪೋಸ್ಟ ಮೆಟ್ರಿಕ್ ವಸತಿ ನಿಲಯದ ಕಾಮಗಾರಿ, ರೈತ ಸಂಪರ್ಕ ಕೇಂದ್ರದಲ್ಲಿ ಪೇವಸ್ ಅಳವಡಿಕೆ ಹಾಗೂ ಬಾಲಕಿಯರ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶೌಚಾಲಯ ಕಾಮಗಾರಿ ಪರಿಶೀಲನೆ ಮಾಡಿದರು.

ಭೇಟಿ ವೇಳೆಯಲ್ಲಿ ಮುಧೋಳ ತಾಲೂಕಾ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ಉಮೇಶ ಸಿದ್ನಾಳ, ಗ್ರಾಮೀಣ ಕುಡಿಯುವ ನೀರು ಯೋಜನೆಯ ಕಾರ್ಯಪಾಲ ಅಭಿಯಂತರ ಆಕಾಶ ವಂದೆ, ಸಹಾಯಕ ಕಾರ್ಯಪಾಲಕ ಅಭಿಯಂತರ ಆರ್.ಬಿ.ಚೆಲುವಯ್ಯ, ಪಂಚಾಯತ ರಾಜ್ ಇಲಾಖೆಯ ಸಹಾಯಕ ಕಾರ್ಯಪಾಲ ಅಭಿಯಂತರ ಎಂ.ಐ.ಅಂಬಿಗೇರ ಸೇರಿದಂತೆ ಇತರರು ಇದ್ದರು.

ಬಾಗಲಕೋಟೆ:ವಿಶ್ವಕರ್ಮ ಸಮಾಜ ಬೆಣ್ಣೂರು ಹಾಗೂ ಉತ್ತರ ಕರ್ನಾಟಕ ವಿಶ್ವಕರ್ಮ ಯುವ ಬರಹಗಾರರ ಮತ್ತು ಸಂಶೋಧಕರ ವೇದಿಕೆ ಕಮಲಾಪೂರ ಇವರ ಸಹಯೋಗದಲ್ಲಿ ದಿನಾಂಕ:09/11/2025 ರಂದು ಮುಂಜಾನೆ 9:00 ಗಂಟೆಗೆ ಬೆಣ್ಣೂರು ಗ್ರಾಮದ ದ್ಯಾಮವ್ವನ ಗುಡಿ ಆವರಣದಲ್ಲಿ ಪ್ರಥಮ ವಿಶ್ವಕರ್ಮ ಪೂಜಾ ಮಹೋತ್ಸವ ಹಮ್ಮಿಕೊಳ್ಳಲಾಗಿದೆ ಎಂದು ಪೂಜಾ ಮಹೋತ್ಸವ ಸಮಿತಿಯ ನಿರ್ದೇಶಕರಾದ ಡಾ.ವೀರೇಶ ಬಡಿಗೇರ ಪತ್ರಿಕಾ ಪ್ರಕಟನೆಗೆ ತಿಳಿಸಿದ್ದಾರೆ.

ಬೆಣ್ಣೂರು ಗ್ರಾಮದಲ್ಲಿ ನಡೆಯುವ ಪ್ರಥಮ ಪೂಜಾ ಮಹೋತ್ಸವ ಅಂಗವಾಗಿ ಮುಂಜಾನೆ 9 ಗಂಟೆಗೆ ವಿಶ್ವಕರ್ಮ ಮೆರವಣಿಗೆ ನಡೆಯುವುದು. ಲಕ್ಷ್ಮೀದೇವಿ ಡೊಳ್ಳಿನ ಸಂಘದವರಿಂದ ಡೊಳ್ಳು ವಾದ್ಯದೊಂದಿಗೆ ಮೆರವಣಿಗೆ ಪ್ರಾರಂಭವಾಗುವುದು. ಬೆಣ್ಣೂರು ಗ್ರಾಮ ಪಂಚಾಯತ ಅಧ್ಯಕ್ಷರಾದ ಮಹಾದೇವಪ್ಪ ಲಕ್ಕಪ್ಪ ಹುಂಡೆಕಾರ ಉದ್ಘಾಟಿಸುವರು, ಹನಮಪ್ಪ ಈ ಪತ್ತಾರ ಅವರು ಅಧ್ಯಕ್ಷತೆ ವಹಿಸುವರು. ರಾಚಪ್ಪ ಪಟ್ಟಣದ, ರಾಚಪ್ಪ ಈ ಬೀಳಗಿ, ಸಿದ್ದಪ್ಪ ವಾಲಿಕಾರ, ಎಚ್.ಆರ್. ಮಾಳಿ ಅತಿಥಿಗಳಾಗಿ ಪಾಲ್ಗೋಳ್ಳುವರು.

ಮುಂಜಾನೆ 11.30 ಗಂಟೆಗೆ ವೇದಿಕೆ ಕಾರ್ಯಕ್ರಮ, ಕರ್ನಾಟಕ ರಾಜ್ಯ ವಿಶ್ವ ಬ್ರಾಹ್ಮಣ ಮಠಾಧೀಪತಿಗಳು ಹಾಗೂ ಪೀಠಾಧೀಪತಿಗಳ ಒಕ್ಕೂಟ ಅಧ್ಯಕ್ಷರಾದ ಪೂಜ್ಯ ರಾಮಚಂದ್ರಸ್ವಾಮಿಗಳು ಹಾಗೂ ಮುರನಾಳ ಮಳೆರಾಜೇಂದ್ರಸ್ವಾಮಿ ಮಠದ ಪೂಜ್ಯ ಜಗನ್ನಾಥ ಮಹಾಸ್ವಾಮಿಗಳು ದಿವ್ಯಸಾನಿಧ್ಯ ವಹಿಸುವರು. ಶ್ರೀ ವಿಶ್ವಕರ್ಮ ಸಮಾಜ ವಿಕಾಸ ಸಂಸ್ಥೆ (ರಿ) ಶಿರಸಂಗಿ ಅಧ್ಯಕ್ಷರಾದ ಪ್ರೊ.ಪಿ.ಬಿ.ಬಡಿಗೇರ ಅವರು ಅಧ್ಯಕ್ಷತೆ ವಹಿಸುವರು. ಕರ್ನಾಟಕ ಸರ್ಕಾರದ ನಿವೃತ್ತ ಜಂಟಿ ಕಾರ್ಯದರ್ಶಿಗಳಾದ ಕೆ.ಆರ್.ಬಡಿಗೇರ ಅವರು ಉದ್ಘಾಟನೆ ಮಾಡುವರು. ಹಂಪಿ ಕನ್ನಡ ವಿಶ್ವವಿದ್ಯಾಲಯದ ಹಿರಿಯ ಪ್ರಾಧ್ಯಾಪಕರಾದ ಡಾ.ವೀರೇಶ ಬಡಿಗೇರ ಅವರು 'ಬಡಿಗವೃತ್ತಿ:ವೈಜ್ಞಾನಿಕ ಚಿಂತನೆ' ಮತ್ತು 'ತಿಂತಣಿ ಮೌನೇಶ್ವರ ವಚನ ಪುಷ್ಪಾಂಜಲಿ' ಪುಸ್ತಕಗಳನ್ನು ಇಳಕಲ್ ವಿಶ್ವಕರ್ಮ ಸಮಾಜದ ಹಿರಿಯರಾದ ಗಂಗಣ್ಣ ಬಡಿಗೇರ ಅವರು ಲೋಕಾರ್ಪನೆ ಮಾಡುವರು.

ಅತಿಥಿಗಳಾಗಿ ಕಿತ್ತೂರು ರಾಣಿಚೆನ್ನಮ್ಮ ಪ್ರಶಸ್ತಿ ಪುರಸ್ಕೃತರಾದ ಕು.ಅನಿತಾ ಆಚಾರ್, ಬಾಗಲಕೋಟೆ ತಹಶಿಲ್ದಾರರಾದ ವಾಸುದೇವಸ್ವಾಮಿ, ಬಾಗಲಕೋಟೆ ಜಿಲ್ಲಾ ವಿಶ್ವಕರ್ಮ ಸಮಾಜದ ಅಧ್ಯಕ್ಷರಾದ ಅರವಿಂದ ಪತ್ತಾರ, ಬಾಗಲಕೋಟೆ ತಾಲೂಕು ವಿಶ್ವಕರ್ಮ ನೌಕರರ ಸಂಘದ ಅಧ್ಯಕ್ಷರಾದ ದೇವೇಂದ್ರ ಅಗಳತಕಟ್ಟಿ, ಇಲಕಲ್ ವಿಶ್ವಕರ್ಮ ಸಮಾಜದ ಉಪಾಧ್ಯಕ್ಷರಾದ ವೀರಭದ್ರಪ್ಪ ಹಿಪ್ಪರಗಿ, ವಿದ್ಯಾಗಿರಿ ಕಾಳಿಕಾ ದೇವಸ್ಥಾನ ಅಧ್ಯಕ್ಷರಾದ ವಂತರಾವ್ ಮಾದವ ಕಮ್ಮಾರ, ಬೀಳಗಿ ವಿಶ್ವಕರ್ಮ ಸಮಾಜದ ಅಧ್ಯಕ್ಷರಾದ ನಾಗೂ ಟಂಕಸಾಲಿ, ಗುಳೇದಗುಡ್ಡ ವಿಶ್ವಕರ್ಮ ಸಮಾಜದ ಅಧ್ಯಕ್ಷರಾದ ಚಂದ್ರಶೇಖರ ಬಡಿಗೇರ, ಬಾಗಲಕೋಟೆ ವಿಶ್ವಕರ್ಮ ಸಮಾಜದ ಅಧ್ಯಕ್ಷರಾದ ಮೌನೇಶ ಪತ್ತಾರ, ಲಕ್ಕುಂಡಿ ಸುಮಲತಾ ಶಿಲ್ಪಿ, ಹಾಗೂ ಸ್ವಾಗತ ಸಮಿತಿ, ಮೆರವಣಿಗೆ ಸಮಿತಿ, ವೇದಿಕೆ ಸಮಿತಿ, ಊಟದ ಸಮಿತಿ ಸದಸ್ಯರೆಲ್ಲರೂ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರೆಂದು ಸಂಚಾಲಕರಾದ ಮುತ್ತು ಭಾಸ್ಕರ ಬಡಿಗೇರ, ವ್ಯವಸ್ಥಾಪಕರಾದ ವಜ್ಞಾನೇಶ್ವರ ಬಡಿಗೇರ, ಕಾಶಿನಾಥ ಪತ್ತಾರ, ಮನೋಹರ ಬಡಿಗೇರ, ಸಿದ್ದಪ್ಪ ಪತ್ತಾರ ಅವರು ಪತ್ರಿಕಾ ಪ್ರಕಟನೆಗೆ ತಿಳಿಸಿದ್ದಾರೆ.

# ಜನ ಸಮೂಹದಿಂದ ಮೊತ್ತ ಸಂಗ್ರಹ



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ ಜಿಲ್ಲೆಯ ಶಹಾಪೂರ ನಗರದಲ್ಲಿ. ಜನ ಸಂಮೋಹದಿಂದ ಸಂಗ್ರಹವಾದ ಮೊತ್ತ. 10578 ರೂಪಾಯಿಗಳು. ರಾಜ್ಯ ಸಮಿತಿಗೆ ಕಳಿಸಲು ತೀರ್ಮಾನಿಸಲಾಯಿತು.

ಅಕಖ (ಒ) ಪಕ್ಷದ 105 ನೇ ವರ್ಷದ ದಿನಾಚರಣೆ ಅಂಗವಾಗಿ ಜನ ಸಮೂಹದಲ್ಲಿ ಪ್ರಚಾರ ನಡೆಸುವ ಮುಖಾಂತರ. ಶೋಷಣೆ ರೈತ ಸಮಾಜಕ್ಕಾಗಿ. ಭ್ರಷ್ಟಾಚಾರ ಮುಕ್ತಕ್ಕಾಗಿ. ರೈತ ಕಾರ್ಮಿಕರ ಅಭಿವೃದ್ಧಿಗಾಗಿ. ಜನ ಸಮೂಹದಿಂದ ನಿಧಿ ಸಂಗ್ರ ಮಾಡುವ ಮುಖಾಂತರ. ಡಿಸೆಂಬರ್ 21ರಂದು ಬೃಹತ್ ಆದ ಹೋರಾಟಕ್ಕೆ ಬೆಂಗಳೂರಿನ ಫ್ರೀಡಂ ಪಾರ್ಕಿಗೆ ಕರೆ ನೀಡಲಾಗಿದೆ. ಎಲ್ಲರೂ ಸಹಾಯ ಸಹಕಾರ ನೀಡಿ ಎಲ್ಲರೂ ಸಹಕಾರ ನೀಡಿ ಭಾಗವಹಿಸಬೇಕೆಂದು ಸಿಪಿಐ ಎಂ ಪಕ್ಷ ಯಾದಗಿರಿ ಜಿಲ್ಲಾ ಸಮಿತಿ. ವಿನಂತಿಸಿತು.

ಸಿಪಿಐ ಪಕ್ಷದ ಜಿಲ್ಲಾ ಕಾರ್ಯದರ್ಶಿ ಚೆನ್ನಪ್ಪ ಆನೆಗುಂದಿ

ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರಾದ ಎಮ್ ಸಾಗರ್.ಭೀಮರಾಯ ಪೂಜಾರಿ.

ಸಿಪಿಐಎಂ ಪಕ್ಷದ. ರಂಗಮ್ಮ ಕಟ್ಟಿಮನಿ ಗುಲಾಂ ಸಾಬ್ ನಾಗನಟಗಿ. ಅಮಲಯ ಬೇವಿನಕಟ್ಟಿ ದೇವು ಹೊತಪೇಟೆ. ಚಂದ್ರು ಕಾಡಿನಗೇರಿ ನಿಂಗಪ್ಪ ಕುರಕುಂದಿ ಶಿವಕುಮಾರ್ ಐಕುರ್. ಇತರರು ಇದ್ದರು.

## 3,500 ರೂ. ಘೋಷಣೆ ಮಾಡಿ ಕಾರ್ಖಾನೆಗಳನ್ನು ಆರಂಭಿಸಿ



ಮಲ್ಲಮ್ಮ ನುಡಿ ವಾರ್ತೆ

ಯಡ್ರಾಮಿ: ಪ್ರತಿ ಟನ್ ಕಬ್ಬಿಗೆ 3,500 ರೂ. ದರ ನಿಗದಿ ಸೇರಿದಂತೆ ನಾನಾ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ವಿವಿಧ ಸಂಘಟನೆಗಳ ನೇತೃತ್ವದಲ್ಲಿ ಕಬ್ಬು ಬೆಳೆಗಾರರು. ತಾಲೂಕಿನ ನಾಗರಹಳ್ಳಿ ಶುಕ್ರವಾರ ಪ್ರತಿಭಟನಾ ರ್ಯಾಲಿ ನಡೆಸಿ, ಅಹೋರಾತ್ರಿ ಧರಣಿ ಆರಂಭಿಸಿದರು.

ನಾಗರಹಳ್ಳಿ ಗ್ರಾಮದ ಸ್ವಾತಂತ್ರ ಹೋರಾಟಗಾರ ಸಿದ್ದರಾಮಯ್ಯ ಹಿರೇಮಠ ಚೌಕ್ ದಲ್ಲಿ ನೆರೆದ ರೈತರು, ಬಸವೇಶ್ವರ ವೃತ್ತ, ಡಾ.ಬಿ.ಆರ್.ಅಂಬೇಡ್ಕರ್ ಸರ್ಕಲ್ ಮೂಲಕ ಸಕ್ಕರೆ ಕಾರ್ಖಾನೆ ಆವರಣದಲ್ಲಿ ಬೃಹತ್ ಪ್ರತಿಭಟನೆ ನಡೆಸಿ, ರಾಜ್ಯ ಹಾಗೂ ಕೇಂದ್ರ ಸರಕಾರದ ವಿರುದ್ಧ ಘೋಷಣೆ ಕೂಗಿದರು.

ಮುಖಂಡರು, ಕಬ್ಬು ಬೆಳೆಗಾರರು ಎದುರಿಸುತ್ತಿರುವ ಸಮಸ್ಯೆಗಳನ್ನು ಜನಪ್ರತಿನಿಧಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಚುನಾವಣೆಯ ಸಂದರ್ಭದಲ್ಲಿ ಮಾತ್ರ ರೈತರ ಕಷ್ಟ ಗೊತ್ತಾಗುತ್ತೆ. ಪ್ರಕೃತಿ ವಿಕೋಪದ ನಡುವೆಯೂ ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗದೆ ರೈತರು ನಷ್ಟ ಅನುಭವಿಸುತ್ತಿದ್ದಾರೆ. ಯಾವ ಜನಪ್ರತಿನಿಧಿಯೂ ರೈತರ ಬಗ್ಗೆ ಧ್ವನಿ ಎತ್ತುತ್ತಿಲ್ಲ ಎಂದು ತಾಲೂಕ ಅಧ್ಯಕ್ಷರು ಈರಣ್ಣ ಭಜಂತ್ರಿ ಆರೋಪಿಸಿದರು.

ಕೃಷಿ ಉತ್ಪಾದನಾ ವೆಚ್ಚ ಹೆಚ್ಚಳವಾಗುತ್ತಿದೆ. ಆದ್ದರಿಂದ ಉತ್ಪಾದನಾ ವೆಚ್ಚಕ್ಕೆ ಅನುಗುಣವಾಗಿ ಪ್ರತಿ ಟನ್ ಕಬ್ಬಿಗೆ 3,500 ರೂ. ಘೋಷಣೆ ಮಾಡಿ ಸಕ್ಕರೆ ಕಾರ್ಖಾನೆಗಳನ್ನು ಪ್ರಾರಂಭ ಮಾಡಬೇಕು ಎಂದು ಹೋರಾಟಗಾರರು ಆಗ್ರಹಿಸಿದರು. ಸಕ್ಕರೆ ಜತೆಗೆ ಉಪ ಉತ್ಪನ್ನಗಳಿಂದ ಹೆಚ್ಚಿನ ಲಾಭ ಪಡೆಯುತ್ತಿರುವ ಕಾರ್ಖಾನೆಗಳು ಕಬ್ಬಿಗೆ ಮಾತ್ರ ಕಡಿಮೆ ದರ ಕೊಡುವುದು ನ್ಯಾಯವೇ? ಬಾಕಿ ಉಳಿಸಿಕೊಂಡಿರುವ ಕಬ್ಬಿನ ಬಿಲ್ ತಕ್ಷಣ ಪಾವತಿಸಬೇಕು ಎಂದು ಸಾಹೇಬಗೌಡ ದೇಸಾಯಿ ಒತ್ತಾಯಿಸಿದರು.

ಈ ಪ್ರತಿಭಟನೆಯಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ರಾಜ್ಯ ಉಪಾಧ್ಯಕ್ಷೆ ಮಹಾದೇವಿ ಬೇವಿನಾಳಮಠ ಭಾಗವಹಿಸಿದ್ದರು. ಯಾದಗಿರಿ ಜಿಲ್ಲಾ ಅಧ್ಯಕ್ಷ ಹೆಚ್ ಆರ್ ಬಡಿಗೇರ್, ಯಡ್ರಾಮಿ ತಾಲೂಕ ಅಧ್ಯಕ್ಷ ಈರಣ್ಣ ಭಜಂತ್ರಿ, ಸಾಹೇಬಗೌಡ ದೇಸಾಯಿ, ಶಫೀಕ್ ಉಲ್ಲ ದಖ್ನಿ, ಸಾಂಬಶಿವಯ್ಯ ಹಿರೇಮಠ, ಮಾಜಿ ತಾಲೂಕು ಪಂಚಾಯತ ಸದಸ್ಯರು ಮಲ್ಲನಗೌಡ ಪಾಟೀಲ, ಮಲ್ಲನಗೌಡ ಮಾಲಿಪಾಟೀಲ ಮಳ್ಳಿ, ದಂಡಪ್ಪ ಸಾವು ಕುಳಗೇರಿ, ಮಲ್ಲನಗೌಡ ಬಿರಾದರ,

ಸಂತೋಷ ಯಾದಗಿರಿ ಮಳ್ಳಿ, ಸಾಹೇಬ ಪಟೇಲ ತಿಳಗೋಳ ಕುಳಗೇರಿ, ಫಯಾಜ್ ಪಟೇಲ್ ಹಸರಗುಂಡಗಿ, ಮಾದೇವಿ ಬೇವಿನಮಠ ಹುಣಸಗಿ, ದೇವಿಂದ್ರ ಮಾಣ್ಣೆಣಗಿ, ಹನುಮಂತ ಕೂಡ್ಗಿ, ಬಸವರಾಜ ಹೂಗಾರ ಯಡ್ರಾಮಿ, ಬಸಲಿಂಗಪ್ಪ ಸಾಹು ನಾಗನೂರು ಸೇರಿದಂತೆ ನೂರಾರು ರೈತರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

## ವಂದೇ ಮಾತರಂ ಹಾಡಿನ 150 ವರ್ಷಗಳ ಸ್ಮರಣಾರ್ಥ: ಎನ್‌ಸಿಸಿ ಘಟಕದಿಂದ ರ್ಯಾಲಿ

ಬೀದರ, ನವೆಂಬರ್.07 (ಕರ್ನಾಟಕ ವಾರ್ತೆ): "ವಂದೇ ಮಾತರಂ" ಹಾಡಿನ 150 ವರ್ಷಗಳ ಸ್ಮರಣಾರ್ಥವನ್ನು ಆಚರಿಸುತ್ತಿರುವ ಹಿನ್ನಲೆಯಲ್ಲಿ ಬೀದರ್ ಟ್ರಾಫಿಕ್ ಪೊಲೀಸ್ ಮತ್ತು ಬ್ರಿಮ್ಸ್ ಆಸ್ಪತ್ರೆಯ ಸಹಯೋಗದಲ್ಲಿ 3 ಕಾರ್ ಏರ್




ಎನ್‌ಸಿಸಿ ತಂಡವು ಶುಕ್ರವಾರದಂದು "ವಂದೇ ಮಾತರಂ" ರಾಷ್ಟ್ರೀಯ ಗೀತೆಯ ಬಗ್ಗೆ ಜಾಗೃತಿ ಮತ್ತು ಮಹತ್ವವನ್ನು ತರಲು ಮತ್ತು ಜನರಲ್ಲಿ ಒಗ್ಗಟ್ಟು ಮೂಡಿಸಲು ಎನ್‌ಸಿಸಿ ಘಟಕದಿಂದ ರ್ಯಾಲಿ ಆಯೋಜಿಸಲಾಗಿತ್ತು.

ಈ ರ್ಯಾಲಿಯು ನಗರದ ಅಂಬೇಡ್ಕರ್ ವೃತ್ತ, ನೌಬಾದ್ ರಸ್ತೆ ಮತ್ತು ಬ್ರಿಮ್ಸ್ ಆಸ್ಪತ್ರೆಯ ಮೂಲಕ ಸಾಗಿತು. 100 ಎನ್‌ಸಿಸಿ ಕೆಡೆಟ್‌ಗಳು ರಾಷ್ಟ್ರಗೀತೆಯ ಮಹತ್ವವನ್ನು ಪ್ರಚಾರ ಮಾಡುವ ಫಲಕಗಳೊಂದಿಗೆ ನಡೆಸಲಾಯಿತು. ನಂತರ ಬೀದರನ ಬ್ರಿಮ್ಸ್ ಆಸ್ಪತ್ರೆಯಲ್ಲಿ 100 ಎನ್‌ಸಿಸಿ ಕೆಡೆಟ್‌ಗಳಿಂದ ರಕ್ತದಾನ ಶಿಬಿರ ನಡೆಸಲಾಯಿತು.

ಈ ಕಾರ್ಯಕ್ರಮದಲ್ಲಿ 3 ಕಾರ್ ಏರ್ (ಟಿ) ಎನ್‌ಸಿಸಿಯ ಕಮಾಂಡಿಂಗ್ ಆಫೀಸರ್ ಗ್ರೂಪ್ ಕ್ಯಾಪ್ಟನ್ ವಿಎನ್‌ಎಲ್ ರೆಡ್ಡಿ, ಜೆಡಬ್ಲ್ಯೂಒ ಪ್ರದೀಪ್ ಸಿಂಗ್ (ಅಡ್ಜುಟಂಟ್), ಪಿಐ ಸಿಬ್ಬಂದಿ ಎನ್‌ಸಿಸಿ ಘಟಕ, ಗುರುನಾನಕ್ ದೇವ್ ಎಂಜಿನಿಯರಿಂಗ್ ಕಾಲೇಜಿನ ಫ್ಲೈಟ್ ಲೆಫ್ಟಿನೆಂಟ್ ಅನೂಪ್ ಕುಮಾರ್ ಎಲಿಯಾ (ಎಎನ್‌ಒ), ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನ ಫ್ಲೈಯಿಂಗ್ ಆಫೀಸರ್ ನಾಗರಾಜ್ (ಎಎನ್‌ಒ) ಸೇರಿದಂತೆ ಇತರರು ಉಪಸ್ಥಿತರಿದ್ದರು

## ರಾಜೇಶ್ವರ ಗ್ರಾಮ ಪಟ್ಟಣ ಪಂಚಾಯತಿಯಾಗಿ ಮೇಲ್ದರ್ಜೆಗೆ: ರಾಜೇಶ್ವರ ಗ್ರಾಮಸ್ಥರ ಸಂಭ್ರಮ



ಮಲ್ಲಮ್ಮ ನುಡಿ ವಾರ್ತೆ

ಹುಮನಾನಾದ್: ಮತಕ್ಷೇತ್ರ ವ್ಯಾಪ್ತಿಯ ರಾಜೇಶ್ವರ ಗ್ರಾ.ಪಂ. ಪಟ್ಟಣ ಪಂಚಾಯತಿಯಾಗಿ ಮೇಲ್ದರ್ಜೆಗೇರಿಸಿದ್ದ, ಹಿನ್ನಲೆ ನಗರದ ಮಾಜಿ ಸಚಿವರ ಗೃಹ ಕಚೇರಿಯಲ್ಲಿ ಶುಕ್ರವಾರ ರಾಜೇಶ್ವರ ಗ್ರಾಮದ ಮುಖಂಡರು ಮಾಜಿ ಸಚಿವ ರಾಜಶೇಖರ ಪಾಟೀಲ್ ಅವರಿಗೆ ಸನ್ಮಾನಿಸಿದರು.

ಬಳಿಕ ರಾಜೇಶ್ವರ ಗ್ರಾಮಸ್ಥರು ಮಾತನಾಡಿ, ರಾಜೇಶ್ವರ ಗ್ರಾಮ ಪಂಚಾಯತಿ ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸುವ ನಮ್ಮ ಬಹುದಿನಗ ಬೇಡಿಕೆಯನ್ನು ಇದೀಗ ಸಿಎಂ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರ ಈಡೇರಿಸಿದೆ.

ರಾಜೇಶ್ವರ ಪಟ್ಟಣ ಪಂಚಾಯಿತಿಯಾಗಿ ಮೇಲ್ದರ್ಜೆಗೇರಿಸಿದ ಎಲ್ಲ ಶ್ರೇಯಸ್ಸು ಮಾಜಿ ಸಚಿವ ರಾಜಶೇಖರ ಪಾಟೀಲ್, ಎಂಎಲ್ಸಿ ಡಾ. ಚಂದ್ರಶೇಖರ ಪಾಟೀಲ್ ಹಾಗೂ ಎಂಎಲ್ಸಿ ಭೀಮರಾವ ಪಾಟೀಲ್ ಅವರಿಗೆ ಸಲ್ಲುತ್ತದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಅಭಿಷೇಕ ಪಾಟೀಲ್, ಪ್ರಭು ಹೊನ್ನಳ್ಳಿ, ಮಲ್ಲಿಕಾರ್ಜುನ್ ಮಾಲೆ, ಧೂಳಪ್ಪ ಪೋಸ್ತಾರ್, ನಜೀಬ್ ಖಾನಸಾಬ್, ತಾಜೋದ್ದಿನ್ ಗುಲ್ಫೋರಸ್, ನಾಗಣ್ಣ ಘಾಂಗ್ರೆ, ಸಂತೋಷ ಸೀಗಿ, ಮಾಣಿಕ ಘಾಂಗ್ರೆ,

ಸೂರ್ಯಕಾಂತ ಇಸ್ಲಾಂಪೂರ, ಗುರು ಮುಲಗೆ, ಬಾಬು ಪೋಸ್ತಾರ್, ಪ್ರಕಾಶ ಬುಡಕೆ, ದತ್ತಾತ್ರೇಯ ಜಾಧವ, ಅನಿಲ ಮುಲಗೆ, ಅಜೀಮೊದ್ದಿನ್, ಸತೀಷ ಪೋಸ್ತಾರ್, ಆಯುಬ್ ಸೇರಿದಂತೆ ಅನೇಕರಿದ್ದರು.

**ಕೋಟ್ : ಹುಮನಾಬಾದ್ ಮತಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾಗಿ ನನ್ನ ಆಡಳಿತ ಅವಧಿಯಲ್ಲಿ ಸಾಕಷ್ಟು ಯೋಜನೆಗಳನ್ನು ಅನುಷ್ಠಾನ ಮಾಡಿದ್ದೇನೆ. ಅಧಿಕಾರದಲ್ಲಿ ಇಲ್ಲದಿದ್ದರೂ ಕೂಡಾ ರಾಜ್ಯದಲ್ಲಿ ನಮ್ಮದೆ ಸರಕಾರವಿದೆ. ಹೀಗಾಗಿ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಪೂರಕವಾಗಿ ನಿಸ್ವಾರ್ಥ ಸೇವೆ ಸಲ್ಲಿಸುತ್ತೇನೆ.**

**ರಾಜಶೇಖರ ಪಾಟೀಲ್**
**ಮಾಜಿ ಸಚಿವ, ಹುಮನಾಬಾದ್**

## ತಾಂಡಾ ನಿವಾಸಿಗಳಿಂದ ಔರಾದ್ ತಹಸಿಲ ಕಚೇರಿಗೆ ಮುತ್ತಿಗೆ




ಮಲ್ಲಮ್ಮ ನುಡಿ ವಾರ್ತೆ

ಬೀದರ್. ನ. 07 :– ಈ ತಿಂಗಳ 18ರಂದು ಬಸವನವಾಡಿ ತಾಂಡಾ ಸೇರಿದಂತೆ ನಿವೇಶನ ಹಕ್ಕು ಪತ್ರ ಪಡೆಯದೆ ಬಂಚಿತರಾದ ಒಟ್ಟು 12 ತಾಂಡಾಗಳ ಸಾವಿರಾರು ನಿವಾಸಿಗಳಿಂದ ಔರಾದ್ ತಹಸಿಲ ಕಚೇರಿಗೆ ಮುತ್ತಿಗೆ ಹಾಕಲಾಗುತ್ತದೆ ಎಂದು ಔರಾದ್ ಪುರಸಭೆ ಸದಸ್ಯರಾದ ಶಿವಾಜಿ ರಾಠೋಡ ಎಚ್ಚರಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಶುಕ್ರವಾರ ಪತ್ರಿಕಾಗೋಷ್ಟಿ ಉದ್ದೇಶಿಸಿ ಮಾತನಾಡಿರುವ ಅವರು, ಔರಾದ ಪಟ್ಟಣದ ಬಸವನವಾಡಿ ತಾಂಡಾ ಸರ್ವೆ ನಂ183 ಯಲ್ಲಿ ವಾಸಿಸುತ್ತಿರುವ ತಾಂಡಾ ನಿವಸಿಗರ ಆಸ್ತಿ ನಿವೇಶನ ಮನೆಗಳನ್ನು ಸಕ್ರಮಗೊಳಿಸಲು ವಿಫಲಾರಾಗಿರ್ಧಧುಖುವಿಮಧ್ಯಊ.

ಆಗಸ್ಟ್ 18 ಹಾಗೂ 19ರಂದು ಎರಡು ದಿವಸಗಳ ಕಾಲ ಮೂಲಭೂತ ಸೌಕರ್ಯ ಹಾಗೂ ಈ ಖಾತಾ ನಕಲು ಪಡೆಯಲು 9 ಶಾಂಡಾಗಳ ಬೇಡಿಕೆ ಈಡೇರಿಸುವಂತೆ ಉಪವಾಸ ಸತ್ಯಾಗ್ರಹ ಹಮ್ಮಿಕೊಳ್ಳಲಾಗಿತ್ತು. ಬಸವನವಾಡಿ ತಾಂಡಾ ನಿವಾಸಿಗರು 3–4 ತಲೇಮಾರಿಯಿಂದ ವಾಸಿಸುತ್ತಿರುವ ತಾಂಡಾ ನಿವಾಸಿಗರ ನಿವೇಶನಗಳ ಭೂಮಿಯನ್ನು ಸಕ್ರಮಗೊಳಿಸಲು ವಿಳಂಬನೀತಿ ಅನುಸರಿಸಲಾಗುತ್ತಿದೆ ಇಲ್ಲಿಯ ನಿವಾಸಿಗರು 03 ವರ್ಷಗಳ ಹಿಂದೆ ಭೂಮಿಯನ್ನು ಸಕ್ರಮಗೊಳಿಸಲು ಒಟ್ಟು 111 ಫಲಾನುಭವಿಗಳು ಆನ್ಲಾಯಿನ್ ಮೂಲಕ ಅರ್ಜಿ ಸಲ್ಲಿಸಿದ್ದರು. ಆದರೆ ಉದ್ದೇಶಪೂರ್ವಕವಾಗಿ ಗ್ರಾಮ ನಿವೇಶನ ಮಂಜುರಾತಿ ಪ್ರಮಾಣ ಪತ್ರ ನೀಡಿರುವುದಿಲ್ಲ. ಸಂಭದಪಟ್ಟ ಅಧಿಕಾರಿಗಳು ಮಲತಾಯಿ ಧೋರಣೆ ಅನುಸರಿಸುತ್ತಿದ್ದಾರೆ.

ಬಸವನವಾಡಿ ತಾಂಡಾವನ್ನು ಹೋರತುವಡಿಸಿ ತಾಲುಕಿನ ವೀವಿಧ ಗ್ರಾಮಗಳಲ್ಲಿ ಅಕ್ರಮ ಸಕ್ರಮ ನಿವೇಶನ ಮಂಜುರಾತಿ ಪ್ರಮಾಣಪತ್ರ ನೀಡಲಾಗಿದೆ. 2024ರ ಫೆರಬ್ರವರಿ 26ರಂದು ಎಕಲಾರ ಗ್ರಾಮದ ತಾಂಡಾ ನಿವಾಸಿಗರಿಗೆ ಅನ್ಲಾಯಿನ್ ಮುಖಾಂತರ ನಿವೇಶನ ಮಂಜುರಾತಿ ಪ್ರಮಾಣಪತ್ರ ವಿಯಮ 108ನ್ನು ಬಳಸಿ ಪ್ರಕಾರ ಪ್ರಮಾಣ ಪತ್ರ ನಿಡಲಾಗಿದೆ.

ಈ ವಿಚಾರವಾಗಿ ಸರ್ಕಾರದ ಪ್ರಧಾನಕಾರ್ಯದರ್ಶಿ ಬೆಂಗಳೂರು ರವರ ಆದೇಶ ಪತ್ರ ಸಂಖ್ಯೆ ಆರ್ ಡಿ152 ಎಲ್ ಜಿಪಿ2020 ದಿನಾಂಕ 08/06/2021 ರಂದು ರಾಜ್ಯದ ನಗರ ಮತ್ತು ಗ್ರಾಮಿಣ ಪ್ರದೇಶದಲ್ಲಿ ಸರ್ಕಾರಿ ಜಮಿನುಗಳಲ್ಲಿ ಅನಅಧಿಕೃತವಾಗಿ ನಿರ್ಮಿಸಿರುವ ವಾಸದ ಮನೆಗಳನ್ನು ಸಕ್ರಮಗೊಳಿಸಲು ಕರ್ನಾಟಕ ಭೂಕಂದಾಯ ಕಾಯ್ದೆ 1964 ರ ಕಲಮ 94 ಸಿ ಮತ್ತು 94 ಸಿ ಸಿ ರ ಅಡಿಯಲ್ಲಿ ಅರ್ಜಿ ಸಲ್ಲಿಸಲು ಕಾಲವಕಾಶ ನಿಡಲಾಗಿತ್ತು ಇದರಂತೆ ಸರ್ಕಾರ ಅಧಿಸೂಚನೆ ಕರ್ನಾಟಕ ರಾಜ್ಯ ಪತ್ರ ಸಂಪುಟ 156 ರಲ್ಲಿ ಪ್ರಕಟಗೊಂಡಿರುತ್ತದೆ. ಸರ್ಕಾರ ಅನಅಧಿಕೃತ ನಿರ್ಮಾಣಿಸಿರುವ ಮನೆಗಳನ್ನು ಸಕ್ರಮಗೊಳಿಸಲು ಆದೇಶ ನೀಡಿದ್ದರು ಕೂಡ ಸಂಬಂಧಪಟ್ಟ ಅಧಿಕಾರಿಗಳು ಸ್ಪಂದಿಸಲಿಲ್ಲ. ಇದರಿಂದ ಫಲಾನುಭವಿಗಳು ಈ ಯೋಜನೆಯಿಂದ ವಂಚಿತರಾಗಿದ್ದಾರೆ.

ನಿವಾಸಿಗರ ವಿಳಾಸ ಇನ್ನಿತರ ಮೂಲನಿವೇಶನದ ದಾಖಲಾತಿಗಳು ಇರಲಾರದ ಕಾರಣಕ್ಕೆ ಸರ್ಕಾರದ ಯೋಜನೆಗಳಿಂದ ವಂಚಿತರಾಗುತ್ತಿರುವರು. ಈ ವಿಚಾರವಾಗಿ ಆಗಸ್ಟ್ 18 ಹಾಗೂ 19ರಂದು ನಾವು ಧರಣೆಕೈಗೊಂಡ ಸ್ಥಳಕ್ಕೆ ಔರಾದ್

ತಹಸಿಲ್ದಾರರು ಹಾಗೂ ಔರಾದ್ ಪಟ್ಟಣ ಪಂಚಾಯತ ಮುಖ್ಯಾಧಿಕಾರಿಗಳು ಬಂದು ಲಿಖಿತ ರೂಪದಲ್ಲಿ ನಮ್ಮೆಲ್ಲ ಸಮಸ್ಯೆಗಳನ್ನು ಬಗೆಹರಿಸುವುದಾಗಿ ಬರೆದುಕೊಟ್ಟಿದ್ದರು. ಭರವಸೆ ನೀಡಿ ಮೂರುತಿಂಗಳಾದರೂ ಯಾವುದೇ ಕ್ರಮವಹಿಸದೇ ನಮಗೆ ಅನ್ಯಾಯ ಎಸಗಿದ್ದಾರೆ ಎಂದು ಹರಿಹೈದರು.

ಈ ವಿಚಾರವಾಗಿ ಮಾಜಿ ಸಚಿವರು ಹಾಗೂ ಹಾಲಿ ಶಾಸಕರಾದ ಪ್ರಭು ಚವ್ಹಾಣ ಅವರಿಗೂ ಈ ವಿಚಾರವಾಗಿ ಮನವರಿಕೆ ಮಾಡಿದಾಗಲೂ ಯಾವುದೇ ಕ್ರಮ ವಹಸದೇ ಇರುವುದು ವಿಪರ್ಯಾಸ. ವಿಶೇಷವಾಗಿ ಬಸವನವಾಡಿ ತಾಂಡಾ ಸಂಪೂರ್ಣವಾಗಿ ಸರ್ಕಾರಿ ಜಮಿನು ಆಗಿರುವುದರಿಂದ ಇದು ತಹಸಿಲ್ದಾರರ ವ್ಯಾಪ್ತಿಗೆ, ಉಳಿದ 11 ತಾಂಡಾಗಳು ಪುರಸಭೆ ವ್ಯಾಪ್ತಿಗೊಳಪಡುತ್ತವೆ. ನಮ್ಮ 12 ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ, ಜಿಲ್ಲಾಧಿಕಾರಿಗಳು, ಸರ್ಕಾರದ ಮುಖ್ಯ ಕಾರ್ಯದರ್ಶಿ, ಜಿಲ್ಲಾ ನಗರಾಭಿವೃದ್ಧಿಕೋಶದ ಯೋಜನಾ ನಿರ್ದೇಶಕರಿಗೆ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನ ಆಗಲಿಲ್ಲ. ಇದರಿಂದ ಪುರಸಭೆ ಮುಖ್ಯಾಧಿಕಾರಿ ಹಾಗೂ ಡಿ.ಯು.ಡಿ.ಸಿ.ಪಿ. ಡಿ ಇಬ್ಬರು ಈ ಅಕ್ರಮದಲ್ಲಿ ಶಾಮಿಲಾಗಿದ್ದಾರೆ ಎಂಬುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಇ ಖಾತಾ ನೀಡಲು 25 ಸಾವಿರ ಲಂಚ ಪಡೆಯುತ್ತಿದ್ದಾರೆ. ಬಸವನವಾಡಿ ತಾಂಡಾ ನಿವಾಸಿಗಳಿಗೆ ಹಕ್ಕು ಪತ್ರ ನೀಡದೇ ಅನ್ಯಾಯ ಎಸಗುತ್ತಿದ್ದಾರೆ.

ಈ ಎಲ್ಲ ಬೆಳವಣಿಗೆಗಳನ್ನು ಗಮನದಲ್ಲಿರಿಸಿ ನ.17 ಅಕ್ರಮ ನಿವೇಶನಗಳನ್ನು ಸಕ್ರಮ ಮಾಡಿಕೊಟ್ಟು ಇ ಖಾತಾ ಪ್ರಮಣ ಪತ್ರ ನೀಡಲು ಅಚಿತಿಮ ಗಡುವು ನೀಡಲಾಗಿದೆ. ಇದನ್ನು ಮೀರಿದರೆ ಮರುದಿವಸ ಅಂದರೆ ನ.18 ರಂದು ಪ್ರತಿಭಟನೆ ಹಮ್ಮಿಕೊಲ್ಲಲು ತಿರ್ಮಾನಿಸಲಾಗಿದೆ ಎಂದರು.

ಭೀಮರಾವ ರಾಠೋಡ್, ಸಂಜು ಚವ್ಹಾಣ, ದಿನೇಶ ರಠೋಡ್, ರಾಹುಲ ಚವ್ಹಾಣ, ಸುಧಾಕರ್ ರಠೋಡ್ ಹಾಗೂ ಇತರರು ಪತ್ರಿಕಾಗೋಷ್ಟಿಯಲ್ಲಿದ್ದರು.

## ಜಾತ್ರಾ ಮಹೋತ್ಸವದಲ್ಲಿ ಶಾಸಕ ಚವ್ಹಾಣ ಹೆಜ್ಜೆ ಹಾಕಿ ಸಂಭ್ರಮಿಸಿದರು



ಮಲ್ಲಮ್ಮ ನುಡಿ ವಾರ್ತೆ

ಕಮಲನಗರ: ಶಾಸಕರಾದ ಪ್ರಭು ಬಿ.ಚವ್ಹಾಣ ಅವರು ತಾಲೂಕಿನ ಹೊಳಸಮುದ್ರ ಗ್ರಾಮದಲ್ಲಿ ನಡೆಯುತ್ತಿರುವ ಹರಿನಾಥ ಮಹಾರಾಜರ ಜಾತ್ರಾ ಮಹೋತ್ಸವದಲ್ಲಿ ಶುಕ್ರವಾರ ಪಾಲ್ಗೊಂಡರು ಹೆಜ್ಜೆ ಹಾಕಿ ಭಕ್ತರು ಗಮನ ಸೆಳೆದರು.

ಈ ವೇಳೆ ಮಾತನಾಡಿದ ಶಾಸಕರು, ಶಾಂತಿ ಮತ್ತು ಸೌಹಾರ್ದತೆಯ ಪ್ರತಿಪಾದಕರಾಗಿದ್ದ ಹರಿನಾಥ ಮಹಾರಾಜರ ಮಹಿಮೆಗಳು ಅಪಾರ. ಕಷ್ಟವೆಂದು ಇಲ್ಲಿಗೆ ಬರುವ ಭಕ್ತರ ಇಷ್ಟಾರ್ಥಗಳು ತೀರುತ್ತವೆ. ಪೂಜ್ಯರ ಸಮಾಧಿಗೆ ನಮಿಸಿದರೆ ಒಳ್ಳೆಯದಾಗುತ್ತದೆ. ನೂರಾರು ವರ್ಷಗಳ ಇತಿಹಾಸ ಹೊಂದಿರುವ ಈ ಕ್ಷೇತ್ರಕ್ಕೆ ಲಕ್ಷಾಂತರ ಭಕ್ತರು ಆಗಮಿಸಿ ದರ್ಶನ ಪಡೆಯುತ್ತಾರೆ ಎಂದರು.

ಸದ್ಗುರು ಹರಿನಾಥ ಮಹಾರಾಜರ ಸಮಾಧಿಗೆ ಪೂಜೆ ನೆರವೇರಿಸಿ ರೈತರ ಏಳಿಗೆ ಮತ್ತು ಔರಾದ (ಬಿ) ಕ್ಷೇತ್ರದ ಸಮೃದ್ಧಿಗಾಗಿ ಪ್ರಾರ್ಥನೆ ಸಲ್ಲಿಸಿದರು. ಇದೇ ವೇಳೆ ಭಜನಾ ಕಲಾವಿದರ ಜೊತೆಗೆ ಭಕ್ತಿ ಭಾವದಿಂದ ಹೆಜ್ಜೆ ಹಾಕಿ ಗಮನ ಸೆಳೆದರು.

ನಾನು ಸದ್ಗುರು ಹರಿನಾಥ ಮಹಾರಾಜರ ಭಕ್ತನಾಗಿದ್ದು, ಪ್ರತಿ ವರ್ಷ ಜಾತ್ರಾ ಮಹೋತ್ಸವದಲ್ಲಿ ಬಂದು ಮಹಾರಾಜರ ಸನ್ನಿಧಿಗೆ ನಮಿಸುತ್ತೇನೆ. ಮೊದಲ ಚುನಾವಣೆಗೂ ಮುನ್ನ ಇಲ್ಲಿಗೆ ಭೇಟಿ ನೀಡಿದ್ದೆ. ಸದ್ಗುರು ಹರಿನಾಥ ಮಹಾರಾಜರ ಕೃಪೆ ಮತ್ತು ಕ್ಷೇತ್ರದ ಮಹಾಜನತೆಯ ಆಶೀರ್ವಾದದಿಂದ ಸಚಿವನಾಗಿ, ಶಾಸಕನಾಗಿ ಜನಸೇವೆ ಮಾಡಲು ಸಾಧ್ಯವಾಗಿದೆ. ಇಲ್ಲಿನ ಜನರು ಸಾಕಷ್ಟು ಪ್ರೀತಿ ನೀಡಿದ್ದಾರೆ. ಅದರಂತೆ ಹೊಳಸಮುದ್ರವನ್ನು ಸ್ವಂತ ಗ್ರಾಮವೆಂದು ಭಾವಿಸಿ ಕೆಲಸ ಮಾಡುತ್ತಿದ್ದೇನೆ ಎಂದರು.

ಗ್ರಾಮದ ಮುಖಂಡರಾದ ಅನಂತ ಕದಮ್ ಮಾತನಾಡಿ, ಸದ್ಗುರು ಹರಿನಾಥ ಮಹಾರಾಜರ ಪರಮ ಭಕ್ತರಾಗಿರುವ ಶಾಸಕರು ದೇವಸ್ಥಾನ ಮತ್ತು ಗ್ರಾಮದ ಅಭಿವೃದ್ಧಿಗೆ ಸಾಕಷ್ಟು ಕೆಲಸ ಮಾಡಿದ್ದಾರೆ. ಗ್ರಾಮವನ್ನು ಸುವರ್ಣ ಗ್ರಾಮ ಯೋಜನೆಯಡಿ ಆಯ್ಕೆ ಮಾಡಿ ನಾನಾ ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದಾರೆ, ಮಂದಿರದಲ್ಲಿ ಶೆಡ್ ಹಾಗೂ ಮತ್ತಿತರೆ ಕೆಲಸಗಳನ್ನು ಮಾಡಿದ್ದಾರೆ.

ಗ್ರಾಮದಲ್ಲಿ ಶಾಲೆ, ಆಸ್ಪತ್ರೆ, ಪಶು ಆಸ್ಪತ್ರೆ, ರಸ್ತೆ, ಬ್ಯಾರೇಜ್‌ಗಳ ನಿರ್ಮಾಣ, ಶಿವಾಜಿ ಮಹಾರಾಜರ ಪ್ರತಿಮೆ ನಿರ್ಮಾಣಕ್ಕೆ ಸಹಕಾರ ಸೇರಿದಂತೆ ಗ್ರಾಮಸ್ಥರ ಎಲ್ಲ ಬೇಡಿಕೆಗಳನ್ನು ಈಡೇರಿಸಿದ್ದಾರೆ. ಹೊಳಸಮುದ್ರ–ಕೊಟಗ್ಯಾಳ ಮತ್ತು ಹೊಳಸಮುದ್ರ–ಅಶೋಕನಗರ ರಸ್ತೆಗಳನ್ನು ನಿರ್ಮಿಸುವುದು ಅತ್ಯಂತ ಅವಶ್ಯಕತೆಯಿದೆ ಎಂದು ಶಾಸಕರ ಗಮನಕ್ಕೆ ತಂದರು.

ಗ್ರಾಮಸ್ಥರ ಮನವಿಗೆ ಸ್ಪಂದಿಸಿದ ಶಾಸಕರು, ಸದ್ಗುರು ಹರಿನಾಥ ಮಹಾರಾಜರ ಮಂದಿರ ಹಾಗೂ ಗ್ರಾಮದ ಸಮಗ್ರ ಅಭಿವೃದ್ಧಿಗೆ ನಿರಂತರ ಕೆಲಸ ಮಾಡುತ್ತಿದ್ದು, ಗ್ರಾಮಸ್ಥರ ಎಲ್ಲ ಬೇಡಿಕೆಗಳನ್ನು ಹಂತ ಹಂತವಾಗಿ ಈಡೇರಿಸುವೆ ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಮುಖಂಡರಾದ ರಾಮಶೆಟ್ಟಿ ಪನ್ನಾಳೆ, ಧೊಂಡಿಬಾ ನರೋಟೆ, ಕಿರಣ ಪಾಟೀಲ, ಬಾಬುರಾವ ತೋರ್ಣಾವಾಡಿ, ಶಿವಾನಂದ ವಡ್ಡೆ, ನಾಗೇಶ ಪತ್ರೆ, ಸಂತೋಷ ಸೋಲಾಪೂರೆ, ಪ್ರವೀಣ ಕಾರಬಾರಿ, ಉದಯ ಸೋಲಾಪೂರೆ, ಬಂಟಿ ರಾಂಪೂರೆ, ಪವನ ನಿಡೋದಾ, ಭರತ ಕದಂ, ಅಶೋಕ ಮೇತ್ರೆ, ರಾಹುಲ ಪಾಟೀಲ, ವಿಷ್ಣು ರುದ್ನೂರೆ, ಮಾರುತಿ ಅಳಂದೆ, ಅನೀಲ ಶಿಂಧೆ, ಜ್ಞಾನೇಶ್ವರ ಪಾಟೀಲ ಸೇರಿದಂತೆ ಇತರರು ಉಪಸ್ಥಿತರಿದ್ದರು.



**ಕಲಬುರಗಿ: ನಗರದ ಜಿಲ್ಲಾ ಪಂಚಾಯಿತಿ ಹೋಸ ಸಭಾಗಂಣದಲ್ಲಿ ಜಿಲ್ಲಾ ಪಂಚಾಯತ ಕಲಬುರಗಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಕಲಬುರಗಿ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ ಸಹಯೋಗದೊಂದಿಗೆ ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆ ಕಾರ್ಯಕ್ರಮದಲ್ಲಿ ಜಿಲ್ಲಾ.ಪಂಚಾಯಿತಿ ಸಿಇಒ ಭಂವರ್‌ಸಿಂಗ್ ಮಿನಾ ಅವರು ಮಾತನಾಡಿದರು. ಡಿಡಿಪಿಐ ಸೂರ್ಯಕಾಂತ ಮದನೆ, ಶಿಕ್ಷಣ ಅಧಿಕಾರಿ ಶೆಂಕ್ರಮ್ಮಾ ಢವಳಗಿ, ವಿಜಯಲಕ್ಷ್ಮೀ ಕಟಕೆ, ಸುಮಂಗಲ, ರಾಜು, ಸೇರಿದಂತೆ ಇತರರು ಇದ್ದರು.**

## ಸರ್ಕಾರ ಟನ್‌ಗೆ 3500 ರೂ. ಘೋಷಿಸಲು: ನಿಲ್ಲದ ರೈತರ ಹೋರಾಟ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ, ನ.7 – ಕಬ್ಬಿನ ಬಾಕಿ ಬಿಲ್ ನೀಡಬೇಕು, ಪ್ರಸಕ್ತ ಸಾಲಿಗೆ ಪ್ರತಿ ಟನ್‌ಗೆ 3500 ರೂ. ಘೋಷಣೆ ಮಾಡಬೇಕು ಎಂದು ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ, ಕಬ್ಬು ಬೆಳೆಗಾರರ ಸಂಘದ ನೇತೃತ್ವದಲ್ಲಿ ಬಾಗಲಕೋಟೆ ಜಿಲ್ಲೆಯಾದ್ಯಂತ ನಡೆಯುತ್ತಿರುವ ಹೋರಾಟ ಎಲ್ಲೆಡೆ ವ್ಯಾಪಿಸಿದ್ದು, ಶುಕ್ರವಾರವೂ ಮುಂದುವರೆದಿದೆ.



ಶುಕ್ರವಾರ ಜಿಲ್ಲೆಯ ಮುಧೋಳ, ಜಮಖಂಡಿ, ಲೋಕಾಪೂರ, ಗದ್ದನಕೇರಿ ಕ್ರಾಸ್, ಕಮತಗಿ, ಸಂಗಮಕ್ರಾಸ್ ಸೇರಿದಂತೆ ವಿವಿಧೆಡೆ ರಸ್ತೆ ತಡೆ, ಹೆದ್ದಾರಿ ತಡೆ ನಡೆಸಿರುವ ರೈತರು, ಟಾಯರಗೆ ಬೆಂಕಿ ಹಚ್ಚಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಸರ್ಕಾರ, ಕಾರ್ಖಾನೆ ಮಾಲೀಕರು ರೈತರ ಮೇಲೆ ದಬ್ಬಾಳಿಕೆ ನಡೆಸುತ್ತಿವೆ. ಎಲ್ಲ ವಸ್ತುಗಳ ಬೆಲೆ ಏರಿಕೆಯಾದರೂ ರೈತರು ಬೆಳೆದ ಬೆಳೆಗಳಿಗೆ ಸೂಕ್ತ ಬೆಲೆ ಸಿಗುತ್ತಿಲ್ಲ ಎಂದು ದೂರಿದ ರೈತ ಪ್ರತಿಭಟನಾಕಾರರು, ಕಬ್ಬಿಗೆ ಈ ಸಾರಿ 3500 ರೂ. ಬೆಲೆ ಕೊಡಲೇಬೇಕು ಎಂದು ಆಗ್ರಹಿಸಿದರು.

ಜಿಲ್ಲೆಯ ಹುನಗುಂದ ತಾಲೂಕಿನ ಕಮತಗಿ ಕ್ರಾಸ್ ಬಳಿ ಯರಾಯಚೂರು-ಬೆಳಗಾವಿ ರಸ್ತೆ ಬಂದ್ ಮಾಡಿ ರೈತರು ಪ್ರತಿಭಟನೆ ನಡೆಸಿದರು. ಇದರಿಂದಾಗಿ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಪ್ರತಿಭಟನೆಗೆ ಇಳಕಲ್ ನ ಗುರುಮಹಾಂತಸ್ವಾಮೀಜಿ, ಕಮತಗಿ ಹೊಳೆಹುಚ್ಚೇಶ್ವರ ಶ್ರೀಗಳು ಸೇರಿದಂತೆ ಅನೇಕ ಮಠಾಧೀಶರು, ವಿವಿಧ ಸಂಘಟನೆಗಳು ಬೆಂಬಲ ವ್ಯಕ್ತಪಡಿಸಿದವು.

ಈ ಸಂದರ್ಭದಲ್ಲಿ ಮಾತನಾಡಿದ ಕಮತಗಿಯ ಹೊಳೆಹುಚ್ಚೇಶ್ವರ ಸ್ವಾಮೀಜಿ, ಬಹಳ ವರ್ಷಗಳಿಂದ ಕಬ್ಬು ಬೆಳೆಗಾರರ ಹೋರಾಟ ನಡೆಯುತ್ತಿದ್ದರೂ ಅದು ಕೊನೆಯಾಗುತ್ತಿಲ್ಲ. ಪಕ್ಕದ ರಾಜ್ಯಗಳಲ್ಲಿ ಹೆಚ್ಚಿನ ದರ ಕೊಡುತ್ತಿದ್ದರೂ ಕರ್ನಾಟಕದಲ್ಲಿ ಅದು ಸಾಧ್ಯವಾಗುತ್ತಿಲ್ಲವೇಕೆ ಎಂದು ಪ್ರಶ್ನಿಸಿದರು. ಗುರುಮಹಾಂತಸ್ವಾಮೀಜಿ ಮಾತನಾಡಿ, ಸರಕಾರದ ಪ್ರತಿನಿಧಿಗಳು ತಮ್ಮ ಸಂಬಳ ಹೆಚ್ಚಿಸಿಕೊಳ್ಳುತ್ತಾರೆ. ಆದರೆ ರೈತರ ಉತ್ಪನ್ನಗಳಿಗೆ ಸೂಕ್ತ ಬೆಲೆ ಕೊಡುತ್ತಿಲ್ಲ ಎಂದರು.

ಮುಧೋಳ ತಾಲೂಕಿನ ಲೋಕಾಪೂರ ಪಟ್ಟಣದಲ್ಲಿ ಸ್ವಯಂಪ್ರೇರಿತವಾಗಿ ಅಂಗಡಿಕಾರರು ತಮ್ಮ ವ್ಯಾಪಾರ ವಹಿವಾಟು ಬಂದ್ ಮಾಡುವ ಮೂಲಕ ರೈತರ ಹೋರಾಟ ಬೆಂಬಲಿಸಿದರು. ಪಟ್ಟಣದಲ್ಲಿ ಖಾಸಗಿ ಶಾಲಾ, ಕಾಲೇಜುಗಳಿಗೆ ರಜೆ ಘೋಷಿಸಿದ್ದು, ಧಾರವಾಡ–ವಿಜಯಪುರ, ರಾಯಚೂರ–ಬೆಳಗಾವಿ, ಬಾಗಲಕೋಟೆ–ಸಂಕೇಶ್ವರ ರಾಜ್ಯ ಹೆದ್ದಾರಿ ಬಂದ್ ಮಾಡಲಾಗಿತ್ತು.

ಬಾಗಲಕೋಟೆ ಸಮೀಪದ ಗದ್ದನಕೇರಿ ಕ್ರಾಸ್‌ನಲ್ಲಿಯೂ ರೈತ ಸಂಘಟನೆಗಳು ರಾಷ್ಟ್ರೀಯ ಹೆದ್ದಾರಿ ತಡೆದು ಪ್ರತಿಭಟನೆ ನಡೆಸಿದರು. ಬೆಳಗಾವಿ–ರಾಯಚೂರು, ವಿಜಯಪುರ–ಹುಬ್ಬಳ್ಳಿ ಸಂಕರ್ಪ ಕಲ್ಪಿಸುವ ಪ್ರಮುಖ ವೃತ್ತದಲ್ಲಿ ನಡೆದ ಹೋರಾಟದಲ್ಲಿ ವಿವಿಧ ಸಂಘಟನೆಗಳು, ಮಠಾಧೀಶರು, ಮಹಿಳೆಯರು ಪಾಲ್ಗೊಂಡು ಪ್ರತಿಭಟನೆಗೆ ಸಾಥ್ ನೀಡಿದರು. ರೈತರು ಬಾರಕೋಲು ಚಳುವಳಿ ನಡೆಸಿದರು.

## ಗುರು ನಾನಕ ಪಬ್ಲಿಕ್ ಶಾಲೆಯೂ ರೂಬಿಕ್ಸ್ ಕ್ಯೂಬ್ ಸ್ಪರ್ಧೆಯಲ್ಲಿ ವಿಶ್ವದಾಖಲೆ ಸೃಷ್ಟಿ ಮಾಡುವ ಗುರಿ

ಬೀದರ, ನ.07 :– ನಗರದ ನೇಹರು ಸ್ಟೇಡಿಯಂ ಹತ್ತಿರವಿರುವ ಗುರು ನಾನಕ್ ಪಬ್ಲಿಕ್ ಶಾಲೆಯೂ ಸೂವರ್ಣ ಮಹೋತ್ಸವ ಆಚರಿಸುತ್ತಿರುವ ಸಂದರ್ಭದಲ್ಲಿ ಗುರು ನಾನಕ ದೇವ್ ಇಂಜಿನೀಯರಿಂಗ್ ಕಾಲೇಜ್‌ನ ಕ್ರಿಡಾಂಗಣದಲ್ಲಿ ರೂಬಿಕ್ಸ್ ಕ್ಯೂಬ್ ಪರಿಹಾರ ಸ್ಪರ್ಧೆ ವಿಶ್ವ ದಾಖಲೆಯನ್ನು ಪ್ರಯತ್ನಿಸುವ ಮೂಲಕ ಇತಿಹಾಸ ನಿರ್ಮಿಸಲು ಸಜ್ಜಾಗಿದೆ. ಈ ಆದ್ದೂರಿ ಕಾರ್ಯಕ್ರಮವು ಬೀದರಿನ ಗುರು ನಾನಕ ದೇವ್ ಇಂಜಿನೀಯರಿಂಗ್ ಕಾಲೇಜಿನ ಕ್ರೀಡಾಂಗಣದಲ್ಲಿ ನಡೆಯಲಿದೆ. ಕೌಶಲ್ಯ, ಏಕತೆ ಮತ್ತು ಉತ್ಸಾಹದ ರೋಮಾಂಚಕ ಪ್ರದರ್ಶನದಲ್ಲಿ ಸುಮಾರು 5500ರಕ್ಕಿಂತ ಹೆಚ್ಚು ವಿದ್ಯಾರ್ಥಿ–ವಿದ್ಯಾರ್ಥಿನೀಯರು ಭಾಗವಹಿಸಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿ ವಿಶ್ವದಾಖಲೆ ಮಾಡುವ ಗುರಿ ಹೊಂದಲಾಗಿದೆ.



ಈ ಕಾರ್ಯಕ್ರಮವೂ ದಿನಾಂಕ 9–11–2025 ರಂದು ಮುಂಜಾನೆ 10:00 ಗಂಟೆಗೆ ಪ್ರಾರಂಭವಾಗುವುದು. ಇದು ಅತಿದೊಡ್ಡ ಕೂಟಗಳಲ್ಲಿ ಒಂದಾಗಿದೆ, ಆರು ಮುಖಗಳನ್ನು ಒಳಗೊಂಡಿದೆ, ಪ್ರತಿಯೊಂದೂ ವಿಭಿನ್ನ ಬಣ್ಣವನ್ನು ಹೊಂದ್ದು, ಅದನ್ನು ಪರಿಹರಿಸಿ, ಪ್ರತಿ ಮುಖವು ಒಂದೇ ಬಣ್ಣವಾಗಿ ಮಾಡಬೇಕಾಗಿದೆ. ಇದು ವಿಶ್ವದ ಅತ್ಯಂತ ಜನಯ ಮತ್ತು ಗುರುತಿಸಬಹುದಾದ ಆಟಿಕೆಗಳಲ್ಲಿ ಒಂದಾಗಿದೆ. ವಿದ್ಯಾರ್ಥಿಗಳಲ್ಲಿ ಸಮಸ್ಯೆ ಪರಿಹಾರ, ವಿಮರ್ಶಾತ್ಮಕ ಚಿಂತನೆ ಮತ್ತು ಮಾನಸಿಕ ಚುರುಕುತನವನ್ನು ಉತ್ತೇಜಿಸುತ್ತದೆ ಎಂದು ಶಾಲೆಯ ಪ್ರಾಂಶುಪಾಲೆ ಶ್ರೀಮತಿ ನಲಿನಿ ಡಿ.ಜಿ. ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ಕಾರ್ಯಕ್ರಮದ ವೀಕ್ಷಣೆಗಾಗಿ ಗಿನ್ನಿಸ್ ವಿಶ್ವದಾಖಲೆಯ ಮುಖ್ಯ ಅತಿಥಿಗಳು ಮತ್ತು ಸದಸ್ಯರುಗಳು ಭಾಗವಹಿಸಲಿದ್ದಾರೆ.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.
PRGI NO. 120927
(RNINO:KARKAN/2011/48371)